ಕರ್ನಾಟಕ ವಿಧಾನ ಸಭೆ

ಬೆಳಗಾವಿ ಅಧಿವೇಶನ

ಹದಿಮೂರನೇ ವಿಧಾನಸಭೆ

ಎರಡನೇ ಅಧಿವೇಶನ

ಶನಿವಾರ ದಿನಾಂಕ 17 ನೇ ಜನವರಿ 2009 ರಂದು

ಸದನವು ಡಾ|| ಬಿ.ಎಸ್.ಜೀರಿಗೆ ಹಾಲ್, ಜೆನ್‌ಎಂಸಿ ಮೆಮೋರಿಯಲ್ ಆಡಿಟೋರಿಯಮ್‌ನಲ್ಲಿ ಬೆಳಿಗ್ಗೆ 10.40 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು ಶ್ರೀ/ಶ್ರೀಮತಿ ಜಗದೀಶ್ ಶೆಟ್ಟರ್ ರವರು ಪೀಠವನ್ನು ಅಲಂಕರಿಸಿದ್ದರು.

1. ಸಂತಾಪ ಸೂಚನೆ

ಮಾಜಿ ಪ್ರಧಾನ ಮಂತ್ರಿ ಶ್ರೀ ವಿಶ್ವನಾಥ್ ಪ್ರತಾಪಸಿಂಗ್ ಮತ್ತಿತರ ಗಣ್ಯರ ನಿಧನದ ಬಗ್ಗೆ.

ಮಾನ್ಯ ಸಭಾಧ್ಯಕ್ಷರು :-

ಭಾರತದ ಮಾಜಿ ಪ್ರಧಾನಮಂತ್ರಿಗಳಾಗಿದ್ದ ಶ್ರೀ ವಿಶ್ವನಾಥ್ ಪ್ರತಾಪ್‌ಸಿಂಗ್, ವಿಧಾನಸಭೆಯು ಹಾಲಿ ಸದಸ್ಯರಾಗಿದ್ದ ಶ್ರೀ ಎಂ.ಎಸ್.ಸಿದ್ದರಾಜು, ಮಾಜಿ ಸಚಿವರಾಗಿದ್ದ ಪ್ರೊ. ಎ. ಲಕ್ಷ್ಮಿಸಾಗರ್, ಶ್ರೀ ಮೆರಾಜುದ್ದೀನ್ ಎನ್. ಪಟೇಲ್, ಶ್ರೀ ವಿಶ್ವಾನಾಥ್ ರೆಡ್ಡಿ ಮುದ್ನಾಳ್ ಹಾಗೂ ಶ್ರೀ ಹೆಚ್.ಎನ್.ನಂಜೇಗೌಡ, ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಪಿ.ಆಂಜಿನಪ್ಪ, ಶ್ರೀ ಬಿ.ಹೆಚ್.ಯಂಕನಾಯಕ್, ಶ್ರೀ ಮಾಣಿಕ್ ರಾವ್ ಪುಲೇಕರ್, ಶ್ರೀ ಎಂ.ಆರ್. ಪಾಟೀಲ್, ಶ್ರೀ ಎಲ್.ಎಸ್.ನಾಯಕ್, ಶ್ರೀ ರುದ್ರಗೌಡ ಹುಣಸೀಹಾಳ್, ಶ್ರೀ ಎಂ.ಶ್ರೀನಿವಾಸ್ ಹಾಗೂ ಶ್ರೀ ಮೋಹನ್‌ಕೃಷ್ಣ ಶೆಟ್ಟಿ, ಲೋಕಸಭಾ ಸದಸ್ಯರಾದ ಶ್ರೀ ಡಿ.ಸಿ.ಶ್ರೀಕಂಠಪ್ಪ ಹಾಗೂ ಶ್ರೀ ಬಿ.ವಿ.ನಾಯಕ್ ಅವರುಗಳು ನಿಧನ ಹೊಂದಿರುವುದನ್ನು ಹಾಗೂ ಮುಂಬೈನಲ್ಲಿ

ಭದ್ರತಾ ಪಡೆಯ ಕೆಲವು ಅಧಿಕಾರಿಗಳು ಹಾಗೂ ಅಮಾಯಕರು ಉಗ್ರರ ಗುಂಡಿಗ ಬಲಿಯಾದ ಬಗ್ಗೆ ಈ ಸದನವು ಅತ್ಯಂತ ವಿಷಾದವನ್ನು ವ್ಯಕ್ತಪಡಿಸುತ್ತದೆ.

ಶ್ರೀ ವಿಶ್ವನಾಥ್ ಪ್ರತಾಪ್‌ಸಿಂಗ್

ಭಾರತದ ಮಾಜಿ ಪ್ರಧಾನಿಗಳಾಗಿದ್ದ ಶ್ರೀ ವಿಶ್ವನಾಥ್ ಪ್ರತಾಪ್‌ಸಿಂಗ್‌ರವರು 1931ನೇ ಜೂನ್ 25 ರಂದು ಉತ್ತರ ಪ್ರದೇಶದ ಅಲಹಾಬಾದಿನಲ್ಲಿ ಜನಿಸಿದ್ದು, ವಿಜ್ಞಾನ ಹಾಗೂ ಕಾನೂನು ಪದವಿ ಪಡೆದಿದ್ದರು. ರಾಜ ಮನೆತನದಲ್ಲಿ ಹುಟ್ಟಿದ್ದ ಶ್ರೀಯುತರು ಛಾಯಾಗ್ರಹಣ, ಬಣ್ಣದಿಂದ ಚಿತ್ರ ಬಿಡಿಸುವ ಹವ್ಯಾಸವನ್ನು ಹೊಂದಿದ್ದರು. ವಿದ್ಯಾರ್ಥಿ ಜೀವನದ ನಂತರ 1957ರ ಆಚಾರ್ಯ ವಿನೋಬಾ ಭಾವೆಯವರ ಭೂದಾನ ಚಳವಳಿಯಿಂದ ಪ್ರೇರೇಪಿತರಾಗಿ ರಾಜಮನೆತನಕ್ಕೆ ಸೇರಿದ ನೂರಾರು ಎಕರೆ ಜಮೀನನ್ನು ದಾನವಾಗಿ ನೀಡಿದ್ದರು. ಅಲಹಾಬಾದ್ ಜಿಲ್ಲೆಯಲ್ಲಿ ಗೋಪಾಲ್ ವಿದ್ಯಾಲಯ ಎಂಬ ಹೆಸರಿನಲ್ಲಿ ಪದವಿ ಮಟ್ಟದ ವಿದ್ಯಾಸಂಸ್ಥೆಯನ್ನು ಸ್ಥಾಪಿಸಿದ್ದಾರೆ. ಪಂಡಿತ್ ನೆಹರು ಅವರ ಕಾಲದಲ್ಲಿಯೇ ಕಾಂಗ್ರೆಸ್ ಪಕ್ಷದ ಸಾಮಾನ್ಯ ಕಾರ್ಯಕರ್ತರಾಗಿ ಸಕ್ರಿಯ ರಾಜಕಾರಣಕ್ಕೆ ಬಂದ ಶ್ರೀಯುತರು, ಅಲಹಾಬಾದ್ ಸ್ಥಳೀಯ ಸಂಸ್ಥೆ ಚುನಾವಣೆಯನ್ನು ಎದುರಿಸಿದ್ದರು. 1967ರಲ್ಲಿ ಪ್ರಥಮ ಬಾರಿಗೆ ಉತ್ತರ ಪ್ರದೇಶ ವಿಧಾನಸಭಾ ಸದಸ್ಯರಾಗಿ, ನಂತರ 1971ರಲ್ಲಿ ಪ್ರಥಮ ಬಾರಿಗೆ ಲೋಕಸಭಾ ಸದಸ್ಯರಾಗಿ ಚುನಾಯಿತರಾಗಿದ್ದರು. ಶ್ರೀಮತಿ ಇಂದಿರಾಗಾಂಧಿಯವರ ಸಂಪುಟದಲ್ಲಿ ವಾಣಿಜ್ಯ ಮಂತ್ರಿಯಾಗಿ ನೇಮಕಗೊಂಡು ಕಾರ್ಯನಿರ್ವಹಿಸಿದ್ದ ಶ್ರೀಯುತರು 1980ರಲ್ಲಿ ಉತ್ತರ ಪ್ರದೇಶದ ಮುಖ್ಯಮಂತ್ರಿಗಳಾಗಿದ್ದರು. 1983ರಲ್ಲಿ ಪುನಃ ಶ್ರೀ ರಾಜೀವ್ ಗಾಂಧಿಯವರ ಸರ್ಕಾರದಲ್ಲಿ ಹಣಕಾಸು ಮಂತ್ರಿಯಾಗಿ ಹಾಗೂ ರಕ್ಷಣಾ ಸುಲಭ ನಿಯಮ ರೂಪಿಸಿದ್ದರು. ಬೋಫೋರ್ಸ್ ಫಿರಂಗಿ ಹಗರಣದ ವಿರುದ್ಧ ತನಿಖೆಗೆ ಮುಂದಾದಾಗ ಸಂಪುಟದಿಂದ ಹಾಗೂ ಕಾಂಗ್ರೆಸ್ ಪಕ್ಷದಿಂದ ಹೊರಬಂದರು. ನಂತರ ಜನತಾದಳದ ಪ್ರಥಮ ಅಧ್ಯಕ್ಷರಾಗಿ 1989ರಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಕಮ್ಯುನಿಸ್ಟ್ ಹಾಗೂ ಭಾರತೀಯ ಜನತಾ ಪಕ್ಷದ ಬಾಹ್ಯ ಬೆಂಬಲ ಪಡೆದು ಮೈತ್ರಿ ಸರ್ಕಾರದ ಮೊದಲ ಪ್ರಧಾನ ಮಂತ್ರಿಗಳಾದರು. ರಾಷ್ಟ್ರದ ಇತಿಹಾಸದಲ್ಲೇ ಹಣಬಲ, ಅಧಿಕಾರಬಲವಿಲ್ಲದ ಹಿಂದುಳಿದ ವರ್ಗದ ಜನರಿಗೆ ಶಿಕ್ಷಣ ಹಾಗೂ ಉದ್ಯೋಗದಲ್ಲಿ ಮೀಸಲು ಕಲ್ಪಿಸುವಂತೆ ಸಲಹೆ ನೀಡಿದ್ದ ಮಂಡಲ್ ಆಯೋಗದ ವರದಿಯನ್ನು ತೀವ್ರ ವಿರೋಧದ ನಡುವೆಯು ಜಾರಿಗೆ ತಂದ ಧೀಮಂತ ವ್ಯಕ್ತಿ. ಭಾರತದ

ಇತಿಹಾಸದಲ್ಲೊಂದು ಹೊಸ ಅಧ್ಯಾಯವನ್ನೇ ಬರೆದ ಶ್ರೀಯುತರು, "ಮಿಸ್ಟರ್ ಕ್ಲೀನ್" ಎಂಬ ಪಟ್ಟವನ್ನು ಪಡೆದ ಪ್ರಾಮಾಣಿಕ ರಾಜಕಾರಣಿ. ರಾಜಕಾರಣದ ಜೊತೆ ಅವರು ಕವಿ ಮತ್ತು ಕಲಾವಿದರೂ ಸಹ ಆಗಿದ್ದರು. ಶ್ರೀ ಸಿಂಗ್ ಅವರ ನಿಧನದಿಂದ ದೇಶ ಧೀಮಂತ ನಾಯಕನೊಬ್ಬನನ್ನು ಕಳೆದುಕೊಂಡಂತಾಗಿದೆ.

ಶ್ರೀಯುತರು ದಿನಾಂಕ 27-11-2008 ರಂದು ನಿಧನ ಹೊಂದಿದರು.

2. ಶ್ರೀ ಎಂ.ಎಸ್. ಸಿದ್ದರಾಜು

ವಿಧಾನಸಭೆಯ ಹಾಲಿ ಸದಸ್ಯರಾಗಿದ್ದ ಶ್ರೀ ಎಂ.ಎಸ್. ಸಿದ್ದರಾಜುರವರು 1959ನೇ ಮಾರ್ಚ್ 3 ರಂದು ಮಂಡ್ಯ ಜಿಲ್ಲೆ ಮದ್ದೂರಿನಲ್ಲಿ ಜನಿಸಿದ್ದು, ಎಂ.ಎ.ಪದವೀಧರರು. ವೃತ್ತಿಯಲ್ಲಿ ಕೃಷಿಕರಾಗಿದ್ದ ಶ್ರೀಯುತರು ಮದ್ದೂರು ತಾಲ್ಲೂಕು ವ್ಯವಸಾಯ ಸೇವಾ ಸಹಕಾರ ಸಂಘದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು. ಜಿಲ್ಲೆಯ ಹಲವು ಜನಪರ ಚಳವಳಿಗಳಲ್ಲಿ ಸಕ್ರಿಯರಾಗಿದ್ದು ಜನ ಸಾಮಾನ್ಯರ ನಾಯಕ ಎನ್ನುವಂತಾಗಿದ್ದರು. 1997ರಲ್ಲಿ ವಿಧಾನಪರಿಷತ್ತಿನಲ್ಲಿ ಸದಸ್ಯರಾಗಿದ್ದ ಶ್ರೀಯುತರು ಸಮಾಜ ಸೇವೆಯಲ್ಲಿ ಹೆಚ್ಚು ಆಸಕ್ತಿ ಹೊಂದಿದ್ದು, 2008ರಲ್ಲಿ 13ನೇ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಮದ್ದೂರು ಕ್ಷೇತ್ರದಿಂದ ಚುನಾಯಿತರಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ : 12-09-2008 ರಂದು ನಿಧನ ಹೊಂದಿದರು.

3. ಪ್ರೊ॥ ಎ. ಲಕ್ಷ್ಮೀಸಾಗರ್

ವಿಧಾನಸಭೆಯ ಮಾಜಿ ಸದಸ್ಯರು ಹಾಗೂ ಮಾಜಿ ಸಚಿವರಾಗಿದ್ದ ಪ್ರೊ॥ ಎ. ಲಕ್ಷ್ಮೀಸಾಗರ್‌ರವರು ಕೋಲಾರ ಜಿಲ್ಲೆ ಗುಡಿಬಂಡೆ ತಾಲ್ಲೂಕು ಲಕ್ಷ್ಮೀಸಾಗರದಲ್ಲಿ ಜನಿಸಿದ್ದು, ಎಂ.ಎ ಹಾಗೂ ಬಿ.ಎಲ್.ಪದವೀಧರರು. ವೃತ್ತಿಯಲ್ಲಿ ವಕೀಲರು ಹಾಗೂ ಕಾನೂನು ಪ್ರಾಧ್ಯಾಪಕರಾಗಿದ್ದ ಶ್ರೀಯುತರು 1943ರಿಂದ 1958ರವರೆಗೆ ಡಾ॥ ಡಿ.ವಿ.ಗುಂಡಪ್ಪನವರ ಗೋಖಲೆ ಇನ್ಸ್ಟ್ಟ್ಯೂಟ್‌ನ ಸದಸ್ಯರಾಗಿ, 1972ರಿಂದ 1975ರವರೆಗೆ ಬೆಂಗಳೂರು ನಗರಪಾಲಿಕೆಯ ಸದಸ್ಯರಾಗಿ ಹಾಗೂ ತುರ್ತು ಪರಿಸ್ಥಿತಿಯ ಅವಧಿಯಲ್ಲಿ ಸೆರೆಮನೆ ವಾಸವನ್ನು ಅನುಭವಿಸಿದ್ದರು. 1978ರಲ್ಲಿ ಆರನೇ ವಿಧಾನ ಸಭೆಗೆ ಚಿಕ್ಕಪೇಟೆ ಕ್ಷೇತ್ರದಿಂದ ಚುನಾಯಿತರಾಗಿ ವಿರೋಧ ಪಕ್ಷದ ನಾಯಕರಾಗಿದ್ದರು. ಏಳನೇ ವಿಧಾನಸಭೆಗೆ ಮರು ಆಯ್ಕೆಯಾದ ಶ್ರೀಯುತರು ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಕಂದಾಯ ಹಾಗೂ ಸಾರ್ವಜನಿಕ ಕುಂದುಕೊರತೆಗಳ

ಮಂತ್ರಿಯಾಗಿ, 1985ರಲ್ಲಿ ಎಂಟನೇ ವಿಧಾನಸಭೆಗೆ ಆಯ್ಕೆಯಾಗಿ ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ರೇಷ್ಮೆ ಖಾತೆಯ ಮಂತ್ರಿಗಳಾಗಿ ಸೇವೆ ಸಲ್ಲಿಸಿದ್ದಾರೆ. 1996 ರಿಂದ 2002 ರವರೆಗೆ ರಾಜ್ಯಸಭಾ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದ ಶ್ರೀಯುತರು ಹಿಂದುಳಿದ ವರ್ಗಗಳ ಚಳವಳಿಯಲ್ಲಿ ಸಕ್ರಿಯರಾಗಿದ್ದು, ಸಂವಿಧಾನದ 42ನೇ ತಿದ್ದುಪಡಿಯ ಬಗ್ಗೆ ರಾಜ್ಯಾದ್ಯಂತ ಉಪನ್ಯಾಸ ನೀಡಿದ್ದರು.

ಶ್ರೀಯುತರು ದಿನಾಂಕ 12-09-2008 ರಂದು ನಿಧನ ಹೊಂದಿದರು.

4. ಮೆರಾಜುದ್ದೀನ್ ಎನ್. ಪಟೇಲ್

ವಿಧಾನಸಭೆಯ ಮಾಜಿ ಸದಸ್ಯರು ಹಾಗೂ ಮಾಜಿ ಸಚಿವರಾಗಿದ್ದ ಶ್ರೀ ಮೆರಾಜುದ್ದೀನ್ ಎನ್. ಪಟೇಲ್‌ರವರು ಬೀದರ್ ಜಿಲ್ಲೆ ಹುಚಕನಹಳ್ಳಿಯಲ್ಲಿ 1958ನೇ ಮಾರ್ಚ್ 9 ರಂದು ಜನಿಸಿದ್ದು, ಬಿ.ಎಸ್.ಸಿ.(ಕೃಷಿ) ಪದವೀಧರರು. ವೃತ್ತಿಯಲ್ಲಿ ಕೃಷಿಕರಾಗಿದ್ದ ಶ್ರೀಯುತರು ಗ್ರಾಮ ಪಂಚಾಯತ್ ಸದಸ್ಯರಾಗಿ ಹಾಗೂ ಅಧ್ಯಕ್ಷರಾಗಿ, ತಾಲ್ಲೂಕು ವ್ಯವಸಾಯ ಸಹಕಾರ ಸಂಘದ ಅಧ್ಯಕ್ಷರಾಗಿ, ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆ ಸಲಹಾ ಸಮಿತಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು. ಹತ್ತನೇ ವಿಧಾನಸಭೆಗೆ ಹುಮ್ನಾಬಾದ್ ಕ್ಷೇತ್ರದಿಂದ ಚುನಾಯಿತರಾಗಿ ಬಂದೀಖಾನೆ, ಗೃಹ ರಕ್ಷಕ ದಳ ಹಾಗೂ ಸೈನಿಕ ಕಲ್ಯಾಣ ಮತ್ತು ಪೌರಾಡಳಿತ ಖಾತೆಗಳ ರಾಜ್ಯ ಸಚಿವರಾಗಿ, 2004ರಲ್ಲಿ ಅದೇ ಕ್ಷೇತ್ರದಿಂದ ಹನ್ನೆರಡನೇ ವಿಧಾನಸಭೆಗೆ ಚುನಾಯಿತರಾಗಿ ಪಶುಸಂಗೋಪನಾ ಸಚಿವರಾಗಿ ಕಾರ್ಯನಿರ್ವಹಿಸಿರುತ್ತಾರೆ. 2007ರಲ್ಲಿ ಜನತಾದಳ (ಜಾತ್ಯಾತೀತ) ಪಕ್ಷದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿರುತ್ತಾರೆ.

ಶ್ರೀಯುತರು ದಿನಾಂಕ 07-10-2008 ರಂದು ನಿಧನ ಹೊಂದಿದರು.

5. ಶ್ರೀ ವಿಶ್ವನಾಥ್ ರೆಡ್ಡಿ ಮುದ್ನಾಳ್

ಸ್ವಾತಂತ್ರ್ಯ ಹೋರಾಟಗಾರರು, ವಿಧಾನಸಭೆಯ ಮಾಜಿ ಸದಸ್ಯರು ಹಾಗೂ ಮಾಜಿ ಸಚಿವರಾಗಿದ್ದ ಶ್ರೀ ವಿಶ್ವನಾಥ್ ರೆಡ್ಡಿ ಮುದ್ನಾಳ್‌ರವರು ಗುಲ್ಬರ್ಗಾ ಜಿಲ್ಲೆ ಯಾದಗಿರಿಯಲ್ಲಿ 1926ನೇ ಡಿಸೆಂಬರ್ 2 ರಂದು ಜನಿಸಿದ್ದು, ಬಿ.ಎ. ಹಾಗೂ ಎಲ್.ಎಲ್.ಬಿ ಪದವೀಧರರು. ವೃತ್ತಿಯಲ್ಲಿ ಕೃಷಿಕರು ಹಾಗೂ ಸಮಾಜ ಸೇವಕರು ಆಗಿದ್ದ ಶ್ರೀಯುತರು ಹಿರಿಯ ಸ್ವಾತಂತ್ರ್ಯ ಹೋರಾಟಗಾರರು. 1947ರಲ್ಲಿ ನಡೆದ

ಹೈದರಾಬಾದ್ ಆಂದೋಲನದಲ್ಲಿ ಭಾಗವಹಿಸಿ ಸೆರೆಮನೆವಾಸ ಅನುಭವಿಸಿದ್ದರು. ಶಿಶುವಿಹಾರ ಹಾಗೂ ಪ್ರಾಥಮಿಕ ಶಾಲೆಗಳನ್ನು ಸ್ಥಾಪಿಸಿದ್ದ ಶ್ರೀಯುತರು ಅನೇಕ ಸಾಮಾಜಿಕ ಸಂಸ್ಥೆಗಳ ಪದಾಧಿಕಾರಿಗಳಾಗಿದ್ದರು. ಯುವಜನತೆಯ ಪಠ್ಯೇತರ ಚಟುವಟಿಕೆಗಳ ವೃದ್ಧಿಗಾಗಿ ಯುವಜನತೆ ಸಂಸ್ಥೆಯನ್ನು ಸಂಘಟಿಸಿದ್ದರು. ಹೈದರಾಬಾದ್ ಕರ್ನಾಟಕ ಪ್ರದೇಶದ ಹಿರಿಯ ರಾಜಕಾರಣಿಗಳಾದ ಶ್ರೀ ಮುದ್ನಾಳ್‌ರವರು ಅಖಿಲ ಭಾರತ ವೀರಶೈವ ಮಹಾಸಭೆಯ ಹಿರಿಯ ಉಪಾಧ್ಯಕ್ಷರಾಗಿದ್ದರು. ಯಾದಗಿರಿ ಕ್ಷೇತ್ರದಿಂದ ನಾಲ್ಕು, ಐದು, ಏಳು ಹಾಗೂ ಎಂಟನೇ ವಿಧಾನಸಭೆಗೆ ಚುನಾಯಿತರಾಗಿ ಪಶುಸಂಗೋಪನೆ ಹಾಗೂ ಪಶುವೈದ್ಯ ಸೇವೆಗಳ ಹಾಗೂ ತೋಟಗಾರಿಕೆ ಇಲಾಖೆಗಳ ರಾಜ್ಯ ಮಂತ್ರಿಗಳಾಗಿಯೂ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 01-12-2008 ರಂದು ನಿಧನ ಹೊಂದಿದರು.

6. ಶ್ರೀ ಹೆಚ್.ಎನ್. ನಂಜೇಗೌಡ

ವಿಧಾನಸಭೆ ಹಾಗೂ ಲೋಕಸಭೆಯ ಮಾಜಿ ಸದಸ್ಯರು ಹಾಗೂ ಮಾಜಿ ಸಚಿವರಾಗಿದ್ದ ಶ್ರೀ ಹೆಚ್.ಎನ್. ನಂಜೇಗೌಡರವರು ಹಾಸನ ಜಿಲ್ಲೆ ಅರಕಲಗೂಡು ತಾಲ್ಲೂಕು ಹನ್ಯಾಳು ಗ್ರಾಮದಲ್ಲಿ 1935ನೇ ಫೆಬ್ರವರಿ 12 ರಂದು ಜನಿಸಿದ್ದು, ಬಿ.ಎ. ಹಾಗೂ ಎಲ್.ಎಲ್.ಬಿ ಪದವೀಧರರು. ವೃತ್ತಿಯಲ್ಲಿ ವಕೀಲರು ಆಗಿದ್ದ ಶ್ರೀಯುತರು ಗ್ರಾಮೀಣಾಭಿವೃದ್ಧಿ ಆಸಕ್ತಿ ಹೊಂದಿದ್ದರು. ನಾಲ್ಕು ಮತ್ತು ಐದನೇ ವಿಧಾನಸಭೆಗೆ ಅರಕಲಗೂಡು ಕ್ಷೇತ್ರದಿಂದ ಚುನಾಯಿತರಾಗಿ 1972ರಲ್ಲಿ ನೀರಾವರಿ ಸಚಿವರಾಗಿದ್ದರು. 1980 ಹಾಗೂ 1985ರಲ್ಲಿ ಹತ್ತನೇ ವಿಧಾನಸಭೆಗೆ ಬಸವನಗುಡಿ ಕ್ಷೇತ್ರದಿಂದ ಚುನಾಯಿತರಾಗಿ ಸೇವೆ ಸಲ್ಲಿಸಿರುತ್ತಾರೆ. ನೀರಾವರಿ ತಜ್ಞರಾಗಿದ್ದ ಶ್ರೀ ನಂಜೇಗೌಡರವರು ರಾಜ್ಯದ ನೀರಾವರಿ ವಿಚಾರಗಳಲ್ಲಿ ಅತ್ಯಂತ ಪರಿಪೂರ್ಣ ಮಾಹಿತಿಯುನ್ನು ಹೊಂದಿದ್ದರು. ಕಾವೇರಿ ಮತ್ತು ಕೃಷ್ಣ ನದಿ ವಿವಾದಗಳಲ್ಲಿ ಅಧಿಕೃತವಾಗಿ ಮಾತನಾಡುತ್ತಿದ್ದ ಶ್ರೀಯುತರು ಎಲ್ಲಾ ಪಕ್ಷಗಳ ಮುಖಂಡರಿಗೂ ರಾಜಕೀಯ ಸಲಹೆಗಾರರಂತಿದ್ದರು.

ಶ್ರೀಯುತರು ದಿನಾಂಕ 18-12-2008 ರಂದು ನಿಧನ ಹೊಂದಿದರು.

7. ಶ್ರೀ ಪಿ. ಆಂಜಿನಪ್ಪ

ಸ್ವಾತಂತ್ರ್ಯ ಹೋರಾಟಗಾರರು, ಮೈಸೂರು ಪ್ರಜಾಪ್ರತಿನಿಧಿ ಸಭೆ ಹಾಗೂ ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಪಿ.ಆಂಜಿನಪ್ಪರವರು ಹರಿಜನರ

ಅಭಿವೃದ್ಧಿಗಾಗಿ ಆಸಕ್ತಿ ಹೊಂದಿದ್ದವರು. ಪಾವಗಡ ಪುರಸಭೆಯ ಸದಸ್ಯರಾಗಿ, ಗೃಹರಕ್ಷಕ ದಳದ ಸದಸ್ಯರಾಗಿ ಸಮಾಜ ಸೇವೆಯನ್ನು ಕೈಗೊಂಡಿದ್ದ ಶ್ರೀಯುತರು ಪಾವಗಡದಲ್ಲಿ ಎರಡು ಶಿಶುವಿಹಾರಗಳು, ಒಂದು ಪ್ರೌಢ ಶಾಲೆ, ನೂರು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯ ಹಾಗೂ ಇಪ್ಪತ್ತೈದು ವಿದ್ಯಾರ್ಥಿಗಳಿಗೆ ವೈ.ಎನ್. ಹೊಸಕೋಟೆಯಲ್ಲಿ ವಿದ್ಯಾರ್ಥಿನಿಲಯವನ್ನು ಸ್ಥಾಪಿಸಿದ್ದರು. ಶ್ರೀಯುತರು ಎರಡನೇ ವಿಧಾನಸಭೆಗೆ ಸಿರಾ ಕ್ಷೇತ್ರದಿಂದ ಹಾಗೂ ನಾಲ್ಕನೇ ವಿಧಾನಸಭೆಗೆ ಪಾವಗಡ ಕ್ಷೇತ್ರದಿಂದ ಚುನಾಯಿತರಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 01-08-2008 ರಂದು ನಿಧನ ಹೊಂದಿದರು.

8. ಶ್ರೀ ಬಿ.ಹೆಚ್. ಯಂಕಾನಾಯಕ್

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಬಿ.ಹೆಚ್.ಯಂಕಾನಾಯಕ್‌ರವರು ಬಳ್ಳಾರಿ ಜಿಲ್ಲೆ ಹರಪನಹಳ್ಳಿ ತಾಲ್ಲೂಕು ಪುನಭಘಟ್ಟ ತಾಂಡಾದಲ್ಲಿ 1927ನೇ ಅಕ್ಟೋಬರ್ 1 ರಂದು ಜನಿಸಿದ್ದು, ವೃತ್ತಿಯಲ್ಲಿ ಕೃಷಿಕರು. ಗ್ರಾಮೀಣಾಭಿವೃದ್ಧಿ ಮತ್ತು ಸಮಾಜ ಸೇವೆಯಲ್ಲಿ ಆಸಕ್ತಿ ಹೊಂದಿದ್ದ ಶ್ರೀಯುತರು ನಾಲ್ಕು, ಏಳು, ಎಂಟು ಹಾಗೂ ಒಂಬತ್ತನೇ ವಿಧಾನಸಭೆಗೆ ಹರಪನಹಳ್ಳಿ ಕ್ಷೇತ್ರದಿಂದ ಚುನಾಯಿತರಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 13-08-2008 ರಂದು ನಿಧನ ಹೊಂದಿದರು.

9. ಶ್ರೀ ಮಾಣಿಕ್‌ರಾವ್ ಪುಲೇಕಾರ್

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಮಾಣಿಕ್‌ರಾವ್ ಪುಲೇಕಾರ್‌ರವರು ಬೀದರ್‌ನಲ್ಲಿ 1930ನೇ ಜೂನ್ 16ರಂದು ಜನಿಸಿದ್ದು, ವೃತ್ತಿಯಲ್ಲಿ ವ್ಯಾಪಾರಸ್ಥರು. ಆರ್ಯ ಸಮಾಜದ ಚಿಂತನೆಯಲ್ಲಿ ತೊಡಗಿಕೊಂಡಿದ್ದ ಶ್ರೀಯುತರು ಬೀದರ್ ಜಿಲ್ಲೆಯ ಸಮಗ್ರ ಅಭಿವೃದ್ಧಿಗಾಗಿ ಹಲವಾರು ಸಂಘಟನೆಗಳ ಮುಖಾಂತರ ದುಡಿದಿದ್ದರು. ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆ, ಬೀದರ್ ಸಹಕಾರಿ ಮುದ್ರಣ, ಬೀದರ್ ಗೃಹ ನಿರ್ಮಾಣ ಸಹಕಾರ ಸಂಘ ಮುಂತಾದ ಹಲವಾರು ಸಂಸ್ಥೆಗಳನ್ನು ಸ್ಥಾಪಿಸಿದ್ದರು. ಬೀದರ್ ಪುರಸಭೆಯ ಸದಸ್ಯರಾಗಿ, ವಿಧಾನಪರಿಷತ್ತಿನ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದ ಶ್ರೀಯುತರು ಐದನೇ ವಿಧಾನಸಭೆಗೆ ಬೀದರ್ ಕ್ಷೇತ್ರದಿಂದ ಚುನಾಯಿತರಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 30-08-2008 ರಂದು ನಿಧನ ಹೊಂದಿದರು.

10. ಶ್ರೀ ಎನ್.ಆರ್. ಪಾಟೀಲ್

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಎನ್.ಆರ್.ಪಾಟೀಲ್‌ರವರು ಬಿಜಾಪುರ ಜಿಲ್ಲೆ ಸಿಂಧಗಿ ತಾಲ್ಲೂಕು ಹೊನ್ನಾಳಿ ಗ್ರಾಮದಲ್ಲಿ 1938ನೇ ನವೆಂಬರ್ 19ರಂದು ಜನಿಸಿದ್ದು, ವೃತ್ತಿಯಲ್ಲಿ ಕೃಷಿಕರು. ಅನಕ್ಷರಸ್ಥರ ಅಭಿವೃದ್ಧಿಗಾಗಿ ಆಸಕ್ತಿ ಹೊಂದಿದ್ದ ಶ್ರೀಯುತರು ಪಿ.ಎಲ್.ಡಿ. ಬ್ಯಾಂಕಿನ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದು, 1983ರಲ್ಲಿ ಏಳನೇ ವಿಧಾನಸಭೆಗೆ ಸಿಂಧಗಿ ಕ್ಷೇತ್ರದಿಂದ ಚುನಾಯಿತರಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 28-09-2008 ರಂದು ನಿಧನ ಹೊಂದಿದರು.

11. ಶ್ರೀ ಎಲ್.ಎಸ್. ನಾಯಕ್

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಎಲ್.ಎಸ್.ನಾಯಕ್‌ರವರು ಬೆಳಗಾವಿ ಜಿಲ್ಲೆ ಗೋಕಾಕ್ ತಾಲ್ಲೂಕು ಯದ್ದಲಗುಡ್ಡ ಗ್ರಾಮದಲ್ಲಿ 1928ರಲ್ಲಿ ಜನಿಸಿದ್ದು, ಕುಂದರನಾಡು ಜನತಾ ಶಿಕ್ಷಣ ಸಂಸ್ಥೆಯ ಪದಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದರು. ಶ್ರೀಯುತರು ನಾಲ್ಕು ಹಾಗೂ ಏಳನೇ ವಿಧಾನಸಭೆಗೆ ಗೋಕಾಕ್ ಕ್ಷೇತ್ರದಿಂದ ಚುನಾಯಿತರಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 30-10-2008 ರಂದು ನಿಧನ ಹೊಂದಿದರು.

12. ಶ್ರೀ ರುದ್ರಗೌಡ ಹುಣಸಿಹಾಳ್

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ರುದ್ರಗೌಡ ಹುಣಸಿಹಾಳ್‌ರವರು ರಾಯಚೂರು ಜಿಲ್ಲೆ ಯಲಬುರ್ಗಾ ತಾಲ್ಲೂಕು ಹುಣಸಿಹಾಳದಲ್ಲಿ ಜನಿಸಿದ್ದು, ವೃತ್ತಿಯಲ್ಲಿ ಕೃಷಿಕರು. ಸಮಾಜ ಸೇವೆಯಲ್ಲಿ ಆಸಕ್ತಿ ಹೊಂದಿದ್ದ ಶ್ರೀಯುತರು ಹತ್ತನೇ ವಿಧಾನಸಭೆಗೆ ನಡೆದ ಉಪ ಚುನಾವಣೆಯಲ್ಲಿ ಯಲಬುರ್ಗಾ ಕ್ಷೇತ್ರದಿಂದ ಚುನಾಯಿತರಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 25-11-2008 ರಂದು ನಿಧನ ಹೊಂದಿದರು.

13. ಶ್ರೀ ಎಂ. ಶ್ರೀನಿವಾಸ್

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಎಂ.ಶ್ರೀನಿವಾಸ್‌ರವರು 1942ನೇ ಆಗಸ್ಟ್ 11 ರಂದು ಮೈಸೂರಿನಲ್ಲಿ ಜನಿಸಿದ್ದು, ಬಿ.ಎ.ಪದವೀಧರರು. ಸಮಾಜ ಸೇವೆಯಲ್ಲಿ

ಆಸಕ್ತಿ ಹೊಂದಿದ್ದ ಶ್ರೀಯುತರು ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಸದಸ್ಯರಾಗಿ ಹಾಗೂ ಹಲವಾರು ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಸಂಸ್ಥೆಗಳ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದು, ಆರನೇ ವಿಧಾನಸಭೆಗೆ ಶ್ರೀರಂಗಪಟ್ಟಣ ಕ್ಷೇತ್ರದಿಂದ ಚುನಾಯಿತರಾಗಿ ಸೇವೆ ಸಲ್ಲಿಸಿದ್ದರು.

ಶ್ರೀಂಯುತರು ದಿನಾಂಕ 14-12-2008 ರಂದು ನಿಧನ ಹೊಂದಿದರು.

14. ಶ್ರೀ ಮೋಹನ್ ಕೃಷ್ಣ ಶೆಟ್ಟಿ

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಮೋಹನ್ ಕೃಷ್ಣ ಶೆಟ್ಟಿ ಅವರು ಉತ್ತರ ಕನ್ನಡ ಜಿಲ್ಲೆ ಕುಮಟಾದಲ್ಲಿ 1953ನೇ ಜೂನ್ 17ರಂದು ಜನಿಸಿದ್ದು, ವೃತ್ತಿಯಲ್ಲಿ ಗುತ್ತಿಗೆದಾರರಾಗಿದ್ದರು. ಸಮಾಜ ಸೇವೆಯಲ್ಲಿ ಆಸಕ್ತಿ ಹೊಂದಿದ್ದ ಶ್ರೀಯುತರು ಹಲವಾರು ಸಾಮಾಜಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ಸಂಘಟಿಸಿದ್ದರು. ಕುಮಟಾ ಪುರಸಭೆಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದ ಶ್ರೀಯುತರು ಹನ್ನೊಂದು ಹಾಗೂ ಹನ್ನೆರಡನೇ ವಿಧಾನಸಭೆಗೆ ಕುಮಟಾ ಕ್ಷೇತ್ರದಿಂದ ಚುನಾಯಿತರಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 29-12-2008 ರಂದು ನಿಧನ ಹೊಂದಿದರು.

15. ಶ್ರೀ ಡಿ.ಸಿ. ಶ್ರೀಕಂಠಪ್ಪ

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಡಿ.ಸಿ.ಶ್ರೀಕಂಠಪ್ಪರವರು ಚಿಕ್ಕಮಗಳೂರು ಜಿಲ್ಲೆ ಬೀರೂರಿನಲ್ಲಿ 1929ನೇ ಮಾರ್ಚ್ 6 ರಂದು ಜನಿಸಿದ್ದು, ವೃತ್ತಿಯಲ್ಲಿ ಕೃಷಿಕರು ಹಾಗೂ ಕೈಗಾರಿಕೋದ್ಯಮಿಗಳು. ಸಮಾಜ ಸೇವೆಯಲ್ಲಿ ಆಸಕ್ತಿ ಹೊಂದಿದ್ದ ಶ್ರೀಯುತರು ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಭಾಗಿಯಾಗಿದ್ದರು. ಶ್ರೀಯುತರು ಹನ್ನೆರಡು, ಹದಿಮೂರು ಹಾಗೂ ಹದಿನಾಲ್ಕನೇ ಲೋಕಸಭೆಗ ಚಿಕ್ಕಮಗಳೂರು ಕ್ಷೇತ್ರದಿಂದ ಚುನಾಯಿತರಾಗಿದ್ದರು ಹಾಗೂ ನಾರು ಮಂಡಳಿ, ಕಾಫಿ ಬೋರ್ಡ್ ಹಾಗೂ ಇನ್ನಿತರೆ ಹಲವಾರು ಸಂಸ್ಥೆಗಳ ಪದಾಧಿಕಾರಿಗಳಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 04-08-2008 ರಂದು ನಿಧನ ಹೊಂದಿದರು.

16. ಶ್ರೀ ಬಿ.ವಿ.ನಾಯಕ್

ಉತ್ತರ ಕನ್ನಡ ಜಿಲ್ಲೆಂಯ ಲೋಕಸಭಾ ಸದಸ್ಯರಾಗಿದ್ದ ಶ್ರೀ ಬಿ.ವಿ.ನಾಯಕ್‌ರವರು ತಮ್ಮ ವಾಕ್ಪಟುತ್ವ, ಸ್ವಚ್ಛ ವಿಚಾರ ಹಾಗೂ ಪ್ರಾಮಾಣಿಕತೆ,

ಸರಳ ನಡೆನುಡಿಯಿಂದ ಹೆಸರುವಾಸಿಯಾಗಿದ್ದರು. ಕೃಷಿ ಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದ ಶ್ರೀಯುತರು ಸರ್ಕಾರಿ ಸೇವೆಯಲ್ಲಿ ಇದ್ದು ನಂತರ ರಾಜಕಾರಣಕ್ಕೆ ಬಂದವರು. ಮೂರು ಆಂಗ್ಲ ಗ್ರಂಥಗಳನ್ನು ಬರೆದಿದ್ದ ಶ್ರೀಯುತರು ಜನಧ್ವನಿ ಎಂಬ ರಾಜಕೀಯ ವಾರಪತ್ರಿಕೆಯನ್ನು ನಡೆಸುತ್ತಿದ್ದರು. ಶ್ರೀಯುತರು ವೈಚಾರಿಕ ಲೇಖಕ, ಅಂಕಣಕಾರ, ವಾಗ್ಮಿ ಹಾಗೂ ಚಿಂತಕರಾಗಿ ಗುರುತಿಸಿಕೊಂಡಿದ್ದರು.

ಶ್ರೀಯುತರು ದಿನಾಂಕ 16-08-2008 ರಂದು ನಿಧನ ಹೊಂದಿದರು.

17. ಮುಂಬೈ ಭಯೋತ್ಪಾದಕ ಘಟನೆ

ದೇಶದ ವಾಣಿಜ್ಯ ರಾಜಧಾನಿ ಮುಂಬೈಯಲ್ಲಿ ದಿನಾಂಕ 26-11-2008 ರಂದು ಭಯೋತ್ಪಾದಕರು ಅಟ್ಟಹಾಸ ಮೆರೆದು ವಿವಿಧ ಭಾಗಗಳಲ್ಲಿ ಹಾಗೂ ಹೋಟೆಲುಗಳಲ್ಲಿ ನಡೆಸಿದ ಸರಣಿ ಸ್ಫೋಟ ಮತ್ತು ಗುಂಡಿನ ಕಾಳಗದಲ್ಲಿ 164 ಜನ ಮುಗ್ಧರು ಸಾವನ್ನಪ್ಪಿದ್ದಾರೆ. ಈ ಘಟನೆಯಲ್ಲಿ ಮುಂಬೈ ಭಯೋತ್ಪಾದನೆ ನಿಗ್ರಹ ಪಡೆಯ ಮುಖ್ಯಸ್ಥ ಹೇಮಂತ್ ಕರ್ಕರೆ, ಹೆಚ್ಚುವರಿ ಪೊಲೀಸ್ ಆಯುಕ್ತ ಶ್ರೀ ಅಶೋಕ್ ಕಾಮ್ಟೆ, ಎನ್‌ಕೌಂಟರ್ ತಜ್ಞ ವಿಜಯ್ ಸಾಲಸ್ಕರ್ ಹಾಗೂ ಎನ್.ಎಸ್.ಜಿ. ಕಮಾಂಡೋ ಕರ್ನಾಟಕದ ಮೇಜರ್ ಸಂದೀಪ್ ಉನ್ನಿಕೃಷ್ಣನ್ ಹಾಗೂ ಇತರರು ವೀರ ಮರಣವನ್ನಪ್ಪಿದ್ದಾರೆ. ರಾಷ್ಟ್ರದ ಏಕತೆಯನ್ನು ಒಡೆಯಲು ಸಂಚು ನಡೆಸಿರುವ ಭಯೋತ್ಪಾದಕರು ಮುಗ್ಧ ಜನರನ್ನು ಬಲಿ ತೆಗೆದುಕೊಂಡಿದ್ದರೂ ಸಹ ಅವರ ಗುರಿಯನ್ನು ಸಾಧಿಸಲು ವಿಫಲರಾಗಿದ್ದು, ಇಡೀ ರಾಷ್ಟ್ರ ಈ ಘಟನೆಯನ್ನು ಖಂಡಿಸಿದೆ. ಈ ಸಂದರ್ಭದಲ್ಲಿ ನಮ್ಮ ಭದ್ರತಾ ಪಡೆಗಳು ಅದ್ಭುತವಾಗಿ ಕಾರ್ಯನಿರ್ವಹಿಸಿ, ಇಡೀ ರಾಷ್ಟ್ರದ ಜನತೆಯ ಮೆಚ್ಚುಗೆಗೆ ಕಾರಣರಾಗಿದ್ದಾರೆ.

ಡಾ॥ ಬಿ.ಎಸ್. ಯಡಿಯೂರಪ್ಪ (ಮುಖ್ಯ ಮಂತ್ರಿಗಳು):- ಸನ್ಮಾನ್ಯ ಸಭಾಧ್ಯಕ್ಷರೆ, ತಾವು ಕರೆದಿರುವಂಥ ಕಳೆದ ಅಧಿವೇಶನ ಮತ್ತು ಈ ವರ್ಷದ ಅಧಿವೇಶನ ಮತ್ತು ಈ ಅಧಿವೇಶನದ ನಡುವೆ ಹಲವು ಗಣ್ಯರು ಮತ್ತು ಉಭಯ ಸದನಗಳ ಸದಸ್ಯರಾಗಿದ್ದುಕೊಂಡು ನಾಡಿನ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ್ದ ಹಲವಾರು ಗಣ್ಯರು ನಮ್ಮನ್ನು ಅಗಲಿದ್ದಾರೆ. ರಾಷ್ಟ್ರ ಹಾಗೂ ರಾಜ್ಯಕ್ಕೆ ಅವರು ಸಲ್ಲಿಸಿದ ಸೇವೆಯನ್ನು ಸ್ಮರಿಸಿ ಶ್ರದ್ಧಾಂಜಲಿಯನ್ನು ಸಮರ್ಪಿಸುವಂಥದ್ದು ನಮ್ಮ ಕರ್ತವ್ಯ. ಮಾಜಿ ಪ್ರಧಾನಿಗಳಾದಂಥ ಶ್ರೀ ವಿಶ್ವನಾಥ್ ಪ್ರತಾಪಸಿಂಗ್‌ರವರು ಈ ದೇಶ ಕಂಡಂಥ ಅತ್ಯುತ್ತಮ ನೇತಾರರಲ್ಲಿ ಒಬ್ಬರಾಗಿದ್ದರು. ರಾಜ ಮನೆತನದಲ್ಲಿ ಜನಿಸಿದ್ದರು ಕೂಡ ಸಾಮಾನ್ಯ

ಕಾರ್ಯಕರ್ತನಾಗಿ ರಾಜಕೀಯ ಕ್ಷೇತ್ರದಲ್ಲಿ ಧುಮುಕಿ ಈ ದೇಶದ ಅತ್ಯುನ್ನತ ಪದವಿಯನ್ನು ಪಡೆದು ಪ್ರಧಾನಿಯಾಗಿ ಈ ದೇಶಕ್ಕೆ ಸೇವೆಯನ್ನು ಸಲ್ಲಿಸಿದರು. ವಿಶೇಷವಾಗಿ ಅವರು ಉತ್ತರ ಪ್ರದೇಶದ ಮುಖ್ಯಮಂತ್ರಿಯಾಗಿದ್ದರು. ಈ ದೇಶದ ಆರ್ಥಿಕ ಸಚಿವರಾಗಿದ್ದಾಗ ಮತ್ತು ದೇಶದ ಪ್ರಧಾನ ಮಂತ್ರಿಗಳಾಗಿದ್ದಾಗ ಹಲವು ರಾಜಕೀಯ ಹಾಗೂ ಐತಿಹಾಸಿಕವಾಗಿರುವಂಥ ನಿರ್ಧಾರಗಳಿಗೆ ಅವರು ಕಾರಣಕರ್ತರಾಗಿದ್ದರು. ತಮಗೆ ಸರಿ ಕಂಡದ್ದನ್ನು ಹೇಳುವುದಕ್ಕೆ ಎಂದು ಸಹ ಹಿಂದು ಮುಂದು ನೋಡದೆ ಶ್ರೀ ವಿ.ಪಿ.ಸಿಂಗ್‌ರವರು ಅಧಿಕಾರಕ್ಕೆ ಎಂದು ಅಂಟಿಕೊಂಡು ಕುಳಿತವರಲ್ಲ. ಮಂಡಲ್ ಆಯೋಗದ ಶಿಫಾರಸ್ಸುಗಳನ್ನು ಜಾರಿಗೆ ತರುವಂಥ ಸಂದರ್ಭದಲ್ಲಿ ಅವರು ನಡೆದುಕೊಂಡಂಥ ರೀತಿ ಇದಕ್ಕೆ ಒಂದು ಜ್ವಲಂತ ಉದಾಹರಣೆ. ದೇಶದ ಜನಸಂಖ್ಯೆಯಲ್ಲಿ ಬಹುಸಂಖ್ಯಾತರಾಗಿದ್ದರೂ ಶೈಕ್ಷಣಿಕ, ಆರ್ಥಿಕ ಹಾಗೂ ಉದ್ಯೋಗಗಳಲ್ಲಿ ಅವಕಾಶ ವಂಚಿತರಾಗಿದ್ದ ಹಿಂದುಳಿದ ವರ್ಗಗಳ ಸಮುದಾಯಕ್ಕೆ ಮೀಸಲಾತಿಯನ್ನು ಒದಗಿಸುವಂಥ ಮಂಡಲ್ ಆಯೋಗದ ವರದಿಯನ್ನು ಎಷ್ಟೇ ವಿರೋಧ ಬಂದರು ಸಹ ಅದನ್ನು ಜಾರಿಗೆಗೊಳಿಸಿದಂಥ ಕೀರ್ತಿ ಅವರಿಗೆ ಸಲ್ಲುತ್ತದೆ. ಸಾರ್ವಜನಿಕ ಜೀವನದಲ್ಲಿ ಪ್ರಾಮಾಣಿಕ ಬದುಕನ್ನು ನಡೆಸಿದಂಥ ವಿಶ್ವನಾಥ್ ಪ್ರತಾಪಸಿಂಗ್‌ರವರು ಶುದ್ಧ ಹಸ್ತರೆಂದು ಹೇಳಿ ಹೆಸರು ಪಡೆದಿದ್ದರು. ರಾಜಕಾರಣಿಗಳು ಆಗಿದ್ದರು ಸಹ ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಂಥ ಶ್ರೀ ವಿ.ಪಿ.ಸಿಂಗ್‌ರವರು ಕಾವ್ಯರಚನೆ ಮತ್ತು ಚಿತ್ರವನ್ನು ಬಿಡಿಸುವುದರಲ್ಲಿ ನೈಪುಣ್ಯತೆಯನ್ನು ಹೊಂದಿದ್ದರು ಎನ್ನುವಂಥದ್ದು ನಮಗೆಲ್ಲಾ ಗೊತ್ತಿರುವಂಥ ಸಂಗತಿ. ಅವರು ದೀರ್ಘಕಾಲದಿಂದ ಅನಾರೋಗ್ಯ ಪೀಡಿತರಾಗಿದ್ದಂಥ ಕಾಲದಲ್ಲಿ ಕೂಡ ಸಾರ್ವಜನಿಕ ಜೀವನದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವಲ್ಲಿ ಹಿಂದೆ ಮುಂದೆ ನೋಡಲಿಲ್ಲ. ದೇಶದ ಮುಂಚೂಣಿ ನೇತಾರರಲ್ಲಿ ಒಬ್ಬರಾಗಿದ್ದ ಶ್ರೀ ವಿ.ಪಿ. ಸಿಂಗ್‌ರವರನ್ನು ಕಳೆದುಕೊಂಡ ದೇಶ ಇವತ್ತು ಬಡವಾಗಿದೆ.

ನಮ್ಮ ಜೊತೆಯಲ್ಲಿದ್ದು ಕೆಲಸ ಮಾಡಿದಂತಹ ಹಿರಿಯರಾದಂತಹ ಶ್ರೀ ಹೆಚ್.ಎನ್. ನಂಜೇಗೌಡರು ಬಹುಶ: ನೀರಾವರಿ ಕ್ಷೇತ್ರದಲ್ಲಿ ಅತ್ಯಂತ ನಿಪುಣತೆಯನ್ನು ಪಡೆದಂತಹ ಅವರ ನೇರ ಮಾತುಕತೆಗಳು ಯಾವುದೇ ನಿಷ್ಠುರಕ್ಕೂ ಸಹ ಬಗ್ಗದೆ ಜಗ್ಗದೆ ಅವರು ಕೆಲಸ ಮಾಡಿದಂತಹ ರೀತಿ ನಾಡಿನ ಸಮರ್ಥ ಒಬ್ಬ ಹಿರಿಯ ವ್ಯಕ್ತಿಯಾಗಿ ನೀರಾವರಿ ಕ್ಷೇತ್ರದಲ್ಲಿ ಅಪಾರವಾದಂತಹ ಜ್ಞಾನವುಳ್ಳವರಾಗಿದ್ದರು. ಈ ನಾಡಿನ ನೆಲ, ಜಲ, ಭಾಷೆಯ ಪ್ರಶ್ನೆಯು ಬಂದಾಗ ಅವರು

ಯಾವ ರೀತಿಯಾಗಿ ನಿರಂತರವಾಗಿ ಕಾಳಜಿಯನ್ನು ವಹಿಸುತ್ತಿದ್ದರು. ಅವರು ವಿಶೇಷವಾಗಿ ಜಲವಿವಾದಗಳ ಬಗ್ಗೆ ಬಹುಶ: ಒಂದು ತರಹ ಕಂಪ್ಯೂಟರ್‌ನಂತೆ ಅವರ ನಡವಳಿಕೆಯಿತ್ತು. ಅವರು ಬೆರಳತುದಿಯಲ್ಲಿ ಮಾಹಿತಿಯನ್ನು ನೀಡಬಲ್ಲವರಾಗಿದ್ದರು. ಶ್ರೀಯುತರು ಯಾವುದೇ ಪಕ್ಷದ ಸರ್ಕಾರವಿರಲಿ ಈ ವಿವಾದಗಳ ಸಂದರ್ಭದಲ್ಲಿ ಅವರ ಸಹಕಾರ ಮತ್ತು ಮಾರ್ಗದರ್ಶನವು ಸದಾ ಸಿಗುತ್ತಿತ್ತು. ಗ್ರಾಮೀಣಾಭಿವೃದ್ಧಿ ಮತ್ತು ನೀರಾವರಿ ಹಾಗೂ ರೈತಾಪಿ ಜನರ ಸರ್ವಾಂಗೀಣ ಏಳಿಗೆಯ ಬಗ್ಗೆ ಕುರಿತಂತೆ ಅವರು ಸದಾ ಚಿಂತಿಸುತ್ತಿದ್ದರು. ರಾಜ್ಯದ ನದಿ ನೀರಿನ ವಿವಾದಗಳು ಮತ್ತು ಗಡಿಸಮಸ್ಯೆಗಳು ಸೃಷ್ಟಿಸಿರುವ ಸೂಕ್ಷ್ಮ ಸನ್ನಿವೇಶಗಳನ್ನು ನಾವು ಎದುರಿಸುತ್ತಿರುವಂತಹ ಈ ಸಂದರ್ಭದಲ್ಲಿ ಶ್ರೀಯುತರ ಅಕಾಲಿಕ ಮರಣವು ತುಂಬಾ ಶೂನ್ಯಸ್ಥಿತಿಯನ್ನು ನಿರ್ಮಾಣ ಮಾಡಿದೆ. ಅವರ ಸಾವಿನಿಂದ ನಾಡಿಗೆ ದೊಡ್ಡ ನಷ್ಟವುಂಟಾಗಿದೆ. ಶ್ರೀ ಎಂ.ಎಸ್.ಸಿದ್ದರಾಜುರವರು ಕಳೆದ ಬಾರಿ ನಾವೆಲ್ಲರೂ ವಿಧಾನಸಭೆಯಲ್ಲಿ ಸೇರಿದ್ದಾಗ ನಮ್ಮೊಂದಿಗೆ ಇದ್ದಂತಹ ವ್ಯಕ್ತಿಯನ್ನು ನಾವು ಕಳೆದುಕೊಂಡಿದ್ದೇವೆ. ಶ್ರೀಯುತರು ಅಪ್ಪಟ ಹಳ್ಳಿಯವರಾಗಿದ್ದು, ಅವರು ನಾಡಿನ ಕಡುಬಡವರ ನಾಡಿಯ ಮಿಡಿತವನ್ನು ಬಲ್ಲವರಾಗಿದ್ದರು. ಅವರು ಜನರ ನೋವುನಲಿವುಗಳಿಗೆ ಸದಾ ಸ್ಪಂದಿಸುತ್ತಿದ್ದರು. ರೈತರ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಅವರು ಸದಾ ಮುಂದಿರುತ್ತಿದ್ದರು. ಅಂತಹವರನ್ನು ನಾವು ಇವತ್ತು ಕಳೆದುಕೊಂಡಿದ್ದೇವೆ. ಪ್ರೊ॥ ಎ.ಲಕ್ಷ್ಮಿಸಾಗರ್, ಬಹುಶ: ಇವರು ಒಂದು ಕುಗ್ರಾಮದಲ್ಲಿ ಹುಟ್ಟಿ ಅತ್ಯುತ್ತಮ ಕಾನೂನು ಶಿಕ್ಷಣವನ್ನು ಸ್ವಂತ ಪರಿಶ್ರಮದಿಂದ ಪಡೆದುಕೊಂಡಿದ್ದರು. ಶ್ರೀಯುತರು ಬೆಂಗಳೂರು ಮಹಾನಗರಪಾಲಿಕೆಯ ಸದಸ್ಯರಾಗಿ ತಮ್ಮ ಜೀವನವನ್ನು ಆರಂಭಿಸಿದರು. ಸ್ತ್ರೀಸಾಮಾನ್ಯರ ಧ್ವನಿಯಾಗಿ ತಮ್ಮ ಕೊನೆಯ ಉಸಿರಿರುವತನಕ ಅವರು ಶ್ರಮಿಸಿದರು. ಅವರು ಆತ್ಮಸಾಕ್ಷಿಗೆ ವಿರುದ್ಧವಾಗಿ ಎಂದೂ ಕೂಡ ನಡೆದುಕೊಂಡ ವ್ಯಕ್ತಿಯಾಗಿರಲಿಲ್ಲ. ಎಲ್ಲಾ ವಿಚಾರಗಳ ಬಗ್ಗೆ ಚರ್ಚೆ ನಡೆಸುವಾಗ ಜನಸಾಮಾನ್ಯರ ದೃಷ್ಟಿಯಿಂದ ಅವರು ತಮ್ಮ ಅಭಿಪ್ರಾಯಗಳನ್ನು ಮಂಡಿಸುತ್ತಿದ್ದ ಅವರು ಅತ್ಯಂತ ಪ್ರಾಮಾಣಿಕ ರಾಜಕಾರಣಿಯಾಗಿದ್ದರು. ಶ್ರೀಯುತರು ಗ್ರಾಮೀಣಾಭಿವೃದ್ಧಿಗೆ ಮತ್ತು ಶಿಕ್ಷಣಕ್ಕೆ ಹೆಚ್ಚಿನ ಒಂದು ಆದ್ಯತೆಯನ್ನು ಕೊಡುತ್ತಿದ್ದರು. ಇವರು ಹಿಂದುಳಿದ ವರ್ಗಗಳ ಸರ್ವೋತೋಮುಖ ಅಭಿವೃದ್ಧಿಗಾಗಿ ದುಡಿದಂತಹ ಶ್ರೀಯುತರನ್ನು ನಾವು ಕಳೆದುಕೊಂಡಿದ್ದೇವೆ. ಶ್ರೀ ವಿಶ್ವನಾಥ್ ರೆಡ್ಡಿ ಮುದ್ನಾಳ್ ಸ್ವಾತಂತ್ರ್ಯ ಹೋರಾಟಗಾರರು, ಹೈದರಾಬಾದ್ ವಿಮೋಚನಾ ಚಳುವಳಿಯಲ್ಲಿ ಮುಂದಾಳತ್ವವನ್ನು ವಹಿಸಿದಂತಹ ಒಬ್ಬ ನಿಷ್ಠುರವ್ಯಕ್ತಿಯಾಗಿದ್ದ ಶ್ರೀಯುತರು ನಮ್ಮನ್ನು ಅಗಲಿದ್ದಾರೆ. ಇವರು

ಅಗರ್ಭ ಶ್ರೀಮಂತರಾಗಿದ್ದರೂ ಸಹ ರಾಜಕಾರಣದಲ್ಲಿ ಅತ್ಯಂತ ಪ್ರಾಮಾಣಿಕತೆಯಿಂದ ನೇರ ನಡೆನುಡಿಗಳಿಂದ ಜನರ ಮೆಚ್ಚುಗೆಗೆ ಪಾತ್ರರಾಗಿದ್ದರು. ಇವರು ಮಂತ್ರಿಗಳಾಗಿ ರಾಜ್ಯಾದ್ಯಂತ ಸಂಚರಿಸಿ ಪಶುಸಂಗೋಪನೆಯ ಬೆಳವಣಿಗೆಯ ಬಗ್ಗೆ ಹೆಚ್ಚಿನ ಒತ್ತನ್ನು ನೀಡುವುದರಲ್ಲಿ ಶ್ರೀ ವಿಶ್ವನಾಥ್ ರೆಡ್ಡಿ ಮುದ್ನಾಳ್‌ರವರ ಕೊಡುಗೆ ಅಪಾರವಾದುದು. ಉತ್ತರ ಕರ್ನಾಟಕದ ಜ್ವಲಂತ ಸಮಸ್ಯೆಗಳಿಗೆ ಒಂದು ಪರಿಹಾರವನ್ನು ಹುಡುಕುವುದರಲ್ಲಿ ಶ್ರೀಯುತರು ಮುಂದಿರುತ್ತಿದ್ದರು. ಅಂತಹವರು ಇವತ್ತು ಅಗಲಿದ್ದಾರೆ. ನಮ್ಮ ಆತ್ಮೀಯರಾಗಿದ್ದಂತಹ ಶ್ರೀಯುತ ಡಿ.ಸಿ. ಶ್ರೀಕಂಠಪ್ಪನವರು ಒಬ್ಬ ಲೋಕಸಭಾ ಸದಸ್ಯರು ಹೇಗೆ ಇರಬೇಕೆಂಬ ಬಗ್ಗೆ ಒಂದು ಮೇಲ್ಪಂಕ್ತಿಯನ್ನು ಹಾಕಿಕೊಂಡಹ ಹಿರಿಯ ಜೀವ ಆಗಿದ್ದರು. ಇವರು ನಿರಂತರ ಪ್ರವಾಸ, ರೈತಪರ ಮತ್ತು ಗ್ರಾಮೀಣ ಪರ ಚಿಂತನೆ, ಧರ್ಮಸ್ಥಳದ ಶ್ರೀ ವೀರೇಂದ್ರಹೆಗಡೆಯವರು ಮಾಡುತ್ತಿದ್ದಂತಹ ಕಾರ್ಯದಲ್ಲಿ ಅವರ ಸಹಭಾಗಿತ್ವ, ತೆಂಗಿನನಾರು ಮಂಡಳಿ ಮತ್ತು ಕಾಫಿ ಮಂಡಳಿ ಮೊದಲಾದ ಸಂಸ್ಥೆಗಳಿಗೂ ಕೂಡ ಸಕ್ರಿಯವಾಗಿ ಪಾಲ್ಗೊಂಡು ತಮ್ಮ ಸೇವೆಯನ್ನು ಮಾಡಿದ್ದರು. ಸಾಮಾನ್ಯ ಜನರ ನಡುವೆ ಸದಾ ಚಟುವಟಿಕೆಯಲ್ಲಿದ್ದಂತಹ ಶ್ರೀಯುತರನ್ನು ನಾವು ಇವತ್ತು ಕಳೆದುಕೊಂಡಿದ್ದೇವೆ. ಅವರ ಸಾವಿನಿಂದ ನಾಡಿಗೆ ತುಂಬಲಾರದಂತಹ ನಷ್ಟವಾಗಿದೆ. ಶ್ರೀ ಮೆರಾಜುದ್ದೀನ್ ಎಸ್. ಪಟೇಲ್ ಇವರು ಒಬ್ಬ ಮೆದುಮಾತಿನ ಹೃದಯವಂತ ಹಿರಿಯ ವ್ಯಕ್ತಿ, ಮಾಜಿ ಸಚಿವರಾದಂತಹ ಶ್ರೀಯುತರು ಜನಸಾಮಾನ್ಯರ ನಡುವಿನಿಂದ ಅವರು ಬೇರುಮಟ್ಟದಿಂದ ಬೆಳೆದುಬಂದಂತಹ ಒಬ್ಬ ಹಿರಿಯನಾಯಕರಾಗಿದ್ದರು. ಇವರು ಸಾಮಾನ್ಯ ಜನರ ಜೊತೆ ಸುಲಭವಾಗಿ ಬೆರೆಯುತ್ತಿದ್ದಂತಹ ಶ್ರೀಯುತರು ಅಲ್ಪಸಂಖ್ಯಾತರ ಸಮುದಾಯದಿಂದ ಬಂದು ಬಹುಸಂಖ್ಯಾತರ ಮೆಚ್ಚುಗೆಗೆ ಪಾತ್ರರಾದಂತಹ ಕೆಲವೇ ನಾಯಕರಲ್ಲಿ ಮೆರಾಜುದ್ದೀನ್ ಎಸ್. ಪಟೇಲ್‌ರವರು ಒಬ್ಬರಾಗಿದ್ದರು. ಅವರ ಮರಣದಿಂದ ಅವರ ಕುಟುಂಬಕ್ಕೆ ತುಂಬಲಾರದ ನಷ್ಟವಾಗಿದೆ. ಹಿಂದೂಮುಸ್ಲಿಂ ಸೌಹಾರ್ದತೆಯನ್ನು ಕಾಪಾಡಿಕೊಂಡಂತಹ ಒಬ್ಬ ಹಿರಿಯ ವ್ಯಕ್ತಿಯನ್ನು ನಾವು ಕಳೆದುಕೊಂಡಿದ್ದೇವೆ. ಮಾಜಿ ಶಾಸಕರಾಗಿದ್ದ ಶ್ರೀ ಪಿ.ಆಂಜನಪ್ಪ, ಶ್ರೀ ಬಿ.ಹೆಚ್.ಯಂಕನಾಯಕ್, ಶ್ರೀ ಮಾಣಿಕ್‌ರಾವ್ ಪುಲೇಕಾರ್, ಶ್ರೀ ಎನ್.ಆರ್.ಪಾಟೀಲ್, ಶ್ರೀ ಎಲ್.ಎಸ್.ನಾಯಕ್, ಶ್ರೀ ರುದ್ರೇಗೌಡ ಹುಣಸಿಹಾಳ್, ಶ್ರೀ ಎಂ.ಶ್ರೀನಿವಾಸ್,ಶ್ರೀ ಮೋಹನ್ ಕೃಷ್ಣಶೆಟ್ಟಿ, ಮತ್ತು ಮಾಜಿ ಲೋಕಸಭಾ ಸದಸ್ಯರಾದ ಶ್ರೀ ಬಿ.ವಿ.ನಾಯಕ್ ಇವರುಗಳು ನಮ್ಮೊಂದಿಗೆ ಇಂದು ಇಲ್ಲ. ಆದರೆ ಅವರು ನಾಡಿಗಾಗಿ, ಮತ್ತು ಈ ನಾಡಿನ ಜನತೆಗಾಗಿ ಮಾಡಿದಂತಹ

ಸೇವೆಯನ್ನು ಮರೆಯುವುದಕ್ಕೆ ಸಾಧ್ಯವಿಲ್ಲ. ಈ ಎಲ್ಲಾ ಮಹನೀಯರುಗಳಿಗೆ ನಮ್ಮ ಗೌರವವನ್ನು ಸಲ್ಲಿಸುತ್ತಿದ್ದೇವೆ. ಬಹುಶ: ಮುಂಬೈ ಮೇಲೆ 26.11.2008 ರಂದು ಭಯೋತ್ಪಾದಕರ ದಾಳಿಯಾದಾಗ ಇಡೀ ವಿಶ್ವವನ್ನೆ ತಲ್ಲಣಗೊಳಿಸಿದಂತಹ ಒಂದು ಘಟನೆ, ಮುಂಬೈ ಮೇಲೆ ನಡೆದಂತಹ ಭಯೋತ್ಪಾದಕರ ಅಟ್ಟಹಾಸದಿಂದ 180 ಮಂದಿ ಪ್ರಾಣವನ್ನು ಕಳೆದುಕೊಂಡರು. ಮುಂಬೈ ಭಯೋತ್ಪಾದಕರ ನಿಗ್ರಹ ಪಡೆಯ ಮುಖ್ಯಸ್ಥ ಹೇಮಂತ್ ಕರ್ಕರೆ, ಹೆಚ್ಚುವರಿ ಪೊಲೀಸ್ ಆಯುಕ್ತ ಶ್ರೀ ಅಶೋಕ್ ಕಾಮ್ಟೆ, ಎನ್‌ಕೌಂಟರ್ ತಜ್ಞ ವಿಜಯ್ ಸಾಲಸ್ಕರ್, ಎನ್‌ಎಸ್‌ಜಿ ಕಮಾಂಡೋ ಕರ್ನಾಟಕದ ಮೇಜರ್ ಸಂದೀಪ್ ಉನ್ನಿಕೃಷ್ಣನ್ ಮೊದಲಾಗಿ ಸಾಮಾನ್ಯ ನಾಗರೀಕರು ದಕ್ಷ ಪೊಲೀಸ್ ಅಧಿಕಾರಿಗಳು, ಸೇನಾಧಿಕಾರಿಗಳು ಪರಿಣಿತ ಹಿರಿಯರು ಹಾಗೂ ಬುದ್ಧಿಜೀವಿಗಳು ಭಯೋತ್ಪಾದಕರ ದಾಳಿಯಿಂದ ಹತರಾಗಿದ್ದಾರೆ. ಬಹುತೇಕರು ತಮ್ಮದು ಯಾವುದೇ ತಪ್ಪಿಲ್ಲದಿದ್ದರೂ ಸಹ ನಾಡಿನ ಜನರ ಉಳಿವಿಗಾಗಿ ಪ್ರಾಣವನ್ನು ತೆತ್ತಿದ್ದಾರೆ. ರಾಷ್ಟ್ರ ರಕ್ಷಣೆಯ ಪವಿತ್ರಕಾರ್ಯದಲ್ಲಿ ಹುತಾತ್ಮರಾದಂತಹ ಇವರುಗಳನ್ನು ನಾವುಗಳು ಸ್ಮರಣೆ ಮಾಡಿಕೊಳ್ಳಬೇಕಾಗಿದೆ. ಇವರುಗಳ ತ್ಯಾಗ ಮತ್ತು ಬಲಿದಾನಗಳಿಗೆ ಬೆಲೆಯನ್ನು ಕಟ್ಟುವುದಕ್ಕೆ ಸಾಧ್ಯವಾಗುವುದಿಲ್ಲ. ರಾಷ್ಟ್ರದ ಸ್ವಾತಂತ್ರ್ಯ ಮತ್ತು ಸಾರ್ವಭೌಮತ್ವಕ್ಕೆ ಸವಾಲನ್ನು ಒಡ್ಡಿರುವ ಭಯೋತ್ಪಾದಕರನ್ನು ಬೇರುಸಹಿತ ಕಿತ್ತೊಗೆದಾಗ ಮಾತ್ರ ಈ ಹುತಾತ್ಮರ ಆತ್ಮಕ್ಕೆ ಶಾಂತಿ ಸಿಗುತ್ತದೆಂದು ನಾನು ಭಾವಿಸಿದ್ದೇನೆ. ಈ ದಿಸೆಯಲ್ಲಿ ಕೇಂದ್ರಸರ್ಕಾರ ರಾಜ್ಯಸರ್ಕಾರಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಒಂದು ಸಮರ್ಥ ಪರಿಣಾಮಕಾರಿ ಒಂದು ಭದ್ರತಾ ಕಾರ್ಯನೀತಿಯನ್ನು ರೂಪಿಸುತ್ತದೆಂದು ಭಾವಿಸಿದ್ದೇನೆ. ಇದುವರೆಗೆ ನಾವು ಹಿರಿಯರುಗಳನ್ನು ಕಳೆದುಕೊಂಡಿದ್ದೇವೆ. ಅವರಿಗೆ ಹೃದಯಾಂತರಾಳದ ಶ್ರದ್ಧಾಂಜಲಿಯನ್ನು ಸಲ್ಲಿಸಿ ಅವರ ಕುಟುಂಬ ವರ್ಗದವರಿಗೆ ಈ ನೋವನ್ನು ಸಹಿಸುವಂತಹ ಶಕ್ತಿಯನ್ನು ಭಗವಂತನು ಕೊಡಲೆಂದು ಪ್ರಾರ್ಥಿಸಿ ನನ್ನ ಮಾತನ್ನು ಮುಗಿಸುತ್ತಿದ್ದೇನೆ.

ಶ್ರೀ ಟಿ.ಬಿ. ಜಯಚಂದ್ರ (ಶಿರಾ):- ಮಾನ್ಯ ಸಭಾಧ್ಯಕ್ಷರೆ, ಸವಿಸ್ತಾರವಾದಂತಹ ಕಳೆದ ಅಧಿವೇಶನದ ನಂತರ ಬೆಳಗಾವಿಯಲ್ಲಿ ಅಧಿವೇಶನ ಸೇರುವಂತಹ ಹೊತ್ತಿಗೆ ಸುಮಾರು ಜನ ರಾಜಕೀಯ ಮುತ್ಸದ್ದಿಗಳನ್ನು ನಾವುಗಳು ಕಳೆದುಕೊಂಡಿದ್ದೇವೆ. ಪ್ರಕೃತಿಯ ಕಾಲಗರ್ಭದಲ್ಲಿ ಅವರುಗಳೆಲ್ಲರೂ ಸೇರಿಹೋಗಿದ್ದಾರೆ. ಅವರುಗಳು ಮಾಡಿರುವಂತಹ ಸೇವೆಯನ್ನು ನಾವು ನೆನಸಿಕೊಳ್ಳಬೇಕಾಗುತ್ತದೆ. ಈಗಾಗಲೇ ಶ್ರೀಯುತರುಗಳ ಬಗ್ಗೆ ಸಭಾನಾಯಕರು

ಸಾಕಷ್ಟು ಮಾಹಿತಿಯನ್ನು ನಮ್ಮ ಮುಂದಿಟ್ಟಿದ್ದಾರೆ. ಈಗಾಗಲೇ ಸಭಾ ನಾಯಕರು ತಾವು ಕೂಡ ಸಾಕಷ್ಟು ಮಾಹಿತಿಯನ್ನು ಸಭೆಯ ಮುಂದಿಟ್ಟಿದ್ದೀರಿ. ನಾನು ಪದೇ ಪದೇ ಆ ವಿಚಾರವನ್ನು ಪ್ರಸ್ತಾಪ ಮಾಡಲಿಕ್ಕೆ ಹೋಗುವುದಿಲ್ಲ. ಮಾಜಿ ಪ್ರಧಾನಿಗಳಾದ ಶ್ರೀ ವಿ.ಪಿ.ಸಿಂಗ್ ಅವರು ಮೂಲತ: ಕಾಂಗ್ರೆಸ್ಸಿಗರಾಗಿ, ಮುಖ್ಯಮಂತ್ರಿಗಳಾಗಿ, ಕೇಂದ್ರ ಸಚಿವರಾಗಿ, ಪ್ರಧಾನ ಮಂತ್ರಿಗಳಾಗಿ ಸೇವೆ ಸಲ್ಲಿಸಿದ್ದಾರೆ. ಅವರು ಶ್ರೀ ರಾಜೀವ್ ಗಾಂಧಿಯವರಿಗೆ ಅತ್ಯಂತ ನಿಕಟವರ್ತಿಗಳಾಗಿದ್ದರು. ಬಹಳ ಆತ್ಮೀಯತೆಯಿಂದ ಅವರೊಂದಿಗಿದ್ದರು. ಆದರೆ ಒಂದು ವಿಚಾರ ಬಂದಂತಹ ಸಂದರ್ಭದಲ್ಲಿ ಸಚಿವ ಸಂಪುಟದಿಂದ ಹೊರಬಂದ ನಂತರ ಅವರು ರಾಜಕೀಯವಾಗಿ ಒಂದು ದೊಡ್ಡ ಶಕ್ತಿಯಾಗಿ ಬೆಳೆದು ಸಂಘಟನೆ ಮುಖೇನ ಈ ದೇಶದ ಪ್ರಧಾನ ಮಂತ್ರಿಗಳಾದರು. ಅವರು ಪ್ರಧಾನಿ ಆದಂತಹ ಸಂದರ್ಭದಲ್ಲಿ ಮೂಲೆಗುಂಪಾಗಿದ್ದಂಥ ಮಂಡಲ್ ವರದಿಯನ್ನು ಜಾರಿಗೆ ತರತಕ್ಕಂಥ ಕೆಲಸವನ್ನು ಮಾಡಿ ಇಡೀ ದೇಶದಲ್ಲಿ ಆ Backward Movement ಗೆ ಒಂದು ನಾಂದಿಯನ್ನು ಹಾಡಿದಂಥ ಮಹಾನ್ ನಾಯಕರಾಗಿದ್ದರು. ಶ್ರೀ ವಿ.ಪಿ.ಸಿಂಗ್‌ರವರು ಅತ್ಯಂತ ಪ್ರಾಮಾಣಿಕತೆಗೆ ಹೆಸರಾಗಿದ್ದಂಥವರು ಇವತ್ತು ನಮ್ಮನ್ನು ಅಗಲಿದ್ದಾರೆ. ನಮ್ಮ ಎರಡು ಮನೆಯ ಸದಸ್ಯರಾಗಿದ್ದಂಥ ಶ್ರೀ ಎಂ.ಎಸ್.ಸಿದ್ದರಾಜುರವರು ಮೊನ್ನೆ ಮೊನ್ನೆ ನಮ್ಮ ಜೊತೆಯಲ್ಲಿದ್ದಂತಹವರು ಕಾಲಗರ್ಭ ಸೇರುವುದಕ್ಕೆ ಮುಂಚೆ ನಮ್ಮೆಲ್ಲರೊಂದಿಗೆ ಸೇರಿ ಸಾಕಷ್ಟು ವಿಚಾರಗಳನ್ನು ಮಾತನಾಡುತ್ತಿದ್ದರು. ಅವರು ವಿಧಾನ ಪರಿಷತ್‌ನ ಸದಸ್ಯರಾಗಿದ್ದಂಥ ಸಂದರ್ಭದಲ್ಲಿ ಅವರ ಕೊಡುಗೆ ಅಪೂರ್ವವಾಗಿರತಕ್ಕಂಥದ್ದು. ಅವರು ಯಾವುದೇ ವಿಚಾರವನ್ನು ವಿಧಾನಸಭೆ ಹಾಗು ವಿಧಾನ ಪರಿಷತ್‌ನಲ್ಲಿ ಪ್ರಸ್ತಾಪ ಮಾಡುವಂಥ ಸಂದರ್ಭದಲ್ಲಿ ಬಹಳ ಜಾಗ್ರತೆಯಿಂದ ತಯಾರಿ ಮಾಡಿಕೊಂಡು ಉತ್ತಮ ಧಾಟಿಯಲ್ಲಿ ಮಾತನಾಡುವಂಥ ಸಿದ್ಧರಾಜುರವರನ್ನು ಇಂದು ನಾವು ಕಳೆದುಕೊಂಡಿದ್ದೇವೆ. ಇವತ್ತು ಅವರ ಶ್ರೀಮತಿಯವರೇ ವಿಧಾನಸಭೆಗೆ ಆಯ್ಕೆಯಾಗಿರುವುದು ಒಂದು ಸಂತೋಷದ ಸಂಗತಿ ಎಂದು ಹೇಳಬಯಸುತ್ತೇನೆ. ಅದೇ ರೀತಿಯಾಗಿ ಪ್ರೊ॥ ಎ. ಲಕ್ಷ್ಮೀಸಾಗರ್‌ರವರ ಬಗ್ಗೆ ಹೇಳುವುದಾದರೆ, ನಾನು 1978ರಲ್ಲಿ ವಿಧಾನಸಭೆಯ ಸದಸ್ಯನಾಗಿದ್ದಂಥ ಸಂದರ್ಭದಲ್ಲಿ ಪ್ರೊ॥ ಎ.ಲಕ್ಷ್ಮೀಸಾಗರ್‌ರವರು ಸಹ ಆಯ್ಕೆಯಾಗಿ ಬಂದಂಥವರು. ಆಗ ಶ್ರೀ ದೇವರಾಜ್ ಅರಸುರವರು ರಾಜ್ಯದ ಮುಖ್ಯಮಂತ್ರಿಗಳಾಗಿದ್ದರು. ಆಗ ಲಕ್ಷ್ಮೀಸಾಗರ್‌ರವರು ಯಾವುದೇ ಸಂದರ್ಭದಲ್ಲಿ ಮಾತನಾಡಿದರೂ ಕೂಡ ಶ್ರೀ ದೇವರಾಜ ಅರಸುರವರು ಬಹಳ ಶ್ರದ್ಧೆಯಿಂದ ಕೇಳಿ

ಅದಕ್ಕೆ ಸಮರ್ಪಕವಾಗಿ ಉತ್ತರವನ್ನು ಕೊಡುವುದರ ಜೊತೆಗೆ ಕಾರ್ಯಕ್ರಮವನ್ನು ಹಾಕುವಂಥ ಧಾಟಿಯಲ್ಲಿ ಅವರಿಗೆ ಮಹತ್ವವನ್ನು ಕೊಡುತ್ತಿದ್ದರು. ಲಕ್ಷ್ಮೀಸಾಗರ್‌ರವರು ರಾಜ್ಯದ ಹಿತದೃಷ್ಟಿಯಿಂದ ಬಹಳ ಉತ್ತಮವಾದ ಸಲಹೆಗಳನ್ನು ಕೊಡುತ್ತಿದ್ದರು. ಅವರು ಇವತ್ತು ನಮ್ಮನ್ನು ಅಗಲಿದ್ದಾರೆ. ಅದೇ ರೀತಿಯಾಗಿ ಶ್ರೀ ಮೆರಾಜುದ್ದೀನ್ ಎನ್.ಪಟೇಲ್, ಶ್ರೀ ವಿಶ್ವನಾಥ್ ರಡ್ಡಿ ಮುದ್ನಾಳ್ ಹಾಗು ಶ್ರೀ ಹೆಚ್.ಎನ್.ನಂಜೇಗೌಡರು ನಮ್ಮನ್ನು ಅಗಲಿದ್ದಾರೆ. ಶ್ರೀ ನಂಜೇಗೌಡರು ಅಕಾಲಿಕವಾದಂಥ ಮರಣಕ್ಕೆ ತುತ್ತಾಗಿದ್ದಾರೆ. ನಮ್ಮ ಮಧ್ಯದಲ್ಲಿ ಬಹಳ ವರ್ಷಗಳ ಕಾಲ ಅವರು ಇರಬೇಕಾಗಿತ್ತು. ಅವರು ಜೀವನದಲ್ಲಿ ಯಾವುದೇ ತರಹವಾದ ನೋವನ್ನು ಅನುಭವಿಸದೇ ಪ್ರಕೃತಿಯನ್ನು ಸೇರಿದಂಥವರು. ನಂಜೇಗೌಡರು ಯಾರಿಗೆ ಪರಿಚಯವಿಲ್ಲ. ಲೋಕ ಸಭೆ ಮತ್ತು ವಿಧಾನಸಭೆಯ ಸದಸ್ಯರಾಗಿ ಅವರು ನೀರಾವರಿ ಕ್ಷೇತ್ರದಲ್ಲಿ ಮಾಡಿದಂಥ ಅಪೂರ್ವವಾದ ಸೇವೆಯನ್ನು ನಾವು ನೆನಸಬೇಕಾಗುತ್ತದೆ. ಅವರು ದಿವಂಗತ ಚನ್ನಬಸಪ್ಪನವರ ಪರಮ ಆಪ್ತರಾಗಿ, ಅವರ ಶಿಷ್ಯರಾಗಿ ನೀರಾವರಿ ವಿಚಾರದಲ್ಲಿ ತಮ್ಮದೇ ಆದಂಥ ರೀತಿಯಲ್ಲಿ ನೀರಾವರಿ ತಜ್ಞರಾಗಿ ಹೆಸರುವಾಸಿಯನ್ನು ಪಡೆದಂಥವರು. ಯಾವುದೇ ಪಕ್ಷದವರು ಅಧಿಕಾರದಲ್ಲಿದ್ದರೂ ಕೂಡ ಯಾವುದೇ ಸಂದರ್ಭದಲ್ಲಿ ನಾವು ದೆಹಲಿಗೆ ಹೋಗುವ ಸಂದರ್ಭ ಬಂದರೂ ಶ್ರೀ ನಂಜೇಗೌಡರು ನಮಗೆ ಬೇಕಾಗುತ್ತಿತ್ತು. ಅಧಿಕಾರಿಗಳಿಗೆ ಸಹಾಯವನ್ನು ಮಾಡುತ್ತಿದ್ದರು. ಯಾವುದೇ ಸಂದರ್ಭದಲ್ಲಿಯಾದರೂ ನಿಯೋಗ ಹೋಗುವಾಗ ಶ್ರೀ ನಂಜೇಗೌಡರು ಇಲ್ಲದೇ ಯಾವ ನಿಯೋಗವಿಲ್ಲವೆನ್ನುವಂಥ ರೀತಿಯಲ್ಲಿತ್ತು. ಅವರು ಕರ್ನಾಟಕದ ನೀರಾವರಿ ಬಗ್ಗೆ ಹೆಚ್ಚಿನ ಕಾಳಜಿಯವನ್ನು ವಹಿಸಿದ್ದರು. ನಂಜೇಗೌಡರ ವಿಚಾರದಲ್ಲಿ ನಾನು ಸಭಾನಾಯಕರ ಹಾಗು ತಮ್ಮ ಗಮನಕ್ಕೂ ತರುವಂಥದ್ದೇನೆಂದರೆ, ಅವರು ನೀರಾವರಿ ವಿಷಯಕ್ಕೆ ಸಂಬಂಧಪಟ್ಟಂತೆ ಮಾಡಿದ ಹೋರಾಟ, ನೀರಾವರಿ ಬಗ್ಗೆ ಇದ್ದಂಥ ಆಸಕ್ತಿಯ ಬಗ್ಗೆ, ನೀರಾವರಿಗೆ ಸಂಬಂಧಪಟ್ಟಂತೆ ಅವರು ತಮ್ಮದೇ ಆದಂಥ ಅನೇಕ ದಾಖಲಾತಿಗಳನ್ನು, ಮಾಹಿತಿಗಳನ್ನು ಹೊಂದಿದ್ದರು. International Law ಬಗ್ಗೆ ಇವತ್ತು ಪುಸ್ತಕಗಳು ನಮ್ಮ ಲೈಬ್ರರಿಯಲ್ಲಿ ದೊರೆಯುತ್ತದೋ ಇಲ್ಲವೋ, ಅಂಥ ಪುಸ್ತಕಗಳನ್ನು ಅವರು ಇಟ್ಟಿದ್ದರು. ಬಹುಶ: ಇವತ್ತು ಶ್ರೀ ಬಾಳೇಕುಂದ್ರಿಯವರು ಕರ್ನಾಟಕಕ್ಕೆ ಏನು ಸೇವೆಯನ್ನು ಸಲ್ಲಿಸಿದ್ದಾರೆ ಅಷ್ಟೇ ದೊಡ್ಡ ಪ್ರಮಾಣದಲ್ಲಿ ಶ್ರೀ ನಂಜೇಗೌಡರು ಸೇವೆಯನ್ನು ಸಲ್ಲಿಸಿದ್ದಾರೆ. ಮತ್ತೊಂದು ಸಂತೋಷದ ಸಂಗತಿಯೇನೆಂದರೆ, ನಂಜೇಗೌಡರ ಅಳಿಯಂದಿರು ಇವತ್ತು ವಿಧಾನಸಭೆಯ ಸದಸ್ಯರಾಗಿದ್ದಾರೆ. ನಂಜೇಗೌಡರಲ್ಲಿದ್ದಂಥ ದಾಖಲಾತಿ, ಮಾಹಿತಿ

ಗಳನ್ನು ತರಿಸಿಕೊಂಡು ಬಹುಶ: ಅದನ್ನು ಲೈಬ್ರರಿಯಲ್ಲಿಡುವಂಥದ್ದು ಅಥವಾ ಆ ಮಾಹಿತಿಗಳನ್ನು ಹುಡುಕಿಸಿ ಯಾರಿಗಾದರೂ ಪ್ರೋತ್ಸಾಹಿಸಿ ಅದನ್ನು ಅಧ್ಯಯನವನ್ನು ಮಾಡುವುದಕ್ಕೆ ಅವಕಾಶವನ್ನು ಮಾಡಿದರೆ ಬಹಳ ಒಳ್ಳೆಯುದು ಎಂದು ನನಗನ್ನಿಸುತ್ತದೆ. ಶ್ರೀ ಬಸವರಾಜ ಬೊಮ್ಮಾಯಿಯವರ ಬಗ್ಗೆ ನಾನು ಬಹಳ ಮೆಚ್ಚುಗೆಯಿಂದ ಹೇಳುತ್ತೇನೆ. ತಾವು ಸಮರ್ಥವಾಗಿರುವ ನೀರಾವರಿ ಸಚಿವರಾಗಿದ್ದೀರಿ. ಇವತ್ತು ಬಾಳೇಕುಂದ್ರಿಯವರು ಉತ್ತಮವಾದ ಸೇವೆಯನ್ನು ಸಲ್ಲಿಸಿದ್ದಾರೆ. ಅದೇ ರೀತಿ ನಂಜೇಗೌಡರು ನೀರಾವರಿ ವಿಚಾರ ಬಂದಾಗ ಸರ್ಕಾರವನ್ನು ಬಡಿದೆಬ್ಬಿಸಿ ಎಚ್ಚರಿಸುತ್ತಿದ್ದರು, ಕೇಂದ್ರ ಸರ್ಕಾರಕ್ಕೆ ಹೋದಾಗ ಪ್ರಧಾನ ಮಂತ್ರಿಗಳ ಹತ್ತಿರ ಮಾತನಾಡುವಾಗ ಬಹಳ ಸ್ಪಷ್ಟವಾಗಿ, ಖಚಿತವಾಗಿ ಮಾತನಾಡುತ್ತಿದ್ದರು ಎನ್ನುವುದನ್ನು ನೋಡಿದವರಿಗೆ ಗೊತ್ತಾಗುತ್ತದೆ. ಬಹುಶ: ಅವರು ಏನು ವ್ಯಾಸಂಗ ಮಾಡಿದ್ದರು ಆ ಎಲ್ಲಾ ಪೂರ್ಣವಾದ ಮಾಹಿತಿಯನ್ನು ತರಿಸಿ ಅದನ್ನು ಮರೆಯಲಾರದಂತೆ ಯಾವುದಾದರೊಂದು ರೀತಿಯಲ್ಲಿ ಒಂದು ಅಧ್ಯಯನವನ್ನು ಮಾಡಿಸುವ ಚಿಂತನೆಯನ್ನು ಮಾಡಿದರೆ ಬಹಳ ಒಳ್ಳೆಯಧು ಎಂಬುದು ನನ್ನ ಭಾವನೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅದೇ ರೀತಿಯಾಗಿ ಶ್ರೀ ಆಂಜಿನಪ್ಪನವರು ನನ್ನ ಮತಕ್ಷೇತ್ರದಿಂದ ಆಯ್ಕೆಯಾಗಿದ್ದಂಥವರು. ನನ್ನ ಮತಕ್ಷೇತ್ರ ಪಾವಗಡಕ್ಕೆ ಹೊಂದಿಕೊಂಡಿತ್ತು. ಅವರು ಶಿರಾದಿಂದಲೂ ಆಯ್ಕೆಯಾಗಿದ್ದರು ಮತ್ತು ಪಾವಗಡದಿಂದಲೂ ಆಯ್ಕೆಯಾಗಿದ್ದರು. ಸ್ವಾತಂತ್ರ್ಯದ ನಂತರ ಅತ್ಯಂತ ಪ್ರಾಮಾಣಿಕರಾದ ಶಾಸಕರು ಎಂದರೆ ಶ್ರೀ ಆಂಜಿನಪ್ಪನವರು ಎಂದು ಹೇಳಿದರೆ ತಪ್ಪಾಗಲಾರದು. ಬಹಳ ವರ್ಷಗಳ ಕಾಲ ಬದುಕಿದ್ದರು. ಅತ್ಯಂತ ಪ್ರಾಮಾಣಿಕವಾದ ಜೀವನವನ್ನು ನಡೆಸಿಕೊಂಡು ಬಂದರು. ಅವರ ಜೀವನದ ಕೊನೆಯ ದಿವಸದ ವರೆಗೂ ಅತ್ಯಂತ ಸಣ್ಣ ಗುಡಿಸಲಿನಲ್ಲಿ ಜೀವನ ಮಾಡಿದಂಥ ಒಬ್ಬ ವ್ಯಕ್ತಿ. ಅವರ ಜೀವಿತ ಕಾಲದಲ್ಲಿ ಅವರ ಮಗಳು ದೊಡ್ಡ ಡಾಕ್ಟರ್ ಆಗಿದ್ದರು. ಮಗ ಕೆಲಸದಲ್ಲಿದ್ದರೂ ಕೂಡ ಮಕ್ಕಳ ಬಳಿ ಶ್ರೀ ಆಂಜಿನಪ್ಪನವರು ಹೋಗುತ್ತಿರಲಿಲ್ಲ. ಅಷ್ಟೊಂದು ಪ್ರಾಮಾಣಿಕವಾಗಿ ನೈಜವಾಗಿ ಜೀವನವನ್ನು ನಡೆಸಿದ್ದಂಥ ಒಬ್ಬ ಪ್ರಾಮಾಣಿಕ ವ್ಯಕ್ತಿ. ಹರಿಜನರ ಮುಖಂಡರಾಗಿದ್ದರು. ಸ್ವಾತಂತ್ರ್ಯದ ವಿಚಾರದಲ್ಲಿ ಅಂದರೆ Republic Day, Independence Day ಇರಬಹುದು, ಅವರು ತುಮಕೂರಿನಲ್ಲಿ ಬಂದು ಪ್ರೇಕ್ಷಕರ ಸಾಲಿನಲ್ಲಿ ಕುಳಿತು ವೀಕ್ಷಿಸುತ್ತಿದ್ದಾಗ ನಿಜವಾಗಿಯೂ ಎಂಥವರಿಗಾದರೂ ಹೃದಯತುಂಬಿ ಬರುತ್ತಿತ್ತು. ಅದೇ ರೀತಿಯಾಗಿ ನಮ್ಮ ಯಂಕನಾಯಕ್, ಮಾಣಿಕ್‌ರಾವ್ ಪುಲೇಕರ್‌ರವರು, ಎಂ.ಆರ್.ಪಾಟೀಲ್,

ಎಲ್.ಎಸ್.ನಾಯಕ್, ರುದ್ರಗೌಡ ಹುಣಸೀಹಾಳ್, ಎಂ.ಶ್ರೀನಿವಾಸ್‌ರವರು ಇಂದು ನಮ್ಮನ್ನು ಅಗಲಿದ್ದಾರೆ. ಎಂ.ಶ್ರೀನಿವಾಸ್‌ರವರು ಶ್ರೀರಂಗಪಟ್ಟಣದಿಂದ 1978ರಲ್ಲಿ ಆರನೇ ವಿಧಾನಸಭೆಗೆ ಆಯ್ಕೆಯಾಗಿದ್ದಂಥವರು. ಅವರೂ ಕೂಡ ಬಹಳ ವಾಕ್ಚಾತುರ್ಯವುಳ್ಳಂಥವರಾಗಿದ್ದರು. ಯಾವುದೇ ವಿಚಾರವನ್ನೂ ಕೂಡ ನೇರವಾಗಿ ಸಮರ್ಥವಾಗಿ ಪ್ರಸ್ತಾಪ ಮಾಡುವಂಥ ಒಬ್ಬ ಯುವಕರಾಗಿ ಅಂದಿನ ದಿನಗಳಲ್ಲಿ ಸೇವೆ ಸಲ್ಲಿಸಿದ್ದರು ಎನ್ನುವಂಥ ಮಾತನ್ನು ಹೇಳುತ್ತೇನೆ. ಮೋಹನ್ ಕೃಷ್ಣ ಶೆಟ್ಟಿ ನಮ್ಮನ್ನು ಅಗಲಿದ್ದಾರೆ. ಡಿ.ಸಿ.ಶ್ರೀಕಂಠಪ್ಪನವರ ಬಗ್ಗೆ ಹೇಳುವುದಾದರೆ ನಾನು ಕೃಷಿ ಸಚಿವನಾಗಿದ್ದಾಗ ಅವರು ಸಂಸತ್ ಸದಸ್ಯರಾಗಿದ್ದರೂ ಕೂಡ ಯಾವುದೇ ರೈತರ ವಿಚಾರ ಬಂದಾಗಲೂ ಸಹ ನೇರವಾಗಿ ಬಂದು ಕುಳಿತು ರೈತರ ಬಗ್ಗೆ ಚರ್ಚೆಯನ್ನು ಮಾಡುತ್ತಿದ್ದರು. ನಾನು ಒಂದು ಪಕ್ಷಕ್ಕೆ ಸೇರಿದ್ದರೂ, ಅವರೊಂದು ಪಕ್ಷಕ್ಕೆ ಸೇರಿದ್ದರೂ ಕೂಡ ಅದ್ಯಾವುದನ್ನು ಕೂಡ ಲೆಕ್ಕಕ್ಕೆ ಇಡದೇ ಮನೆಗೆ ಬಂದು ಉತ್ತಮವಾದ ಸಲಹೆಗಳನ್ನು ಕೊಡುವಂಥ ಕೆಲಸವನ್ನು ಮಾಡುತ್ತಿದ್ದರು. ಅದೆಲ್ಲಕ್ಕಿಂತಲೂ ಹೆಚ್ಚಾಗಿ ಇವತ್ತು ಬಸವರಾಜ ಬೊಮ್ಮಾಯಿಯವರು ಭದ್ರಾ ಮೇಲ್ದಂಡೆಯ ಯೋಜನೆಯ ಬಗ್ಗೆ ಉಸ್ತುವಾರಿಯನ್ನು ವಹಿಸಿ ಅದನ್ನು ಕಾರ್ಯರೂಪಕ್ಕೆ ತರಲಿಕ್ಕೆ ಪ್ರಾಮಾಣಿಕವಾಗಿ ಪ್ರಯತ್ನವನ್ನು ಪಡುತ್ತಿದ್ದಾರೆ. ಅದು ಡಿ.ಸಿ.ಶ್ರೀಕಂಠಪ್ಪನವರ ಕನಸಿನ ಕೂಸು ಎಂದು ಹೇಳಿದರೆ ತಪ್ಪಾಗಲಾರದು. ಅವರೂ ಕೂಡ ಭದ್ರಾ ಮೇಲ್ದಂಡೆ ವಿಚಾರದಲ್ಲಿ ಬಹಳಷ್ಟು ಶ್ರದ್ಧೆಯನ್ನು ವಹಿಸಿ ಸರ್ಕಾರಕ್ಕೆ ಸಲಹೆಯನ್ನು ಕೊಡಿಸುವಂಥ ಕೆಲಸವನ್ನು ಮಾಡುತ್ತಿದ್ದರು. ನನ್ನ ಮತ್ತು ಶ್ರೀಕಂಠಪ್ಪನವರ ವಿಚಾರಗಳು ಬೇರೆ ಬೇರೆಯಾದರೂ ಕೂಡ ನೀರಾವರಿ ಕ್ಷೇತ್ರಕ್ಕೆ ಹೆಚ್ಚು ಸೇವೆಯನ್ನು ಕೊಡಬೇಕೆಂಬ ತೀರ್ಮಾನದಲ್ಲಿದ್ದಂಥವರು. ಇನ್ನೂ ಬಹಳ ಮುಖ್ಯವಾಗಿ ಈ ಮುಂಬೈನಲ್ಲಿ ಆದಂಥ ಭಯೋತ್ಪಾದಕ ಘಟನೆಯಿಂದಾಗಿ ನೂರಾರು ಜನರು ಈ ದೇಶದಲ್ಲಿ ಸತ್ತು ಹೋದರು. ಈ ಘಟನೆಯಲ್ಲಿ ಉನ್ನಿಕೃಷ್ಣನ್‌ರವರು, ವಿಜಯ್ ಸಾಲಸ್ಕರ್‌ರವರು, ಕಮಾಂಡೋರವರು ಇವರೆಲ್ಲರೂ ಕೂಡ ತಮ್ಮ ಜೀವನವನ್ನು ಅರ್ಪಿಸಿ ಆ ಭಯೋತ್ಪಾದಕರ ವಿರುದ್ಧ ಹೋರಾಟ ಮಾಡಿ ಈ ದೇಶವನ್ನು ರಕ್ಷಣೆ ಮಾಡುವಂಥ ಕೆಲಸವನ್ನು ಮಾಡಿದ್ದಾರೆ. ಇವತ್ತು ನಾವು ಒಂದು ಪಾಠವನ್ನು ಕಲಿಯಬೇಕಾಗುತ್ತದೆ. ಭಯೋತ್ಪಾದನೆ ಈ ದೇಶದಲ್ಲಿ ಮತ್ತೊಮ್ಮೆ ಮರುಕಳಿಸದ ರೀತಿಯಲ್ಲಿ ಮಾಡಬೇಕಾದರೆ ರಾಜ್ಯ ಮತ್ತು ಕೇಂದ್ರ ಸರ್ಕಾರ ಸಾಕಷ್ಟು ರೀತಿಯಲ್ಲಿ ಹೊಂದಾಣಿಕೆಯನ್ನು ಮಾಡಿಕೊಂಡು ಕೆಲಸವನ್ನು ಮಾಡಬೇಕಾಗುತ್ತದೆ. ಮುಂಜಾಗ್ರತಾ ಕ್ರಮಗಳನ್ನು

ತೆಗೆದುಕೊಳ್ಳಬೇಕಾಗುತ್ತದೆ. ಬೆಂಗಳೂರಿನ ಮೇಲೆ ಇವತ್ತು ಎಲ್ಲರಿಗೂ ಕೂಡ ಕಣ್ಣಿದೆ. ಬೆಂಗಳೂರು ಇಡೀ ಏಷ್ಯಾದಲ್ಲೇ ಬಹಳ ಮುಂದುವರಿಯುತ್ತಿರುವ ನಗರವಾಗಿರುವುದರಿಂದ ಆ ನಗರದ ಮೇಲೆ ಇಡೀ ಪ್ರಪಂಚದ ಕಣ್ಣಿದೆ. ಭಯೋತ್ಪಾದನೆ ಏಕಿಲ್ಲಿ ಜಾಸ್ತಿ ನಡೆಯುತ್ತದೆಂದರೆ ಇವತ್ತು ಇಡೀ ದೇಶಕ್ಕೆ ಒಂದು ಕಿರೀಟಪ್ರಾಯವಾಗಿ ಇರುವಂಥ ಬೆಂಗಳೂರು ನಗರದ ಪ್ರಗತಿಯನ್ನು ಕುಂಠಿತಗೊಳಿಸಲು ಭಯೋತ್ಪಾದಕರು ವಿದೇಶದಿಂದ ಸಂಚನ್ನು ಮಾಡುವ ಸಾಧ್ಯತೆಗಳಿರುತ್ತವೆ. ಅದರ ಬಗ್ಗೆ ಕೂಡ ಎಚ್ಚರವನ್ನು ವಹಿಸಬೇಕಾಗುತ್ತದೆ.

ಇವತ್ತು ಇಡೀ ದೇಶಕ್ಕೆ ಒಂದು ಕಿರೀಟಪ್ರಾಯವಾಗಿ ಇರತಕ್ಕಂಥ ಬೆಂಗಳೂರಿನ ಮೇಲೆ, ಅದರ ಪ್ರಗತಿಯನ್ನು ಕುಂಟಿತಗೊಳಿಸಲಾಗಿದೆ. ಭಯೋತ್ಪಾದಕರು ಇವತ್ತು ವಿದೇಶದಿಂದ ಸಂಚನ್ನು ಮಾಡತಕ್ಕಂಥ ಸಾಧ್ಯತೆಗಳು ಇರುತ್ತವೆ. ಅದರ ಬಗ್ಗೆ ಎಚ್ಚರಿಕೆಯನ್ನು ವಹಿಸಬೇಕಾಗುತ್ತದೆ. ಸರ್ಕಾರದ ಮಟ್ಟದಲ್ಲಿ ಹೆಚ್ಚಿನ ಕಾರ್ಯಕ್ರಮಗಳನ್ನು ಮಾಡಬೇಕಾಗುತ್ತದೆ. ಮೇಜರ್ ಸಂದೀಪ್ ಉನ್ನಿಕೃಷ್ಣನ್‌ರವರು ತೀರಿಕೊಂಡಂಥ ಸಂದರ್ಭದಲ್ಲಿ ಬಹುಶ: ನಾನು ಕಂಡಿದ್ದು ಏನೆಂದರೆ, ನಮ್ಮ ಜಿಲ್ಲೆಗೆ ಅಲ್ಲದೆ ಬೇರೆ ಬೇರೆ ಜಿಲ್ಲೆಗಳಿಗೆ ಹೋದಂತಹ ಸಂದರ್ಭದಲ್ಲಿ ಯಾವ ಶಾಲೆಯಲ್ಲಿ ಹಾಗೂ ಎಲ್ಲೇ ಹೋದರೂ ಕೂಡ ಜನರು ದು:ಖ ಹಾಗೂ ಅನುಕಂಪವನ್ನು ವ್ಯಕ್ತಪಡಿಸುತ್ತಿದ್ದರು. ಅವರ ಹೆಸರಿನಲ್ಲಿ ಇವತ್ತು ನಡೆಸತಕ್ಕಂಥ ಕಾರ್ಯಕ್ರಮಗಳು ಇಟ್ಟಿರುವಂಥದ್ದು ಒಂದು. ಅದೇ ರೀತಿಯಾಗಿ ಈಗಲೂ ಕೂಡ ಸರ್ಕಾರದ ಮಟ್ಟದಲ್ಲಿ ಸ್ವಾಮಿ ವಿವೇಕಾನಂದರ ಹೆಸರಿನಲ್ಲಿ ಅವರ ಜನ್ಮ ದಿನೋತ್ಸವದ ವರ್ಷದಲ್ಲಿ ಭಯೋತ್ಪಾದನೆಗೆ ಸಂಬಂಧಪಟ್ಟಂತೆ ಅದೇ ಹೆಸರಿನಲ್ಲಿ ಒಂದು ಕಾರ್ಯಕ್ರಮವನ್ನು ಮಾಡುತ್ತಿದ್ದೀರಿ ಮತ್ತು ಸ್ವಾಮಿ ವಿವೇಕಾನಂದ ಹಾಗೂ ಭಯೋತ್ಪಾದಕರ ಹೆಸರಿನಲ್ಲಿ ಇವತ್ತು ತಳುಕು ಆಗುತ್ತಿರುವಂತಹ ಕೆಲಸ ಸರ್ಕಾರದಲ್ಲಿ ನಡೆಯುತ್ತಿದೆ. ಅಧಿಕೃತವಾಗಿ ಎಲ್ಲಾ ಕಾರ್ಯಕ್ರಮಗಳನ್ನು ಮಾಡುತ್ತಿದ್ದೀರಿ. ಯಾವ ರೀತಿಯಾಗಿ ಮಾಡುತ್ತಿದ್ದೀರಿ? ಅದಕ್ಕೆ ಆಧಾರ ಏನು ಎನ್ನುವುದನ್ನು ಕೂಡ ಮುಂದಿನ ಸಭೆಯಲ್ಲಿ ನಡೆಯುವಂತಹ ನಡವಳಿಕೆಯಲ್ಲಿ ತಾವು ತಿಳಿಸಬೇಕಾಗುತ್ತದೆ. ನಾನು ಸಭೆಗೆ ಬರುವುದಕ್ಕೆ ಮುಂಚೆ ಕಾಲೇಜು ಪ್ರಿನ್ಸಿಪಾಲ್‌ರವರು ಫೋನ್ ಮಾಡಿ, ಭಯೋತ್ಪಾದಕರ ವಿರುದ್ಧವಾಗಿ ಒಂದು awareness create ಮಾಡುವುದಕ್ಕೆ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆಂದು ಹೇಳಿದರು. ತಾಲ್ಲೂಕಿನ ಶಾಸಕರಾಗಿ ನಿಮ್ಮ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಇದೆ. ಜಿಲ್ಲೆಯಲ್ಲಿ ಒಂದು ಸಮಿತಿ

ಇದೆ. ರಾಜ್ಯ ಮಟ್ಟದಲ್ಲಿ ಒಂದು ಸಮಿತಿ ಇದೆ. ಇದರ ಬಗ್ಗೆ ಇಲ್ಲಿಯವರೆಗೆ ಯಾವುದೇ ರೀತಿಯಾದ ಅಧಿಕೃತ ಸರ್ಕಾರಿ ಆದೇಶ ನೋಡಲಿಲ್ಲ. ಸರ್ಕಾರಿ ಆದೇಶ ಇದ್ದಿದ್ದರೆ ನನಗೆ ಗೊತ್ತಾಗುತ್ತಿತ್ತು. ಆದರೆ, ನಮಗೆ ಮೌಖಿಕವಾಗಿ ಕೊಟ್ಟಂಥ ವರ್ತಮಾನದಿಂದಾಗಿ ಇದು ನಡೆಯುತ್ತಿರುವುದನ್ನು ನೋಡಿದಾಗ ಬಹುಶ: ಎಲ್ಲೋ ಒಂದು ಕಡೆ, ಸ್ವಾಮಿ ವಿವೇಕಾನಂದರವರ ಸಾಧನೆ ನೋಡಿದಾಗ ಅವರು ಈ ದೇಶದಲ್ಲಿ ನಿಜವಾಗಲೂ ಸಹ ಒಬ್ಬ ಪೂಜ್ಯನೀಯ ವ್ಯಕ್ತಿಯಾಗಿದ್ದಾರೆ. ಹಿಂದು ಧರ್ಮವನ್ನು ಎತ್ತು ಹಿಡಿದಂತಹ ಮಹಾನ್ ನಾಯಕರು ಸ್ವಾಮಿ ವಿವೇಕಾನಂದರು. ಆದರೆ, ಸ್ವಾಮಿ ವಿವೇಕಾನಂದರು ಮತ್ತು ಭಯೋತ್ಪಾದಕರಿಗೆ ತಳುಕು ಆಗುತ್ತಾ ಇರುವುದು ಎಷ್ಟರಮಟ್ಟಿಗೆ ಸರಿ ಎನ್ನುವುದನ್ನು ನಾಳೆ ಅಧಿವೇಶನ ನಡೆಯುವ ಸಂದರ್ಭದಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡೋಣ ಎಂದು ಹೇಳಿ, ತಾವು ಏನು ಶ್ರದ್ಧಾಂಜಲಿಯನ್ನು ಅರ್ಪಿಸಬೇಕೆಂದು ಅಪೇಕ್ಷೆ ಪಟ್ಟಿದ್ದೀರಿ ಅದಕ್ಕೆ ನನ್ನ ಸಹಮತಿಯನ್ನು ವ್ಯಕ್ತಪಡಿಸಿ, ಮೃತರ ಆತ್ಮಕ್ಕೆ ಶಾಂತಿ ಕೋರಿ ಮತ್ತು ಅದರ ಜೊತೆಗೆ ಅವರ ಅಗಲಿಕೆಯಿಂದ ನೋವಿನಲ್ಲಿರುವಂತಹ ಬಹಳಷ್ಟು ಜನ ಏನಿದ್ದಾರೆ ಅವರೆಲ್ಲರಿಗೂ ಶಾಂತಿ ಸಿಗಲಿ ಎಂದು ಹೇಳಿ ಹಾರೈಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸುರೇಶ್‌ಕುಮಾರ್ ಎಸ್. (ಕಾನೂನು ಸಂಸದೀಯ ವ್ಯವಹಾರ, ಮಾನವ ಹಕ್ಕುಗಳು ಮತ್ತು ಶಾಸನ ರಚನೆ, ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳ ಸಚಿವರು):- ಮಾನ್ಯ ಸಭಾಧ್ಯಕ್ಷರೇ, ಇವತ್ತು ಏನು ಸದನದ ಮುಂದೆ ಪ್ರಧಾನ ಮಂತ್ರಿ ದಿವಂಗತ ವಿ.ಪಿ.ಸಿಂಗ್‌ರವರು, 15 ಜನ ಪ್ರಮುಖರು ಹಾಗೂ ಮುಂಬೈಯಲ್ಲಿ ನಡೆದ ಏನು ದುರಂತ ಇದೆ ಅದರಲ್ಲಿ ಯಾರು ಪ್ರಾಣವನ್ನು ಬಲಿದಾನ ಮಾಡಿದ್ದಾರೆ ಅವರಿಗೆ ಇವತ್ತು ಸಂತಾಪ ಸೂಚಿಸುವ ಪ್ರಸ್ತಾಪವನ್ನು ಸದನದಲ್ಲಿ ಇಟ್ಟಿದ್ದೀರಿ, ಅದಕ್ಕೆ ನಾನು ನನ್ನ ಕೆಲವು ಭಾವನೆಗಳಿಂದ ಕೂಡಿದ ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಶ್ರೀ ಟಿ.ಬಿ.ಜಯಚಂದ್ರರವರು ಭಯೋತ್ಪಾದನೆ ಬಗ್ಗೆ ಚೆನ್ನಾಗಿ ಹೇಳಿದ್ದಾರೆ. ಇವತ್ತು ನನಗನಿಸುವುದು ದಿವಂಗತ ವಿ.ಪಿ. ಸಿಂಗ್‌ರವರು, ಎ.ಲಕ್ಷೀಸಾಗರ್‌ರವರು ಹಾಗೂ ಹೆಚ್.ಎನ್.ನಂಜೇಗೌಡರು ಇವರೆಲ್ಲರನ್ನೂ ನೋಡಿದಾಗ ಸಮಾಜ ಇವತ್ತು Heroಗಳಿಗೋಸ್ಕರ ಹಾತೊರೆಯುತ್ತಿದೆ. ಮೇಲ್ಪಂಕ್ತಿಗೋಸ್ಕರ ಹಾತೊರೆಯುತ್ತಿದೆ ಹಾಗೂ Iconsಗೋಸ್ಕರ ಹಾತೊರೆಯುತ್ತಿದೆ. ಇವತ್ತು ದಿವಂಗತ ವಿ.ಪಿ.ಸಿಂಗ್‌ರವರು ಪ್ರಾಯಶ: ತುರ್ತು ಪರಿಸ್ಥಿತಿಯ ನಂತರ ಈ ದೇಶದಲ್ಲಿ ಮತ್ತೊಮ್ಮೆ ಚೈತನ್ಯ ಕೊಟ್ಟು, ಒಂದು ಜನಾಂದೋಲನವನ್ನು ರೂಪಿಸಿ,

ಸಾರ್ವಜನಿಕ ಬದುಕಿನಲ್ಲಿ ಒಂದು ಸ್ವಚ್ಚತೆಯನ್ನು ನೋಡಬೇಕು ಎನ್ನುವ ನೇತೃತ್ವ ಕೊಟ್ಟ ಮಹಾನ್ ಧೀಮಂತ. ಶ್ರೀ ವಿ.ಪಿ.ಸಿಂಗ್ ನಾವು ರಾಜಕಾರಣದಲ್ಲಿ ನೋಡಿದ ಅತ್ಯಂತ ಅಪರೂಪದ ವ್ಯಕ್ತಿ. ತಾವು ತಮ್ಮ ಪ್ರಸ್ತಾಪದಲ್ಲಿ ತಿಳಿಸಿರುವ ಹಾಗೆ ರಾಜ ಮನೆತನದ ಹಿನ್ನೆಲೆಯಿಂದ ಬಂದರೂ ಕೂಡ ಒಬ್ಬ ಸಾಮಾನ್ಯ ರಾಜಕೀಯ ಕಾರ್ಯಕರ್ತನ ರೀತಿ ಕಾರ್ಯ ಮಾಡಿ, ಯಾವುದೇ hangover ಇಲ್ಲದೇ ಒಬ್ಬ ರಾಜಕೀಯ ಕಾರ್ಯಕರ್ತನ ತರಹ ಕೆಲಸ ಮಾಡಿ, ಎಲ್ಲರಿಗೂ ಕೂಡ ಉತ್ಸಾಹ ತೋರುವಂತಹ, ಮೇಲ್ಪಂಕ್ತಿ ತೋರುವಂತಹ ವ್ಯಕ್ತಿಯಾಗಿದ್ದರು. ರಾಜ ಮನೆತನದಿಂದ ಬಂದರೂ ಕೂಡ 1950ರ ದಶಕದಲ್ಲಿ ವಿನೋಬಾ ಬಾವೆಯವರ ಭೂದಾನ ಚಳುವಳಿಯಿಂದ ಆಕರ್ಷಿತರಾಗಿ ತಮ್ಮ ಆಸ್ತಿಯೆಲ್ಲವನ್ನೂ ಕೂಡ ದಾನ ಮಾಡಿದ ಒಬ್ಬ ದೀಮಂತ ವ್ಯಕ್ತಿ. ವಿಶೇಷವಾಗಿ ಎಲ್ಲರೂ ಹೇಳುವ ಹಾಗೆ ರಾಜಕಾರಣ ಅಂದರೆ 24X7 ಎಂದು ಆಗಿ ಬಿಟ್ಟಿದೆ. ಆದರೆ, ಶ್ರೀ ವಿ.ಪಿ. ಸಿಂಗ್‌ರವರು ಕವಿ ಹೃದಯ ಇಟ್ಟುಕೊಂಡು ತಾನು ತುಂಬಾ ಅಸ್ವಸ್ಥರಾಗಿದ್ದ ಕಾಲದಲ್ಲೂ ಕೂಡ ತನ್ನ ಆಸಕ್ತಿಯಾಗಿದ್ದ paintingಅನ್ನು ಬಿಡದೆ ಕೊನೆಯ ದಿನಗಳವರೆಗೆ ಕೂಡ ಎಲ್ಲಿ ಅನ್ಯಾಯ ನಡೆದರೆ ಅಲ್ಲಿ ಧಾವಿಸಿ ಹೋಗಿ ತನ್ನ ಧ್ವನಿಯನ್ನು ಕೂಡ ಸೇರಿಸಿ ತನ್ನ ಪ್ರಾಮುಖ್ಯತೆಯನ್ನು ತೋರಿಸಿದ ಒಬ್ಬ ಮಹಾನ್ ವ್ಯಕ್ತಿ. ಜೊತೆಗೆ ಬಹಳ ಅಪರೂಪದ ವ್ಯಕ್ತಿ. ತಾನು ನಂಬಿದ ಸಿದ್ಧಾಂತಕ್ಕೆ ಎಲ್ಲಾದರೂ ತೊಂದರೆ ಆದರೆ, ಪ್ರತಿಭಟಿಸಿ ಆಚೆ ಬಂದಂಥವರು. ತಾವು ಹೇಳಿದ ಹಾಗೆ ಮುಖ್ಯಮಂತ್ರಿ ಆದಾಗ ಕೂಡ ಇರಬಹುದು. ಕೇಂದ್ರದ ಮಂತ್ರಿಯಾದಾಗ ಕೂಡ ಇರಬಹುದು, ಎಲ್ಲವನ್ನೂ ಕೂಡ ವಿಶೇಷವಾಗಿ ಬೊಫೋರ್ಸ್ ಪ್ರಕರಣ ಆದಾಗ ಕೂಡ ತನ್ನ ದಿಟ್ಟ ನಿಲುವನ್ನು ತೋರಿಸಿ ಮತ್ತೊಮ್ಮೆ ಭರವಸೆಯನ್ನು ಹುಟ್ಟಿಸಿದ ಒಬ್ಬ ನಾಯಕ. ನಂತರ ಜನಮೋರ್ಚಾ ಮೂಲಕ ಇಡೀ ದೇಶದಲ್ಲಿ ಆಂದೋಲನವನ್ನು ಮಾಡಿ ಹೋರಾಟ ಮಾಡಿದ್ದರು. Prevention of Atrocity Act ಬಗ್ಗೆ ಆಸಕ್ತಿ ತೋರಿಸಿ ಒಂದು ಸಾಮಾಜಿಕ ಸಮಾನತೆಯ ಭಾಷೆಯನ್ನು ಬರೆದವರು ಕೂಡ ವಿ.ಪಿ. ಸಿಂಗ್‌ರವರು. ವಿ.ಪಿ.ಸಿಂಗ್‌ರವರು ಪ್ರಧಾನ ಮಂತ್ರಿಯಾಗಿದ್ದಾಗ ಬಹಳ ಕಡಿಮೆ ಅವಧಿಯಲ್ಲಿ ಕೂಡ ಇಡೀ ದೇಶ ನೆನಪು ಇಟ್ಟುಕೊಳ್ಳುವಂಥ ಕೆಲಸವನ್ನು ಅವರು ಮಾಡಿದರು. ಮಂಡಲ್ ಆಯೋಗದ ವರದಿ ತಂದರು. ಇವತ್ತು ಪ್ರಾಯಶ: ವಿ.ಪಿ.ಸಿಂಗ್‌ರವರ ರೀತಿಯ ವ್ಯಕ್ತಿತ್ವವನ್ನು ಹಾಗೂ ವಿಚಾರವನ್ನು ಎಲ್ಲಿ ಕಾಣುವುದು ಎನ್ನುವುದು ಒಂದು ಸಮಸ್ಯೆ. ರಾಜಕಾರಣದಲ್ಲಿ ವಿ.ಪಿ.ಸಿಂಗ್‌ರವರ ಅಗತ್ಯ ಬಹಳ ಇದೆ. ನೇತೃತ್ವ ವಹಿಸುವುದಕ್ಕೆ ಹಾಗೂ ಚೈತನ್ಯ

ತುಂಬುವುದಕ್ಕೆ ಇವೆಲ್ಲದಕ್ಕೂ ಅವರ ಅಗತ್ಯವಿದೆ. ಇನ್ನು ಎ.ಲಕ್ಷೀಸಾಗರ್‌ರವರು ನನಗೆ ವೈಯುಕ್ತಿಕವಾಗಿ ಬಹಳ ಚೆನ್ನಾಗಿ ಪರಿಚಯ ಇದ್ದ ವ್ಯಕ್ತಿ. ನಾನು ಮೊದಲು ಅವರನ್ನು ನೋಡಿದ್ದು ಜೂನ್ 26ನೇ ತಾರೀಖು 1975ನೇ ಇಸವಿಯಲ್ಲಿ. ದೇಶದಲ್ಲಿ ತುರ್ತು ಪರಿಸ್ಥಿತಿ ಬಂದಾಗ ಬೆಂಗಳೂರಿನ ಮೈಸೂರು ಬ್ಯಾಂಕ್ ಚೌಕದಿಂದ ಸತ್ಯಾಗ್ರಹ ಮಾಡಿದಾಗ ನೇತೃತ್ವ ವಹಿಸಿದ್ದವರು. ಆ ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಯಾರ್ಯಾರು detenu ಗಳಾಗಿ ಜೈಲಿನಲ್ಲಿದ್ದರು ಅವರ ಪರವಾಗಿ ಬಹಳ ಧೈರ್ಯದಿಂದ ಇದು ನನ್ನ ತತ್ವ, ನನ್ನ ನಂಬಿಕೆ ಎಂದು ಕೋರ್ಟ್‌ನಲ್ಲಿ ಹೋರಾಟ ಮಾಡಿ, ಕೋರ್ಟ್‌ನಲ್ಲಿ ರಿಲೀಸ್ ಆರ್ಡರ್ ತರಿಸಿದರು. ಆ ಆರ್ಡರನ್ನು ಜೈಲಿಗೆ ತಂದು ಕೊಡುತ್ತಿದ್ದವರು ಎ.ಲಕ್ಷ್ಮೀಸಾಗರ್‌ರವರು. ತದನಂತರ ನನಗೆ ಇನ್ನೊಂದು ಅವಕಾಶ ಸಿಕ್ಕಿದ್ದೇನೆಂದರೆ, ನಾನು ರೇಣುಕಾಚಾರ್ಯ ಲಾ ಕಾಲೇಜಿನಲ್ಲಿ ಓದುತ್ತಿರುವಾಗ ನನಗೆ ಅವರು ಪ್ರೊಫೆಸರ್ ಆಗಿದ್ದರು. ಎಷ್ಟು ಸೊಗಸಾಗಿ ಅವರು ನನಗೆ ಪಾಠ ಮಾಡುತ್ತಿದ್ದರೆಂದರೆ, ಪಾಠ ಮಾಡುವ ಅವಧಿಯಲ್ಲಿ ಬೇರೆ ಬೇರೆ ವಿಚಾರಗಳನ್ನು ನಮಗೆ ತುಂಬುತ್ತಿದ್ದರು. ಅದು ಒಂದು ರೀತಿಯಲ್ಲಿ ನನ್ನ ಸೌಭಾಗ್ಯ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಗರಪಾಲಿಕೆ ಸದಸ್ಯರಾಗಿ, ಬೆಂಗಳೂರಿನ ಚಿಕ್ಕಪೇಟೆ ಶಾಸಕರಾಗಿ ಹಾಗೂ ಒಬ್ಬ ಉತ್ತಮ ಮಂತ್ರಿಯಾಗಿದ್ದರು. 'Simple living, high thinking' ಎನ್ನುವುದು ಬಾಯಲ್ಲಿ ಬಹಳ ಸಲೀಸಾಗಿ ಬರುವ ಒಂದು ಮಾತು. ಅದಕ್ಕೆ ನಿಜವಾದ ಉದಾಹರಣೆ ಎ.ಲಕ್ಷ್ಮೀಸಾಗರ್‌ರವರು ಆಗಿದ್ದರು. ಸಿದ್ಧರಾಜುರವರು, ಆಡು ಮಾತಿನಲ್ಲಿ ಹೇಳಬೇಕೆಂದರೆ ಅವರು ಸಾಯಬಾರದ ವಯಸ್ಸಿನಲ್ಲಿ ಅಂದರೆ ಕೇವಲ 48-49 ವರ್ಷಗಳಲ್ಲಿ ತೀರಿ ಹೋದರು. ಇನ್ನೂ ಕೂಡ ಬಹಳಷ್ಟು ಸಾಮಾಜಿಕ ಕ್ಷೇತ್ರದಲ್ಲಿ ಸಾಧನೆ ಮಾಡಬಹುದಾದಂಥ ವ್ಯಕ್ತಿಯಾಗಿದ್ದರು. ಅವರ ಅಕಾಲಿಕ ನಿಧನ ನಿಜವಾಗಲೂ ಕೂಡ ಅವರ ಕ್ಷೇತ್ರಕ್ಕೆ ಹಾಗೂ ಸಾರ್ವಜನಿಕ ಬದುಕಿಗೆ ನಷ್ಟವನ್ನು ಉಂಟು ಮಾಡಿದೆ. ಹೆಚ್.ಎನ್.ನಂಜೇಗೌಡರ ಬಗ್ಗೆ ಟಿ.ಬಿ.ಜಯಚಂದ್ರರವರು ಹೇಳಿದ್ದಾರೆ. ಹೆಚ್.ಎನ್.ನಂಜೇಗೌಡರ ಜೊತೆ ಸದನದ ಕಲಾಪದಲ್ಲಿ ಭಾಗವಹಿಸಿದ ಸೌಭಾಗ್ಯ ನನ್ನದು. ಪ್ರಾಯಶ: ಡಿ.ಕೆ.ಶಿವಕುಮಾರ್‌ರವರು, ಟಿ.ಬಿ.ಜಯಚಂದ್ರರವರು ಇದ್ದರು. ಬಹಳಷ್ಟು ಜನ ಅಲ್ಲಿ ಇದ್ದರು. ನನಗೆ ಚೆನ್ನಾಗಿ ನೆನಪಿರುವುದೇನೆಂದರೆ, ಅವರು ಯಾವುದೇ ಅವ್ಯವಸ್ಥೆ ಜೊತೆಗೆ ರಾಜಿ ಮಾಡಿಕೊಳ್ಳುತ್ತಿರಲಿಲ್ಲ. ಎ.ಲಕ್ಷ್ಮೀಸಾಗರ್ ಇರಬಹುದು, ಹೆಚ್.ಎನ್.ನಂಜೇಗೌಡರಿರಬಹುದು ಅಥವಾ ವಿ.ಪಿ.ಸಿಂಗ್‌ರವರು ಇರಬಹುದು ಅವರು ಯಾವುದೇ ಅವ್ಯವಸ್ಥೆ ಜೊತೆಗೆ ರಾಜಿ

ಮಾಡಿಕೊಳ್ಳುತ್ತಿರಲಿಲ್ಲ. ಇವತ್ತು ಅವ್ಯವಸ್ಥೆ ಜೊತೆಗೆ ರಾಜಿ ಮಾಡಿಕೊಳ್ಳುವುದು ನಮ್ಮ ಪದ್ಧತಿಯಾಗಿಬಿಟ್ಟಿದೆ. ಅವರು ಹೇಳಿದ್ದು ನನಗೆ ಜ್ಞಾಪಕವಿದೆ. ನೋಡಿ ಸಭಾಧ್ಯಕ್ಷರೆ, ನಾನು ಒಬ್ಬ ಶಾಸಕ, ಶಾಸಕ ಅಂದರೆ ಶಾಸನ ಮಾಡುವುದು ನನ್ನ ಕೆಲಸ. One who legislates, is a Legislator. ಆದರೆ, ನನ್ನ ಕ್ಷೇತ್ರದ ಜನಕ್ಕೆ ನಾನು ಶಾಸಕ ಅಲ್ಲ. ನಾನು ಒಬ್ಬ Health Inspector. ಜನರು ನನಗೆ ಕಸ ತುಂಬಿದೆ ಕಸ ಎತ್ತಿಸಿ ಎಂದು ಹೇಳುತ್ತಾರೆ. ನನ್ನ area ಜನಕ್ಕೆ ನಾನು ಒಬ್ಬ Junior Engineer, ಅಲ್ಲಿ drain ಸರಿಯಿಲ್ಲ ಅದನ್ನು ಸರಿಮಾಡಿಸಿ ಎಂದು ಹೇಳುತ್ತಾರೆ. ನನ್ನ area ಜನಕ್ಕೆ ನಾನು ಒಬ್ಬ Revenue Inspector. Tax ಜಾಸ್ತಿಯಾಗಿರುವುದನ್ನು ಕಡಿಮೆ ಮಾಡಿಸಿಕೊಡಿ ಎಂದು ಕೇಳುತ್ತಾರೆ. ಯಾರಾದರೂ ಪೊಲೀಸ್ ಸ್ಟೇಷನ್‌ಗೆ ಹೋದರೆ ಬಿಡಿಸಿಕೊಂಡು ಬರಬೇಕು ಎಂದು ಕೇಳುತ್ತಾರೆ. ಇಷ್ಟೆಲ್ಲಾ ಕಾರ್ಯಗಳನ್ನು ಮಾಡಿದ ಮೇಲೆ ಏನಾದರೂ ಸಮಯ ಇದ್ದರೆ, ಆಗ ನಾನು ಶಾಸನ ಮಾಡುತ್ತೇನೆ ಎಂದು ಎಂ.ಎಸ್.ಸಿದ್ಧರಾಜುರವರು ಹೇಳುತ್ತಿದ್ದರು. ರಾಜ್ಯದಲ್ಲಿ ಈ ಸಂಸ್ಥೆಗಳು ಏನು ಇವೆ. ಬೇರೆ ಬೇರೆ ಕೆಲಸಗಳನ್ನು ಮಾಡಬೇಕಾದ ಸಂಸ್ಥೆಗಳು, ಆ ಸಂಸ್ಥೆಗಳು ತನ್ನ ಕಾರ್ಯದಲ್ಲಿ ಯಾವ ರೀತಿಯಾಗಿ ವಿಫಲವಾಗಿವೆ ಹಾಗೂ ಆ ಸಂಸ್ಥೆಗಳು ವಿಫಲವಾಗಿರುವುದರಿಂದ ಒಬ್ಬ ಶಾಸಕ ಈ ಕೆಲಸಗಳನ್ನು ಮಾಡಬೇಕೆಂದು ಬಹಳ ಮಾರ್ಮಿಕವಾಗಿ ಅವರು ಹೇಳಿದ್ದರು. ದಿವಂಗತ ಮಾನ್ಯ ನಂಜೇಗೌಡರ ಬಗ್ಗೆ ಈಗಾಗಲೇ ಸನ್ಮಾನ್ಯ ಮುಖ್ಯಮಂತ್ರಿಗಳು ಪ್ರಸ್ತಾಪ ಮಾಡಿದ್ದಾರೆ.

ಆ ಸಂಸ್ಥೆಗಳು ತನ್ನ ಕಾರ್ಯದಲ್ಲಿ ಯಾವ ರೀತಿ ವಿಫಲವಾಗಿವೆ. ಸಂಸ್ಥೆಗಳು ವಿಫಲವಾಗಿರುವುದರಿಂದ ಒಬ್ಬ ಶಾಸಕ ಈ ಎಲ್ಲ ಕೆಲಸ ಮಾಡಬೇಕೆಂದು ಬಹಳ ಮಾರ್ಮಿಕವಾಗಿ ಅವರು ಹೇಳಿದರು. ಸನ್ಮಾನ್ಯ ಮುಖ್ಯಮಂತ್ರಿಗಳು ಹಾಗೂ ಅನೇಕ ಮಾನ್ಯ ಮಿತ್ರರು ಪ್ರಸ್ತಾಪ ಮಾಡಿರುವ ಹಾಗೆ ನೀರಾವರಿಯೇ ಮಾನ್ಯ ನಂಜೇಗೌಡರಿಗೆ ಉಸಿರಾಗಿತ್ತು. ಕೃಷಿ ಕ್ಷೇತ್ರವೂ ಅವರ ಉಸಿರಾಗಿತ್ತು. ಕೃಷ್ಣ ಇರಬಹುದು, ಕಾವೇರಿ ಇರಬಹುದು, ಸಾಮಾನ್ಯವಾಗಿ ದಕ್ಷಿಣ ಕರ್ನಾಟಕ ಭಾಗದ ರಾಜಕೀಯ ಕ್ಷೇತ್ರದವರಿಗೆ ಉತ್ತರ ಕರ್ನಾಟಕದ ಬಗ್ಗೆ ಅಷ್ಟು knowledge ಇರುವುದಿಲ್ಲ. ಆದರೆ, ಕಾವೇರಿ ಬಗ್ಗೆ ಎಷ್ಟು ಅಧಿಕೃತವಾಗಿ ಮಾತನಾಡುತ್ತಿದ್ದರೋ ಅಷ್ಟೇ ಅಧಿಕೃತವಾಗಿ ಕೃಷ್ಣ ಬಗ್ಗೆ ಕೂಡ ಮಾತನಾಡುತ್ತಿದ್ದ ಒಬ್ಬ ಧೀಮಂತ ತಜ್ಞ ಎಂದರೆ ನಂಜೇಗೌಡರು. ಅವರಿಗೆ ಆ ಕಳಕಳಿಯ ವಿಚಾರವಿತ್ತು. ರಾಷ್ಟ್ರೀಯ ನೀರಾವರಿ ನೀತಿ ಅಗತ್ಯಯ ಬಗ್ಗೆ ಮಾನ್ಯ ನಂಜೇಗೌಡರು ಹೇಳುತ್ತಿದ್ದರು. ಆದ್ದರಿಂದ ರಾಷ್ಟ್ರೀಯ

ನೀರಾವರಿ ನೀತಿಯನ್ನು ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಸೇರಿಕೊಂಡು ತಂದರೆ ಅದು ಪ್ರಾಯಶ: ನಂಜೇಗೌಡರ ಆತ್ಮಕ್ಕೆ ನಿಜವಾಗಿಯೂ ತೋರುವ ಶ್ರದ್ಧಾಂಜಲಿ. ಇವತ್ತು ಅನೇಕ ಪ್ರಮುಖರು ನಿಧನರಾಗಿದ್ದಾರೆ, ಅವರೆಲ್ಲರ ಆತ್ಮಕ್ಕೆ ಶಾಂತಿಯುನ್ನು ಕೋರುತ್ತಾ, ವಿಶೇಷವಾಗಿ ಮುಂಬಯಿ ಪ್ರಕರಣ ಹಾಗೂ ಅಮೇರಿಕಾದಲ್ಲಿ 9/11 ಎನ್ನುವುದು ಬಹಳ ಪ್ರಮುಖವಾದಂತಹ date. ಅವರ ಜೀವನದಲ್ಲೇ ಅವರು ಮರೆಯುವುದಿಲ್ಲ. ನಮ್ಮ ದೇಶದಲ್ಲಿಯೂ ಕೂಡ ನವೆಂಬರ್ 26 ಎನ್ನುವುದು ಬಹಳ ಪ್ರಮುಖವಾದ date ಆಗಬೇಕು. ಅದು ಏನೆಂದರೆ, public memory is short ಎಂದು ಹೇಳುತ್ತಾರೆ. ನಾವು ನವೆಂಬರ್ 26ನ್ನು ಮರೆಯಬಾರದು. ದೇಶದ ಮೇಲೆ ಏನು ಆಕ್ರಮಣ ಮಾಡುವ ರೀತಿಯಲ್ಲಿ ಅವತ್ತು ಮಾಡಿದರು ಆ ಒಂದು ಹೋರಾಟದಲ್ಲಿ ತಮ್ಮ ಬಲಿದಾನವನ್ನು ಹೇಮಂತ್ ಕರ್ಕರೆ ಇರಬಹುದು, ಅಶೋಕ್ ಕಾಮ್ಟೆ ಇರಬಹುದು, ವಿಜಯ್ ಸಾಲಸ್ಕರ್ ಇರಬಹುದು ಮತ್ತು ನಮ್ಮದೇ ರಾಜ್ಯದ ಸಂದೀಪ್ ಉನ್ನಿಕೃಷ್ಣನ್ ಇರಬಹುದು, ಅವರು ಏನು ಪ್ರಾಣವನ್ನು ಆಹುತಿ ಮಾಡಿದರು ಅದನ್ನು ಮರೆಯಬಾರದು. ಪ್ರಾಯಶ: ಕೊಹಿಮಾದಲ್ಲಿ ಎಂದು ಕಾಣುತ್ತದೆ, ಅಲ್ಲೊಂದು ಪ್ಲೇಟ್ ಇದೆಯಂತೆ. ಖಿನಾವು ಇಂದು ನಮ್ಮ ಬಲಿದಾನವನ್ನು ಮಾಡಿದ್ದೇವೆ ಏಕೆಂದರೆ, ನಿಮ್ಮ ನಾಳೆಯ ಜೀವನ ನೆಮ್ಮದಿಯಿಂದ ಕೂಡಿರಲಿಖಿ ಎಂದು. ನಾಲ್ಕು ಜನ ಅದೇ ರೀತಿ ಬಲಿದಾನ ಮಾಡಿದ್ದಾರೆ. ಆದರೆ, ಸಭಾಧ್ಯಕ್ಷರೆ, ನನ್ನಗನ್ನಿಸಿದ್ದು ಸಂದೀಪ್ ಉನ್ನಿಕೃಷ್ಣನ್ ಅವರು ತೀರಿಕೊಂಡಾಗ ನಾವು ಬಹಳಷ್ಟು ಸಲ ಶ್ರದ್ಧಾಂಜಲಿ ತೋರಿಸುವ ನೆಪದಲ್ಲಿ ನಮ್ಮನ್ನು ನಾವು ವೈಭವಿಕರಿಸಿಕೊಳ್ಳುತ್ತೇವೆ. ಸಂದೀಪ್ ಉನ್ನಿಕೃಷ್ಣನ್ ಅವರು ತೀರಿಕೊಂಡ ದಿವಸ ಬೆಂಗಳೂರಿನ ಎಲ್ಲಾ ಕಡೆ flex culture ಬಹಳ ಬಂದಿದೆ. ಯಾರದ್ದೇ ಆಗಿದ್ದರು ಒಂದು ಕೂಡ flex ಆಗಬೇಕು. ಸಂದೀಪ್ ಉನ್ನಿಕೃಷ್ಣನ್ ಬಲಿದಾನಕ್ಕೆ flex.

ಶ್ರೀ ನೆ.ಲ. ನರೇಂದ್ರಬಾಬು, (ಮಹಾಲಕ್ಷ್ಮಿ ಲೇಔಟ್):- ಮಾನ್ಯ ಅಧ್ಯಕ್ಷರೆ, ಅದು ಬೆಳಗಾವಿಯಲ್ಲೂ ಬಂದಿದೆ.

ಶ್ರೀ ಎಸ್. ಸುರೇಶ್‌ಕುಮಾರ್:- ನಾನು ಬಹಳ ಗಂಭೀರವಾಗಿ ಮಾತನಾಡುತ್ತಿದ್ದೇನೆ ಮಾನ್ಯ ನರೇಂದ್ರ ಬಾಬುರವರೆ, please listen, ನನ್ನ ಬಾವನೆಯನ್ನು ಅರ್ಥ ಮಾಡಿಕೊಳ್ಳಿ. Please sit down. ಆಯ್ತು ನಿಮ್ಮದು

ಹಾಕಿಕೊಳ್ಳಿ. ಸಂದೀಪ್ ಉನ್ನಿಕೃಷ್ಣನ್ ಅವರದ್ದು ಸ್ಟಾಂಪ್ ಸೈಜ್ ಫೋಟೋ ರಾಜಕಾರಣಿಗಳದ್ದು ಅಥವಾ ಸ್ಥಳೀಯ ನಾಯಕರದ್ದು ದೊಡ್ಡ ಫೋಟೋ. ಆ flex ನೋಡಿದಾಗ ಯಾರು ಬಲಿದಾನ ಮಾಡಿದರು ಎಂದು ಗೊತ್ತಾಗುತ್ತಿರಲಿಲ್ಲ. ಅದಕ್ಕೋಸ್ಕರ ಮುಂಬೈ ದುರಂತ ಆದಾಗ, ಇಡೀ ದೇಶದ ಜನರ ಭಾವನೆ ರಾಜಕೀಯ ಕ್ಷೇತ್ರದ ಬಗ್ಗೆ ಹೇಗೆ ಬಂತು ಎಂಬ ಅರಿವು ಎಲ್ಲರಿಗೂ ಇದೆ. ಈ ದೃಷ್ಟಿಯಿಂದ ಮುಂಬಯಿ ಪ್ರಕರಣ ನಮಗೆಲ್ಲರಿಗೂ ಮಾದರಿಯಾಗಬೇಕು. ಅದು ನಮಗೆ ಎಚ್ಚರಿಕೆಯ ಗಂಟೆ ಆಗಬೇಕು. ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಇದರ ಬಗ್ಗೆ ಬಹಳ ದೀರ್ಘವಾಗಿ ಗಂಭೀರವಾಗಿ ಯೋಚಿಸಿ, ಅಮೇರಿಕಾದಲ್ಲಿ 9/11 ದುರಂತ ಆದ ಮೇಲೆ ಇನ್ನೊಂದು ಪ್ರಕರಣ ಆಗುವುದಕ್ಕೆ ಬಿಟ್ಟಿಲ್ಲವೋ ಅದೇ ತರಹ.

ಶ್ರೀ ಪ್ರಕಾಶ್ ಬಿ ಹುಕ್ಕೇರಿ (ಚಿಕ್ಕೋಡಿ):- ಈ ಸದನದಲ್ಲಿ ಇಲ್ಲಿಯ ವಿಚಾರ ಮಾತನಾಡುವುದು ಬಹಳಷ್ಟು ಇರುವಾಗ ಅಮೇರಿಕಾ, ಇಂಗ್ಲೆಂಡ್ ಬಗ್ಗೆ ಮಾತನಾಡಿದರೆ ಹೇಗೆ? ಅವರು ಮುಂಬೈ ಬಗ್ಗೆ ಮಾತನಾಡಲಿ.

(ಗೊಂದಲ)

ಅಧ್ಯಕ್ಷರು:- ಮಾನ್ಯ ಪ್ರಕಾಶ್‌ಹುಕ್ಕೇರಿಯವರೆ...

ಶ್ರೀ ಪ್ರಕಾಶ್ ಬಿ ಹುಕ್ಕೇರಿ:- ನಾನು ಹೇಳುವುದೇನೆಂದರೆ...

ಶ್ರೀ ಎಸ್. ಸುರೇಶ್ ಕುಮಾರ್:- ನಾನು ಹೇಳಿರುವುದು ನಿಮಗೆ ಅರ್ಥವಾಗದಿದ್ದರೆ ನೀವು ಹೇಳಿರುವುದು ನನಗೆ ಅರ್ಥವಾಗಿದೆ, ತಾವು ಕುಳಿತುಕೊಳ್ಳಿ.

ಅಧ್ಯಕ್ಷರು:- ಪ್ರಕಾಶ್ ಹುಕ್ಕೇರಿಯವರೆ ಯಾವುದು ಅನಾವಶ್ಯಕ ವಾಗಿದೆ, ಅದನ್ನು ನಾನು ಹೇಳುತ್ತೇನೆ. ನಾನು ಸಲಹೆ ಕೊಡುತ್ತೇನೆ. ದಯವಿಟ್ಟು ಕುಳಿತುಕೊಳ್ಳಿ. ಗಂಭೀರವಾದ ಚರ್ಚೆ ನಡೆಯುತ್ತಿದೆ. ಎಲ್ಲಿ objection ಮಾಡಬೇಕೋ ಅಲ್ಲಿ ಮಾಡಿ ಎಲ್ಲದ್ದಕ್ಕೂ objection ಮಾಡಬೇಡಿ. ಸದಸ್ಯರು ದಯಮಾಡಿ ಕುಳಿತುಕೊಳ್ಳಿ. ಸಂತಾಪ ಸೂಚಕ ಬಗ್ಗೆ ಚರ್ಚೆ ನಡೆಯುತ್ತಿದೆ. ಇದರಲ್ಲಿ ಗಂಭೀರತೆ ಇದೆ. ದಯವಿಟ್ಟು ಇದಕ್ಕೆ ಯಾವುದೇ ತರಹದ ಅಡೆತಡೆ ಮಾಡಬೇಡಿ.ಅನಾವಶ್ಯಕ ವಿಷಯಗಳಿದ್ದರೆ ಪ್ರಸ್ತಾವ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲ. ದಯವಿಟ್ಟು ಸದಸ್ಯರು ಸಹಕಾರ ಕೊಡಿ.

ಶ್ರೀ ಎಸ್. ಸುರೇಶ್ ಕುಮಾರ್:- ಭಾರತದಲ್ಲಿ ಮತ್ತೊಂದು ಸಲ ಈ ರೀತಿ ದುರಂತ ಆಗದೇ ಇರುವುದಕ್ಕೆ ಮುಂಬೈ ಘಟನೆ ನಮಗೆಲ್ಲರಿಗೂ ನೆನಪಾಗಬೇಕೆಂದು ಹೇಳುತ್ತಾ ಇವತ್ತು ಸಭೆಯ ಮುಂದೆ ಸಂತಾಪ ಸೂಚನಾ ಪ್ರಸ್ತಾವನೆ ಏನು ಬಂದಿದೆ ಅದರ ಜೊತೆ ನನ್ನ ಧ್ವನಿ ಸೇರಿಸುತ್ತಾ ಮೃತರ ಆತ್ಮಕ್ಕೆ ಶಾಂತಿ ಕೋರಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸೋಮಣ್ಣ (ಗೋವಿಂದರಾಜ ನಗರ):- ಸನ್ಮಾನ್ಯ ಅಧ್ಯಕ್ಷರೆ, ಇವತ್ತು ಏನು ಸಂತಾಪ ಸೂಚನೆಯನ್ನು ತಂದಿದ್ದಾರೆ ಅದಕ್ಕೆ ನನ್ನ ಧ್ವನಿಯನ್ನು ಗೂಡಿಸುತ್ತೇನೆ. ಮಾನ್ಯ ವಿ.ಪಿ.ಸಿಂಗ್ ಅವರು ಈ ರಾಷ್ಟ್ರದ ಮಹಾ ನಾಯಕರು, ಅವರ ಅನೇಕ ವಿಚಾರಗಳನ್ನು ಈ ಸಭೆಯಲ್ಲಿ ಸಭಾ ನಾಯಕರು ಮತ್ತು ಇತರೆ ಅನೇಕ ಮುಖಂಡರು ಮಾತನಾಡಿದ್ದಾರೆ.

ಸನ್ಮಾನ್ಯ ಅಧ್ಯಕ್ಷರೆ, ವಿ.ಪಿ.ಸಿಂಗ್ ಅವರ ಜೊತೆಯಲ್ಲಿ ನನ್ನ ಒಡನಾಡಿ ಸುಮಾರು ದಿನಗಳ ಕಾಲದವರೆಗೂ ಇತ್ತು. ಅವರ ಸರಳ ಸಜ್ಜನಿಕೆ ಭಾವನೆಗಳಲ್ಲಿ ಸ್ವಲ್ಪವಾದರು ಕೂಡ ಅವರ ಜೊತೆಯಲ್ಲಿ ಇರುವ ಅವಕಾಶ ಬಂದಿತ್ತು. ಈ ರಾಷ್ಟ್ರ ಕಂಡ ಅತ್ಯಂತ ಅಪರೂಪದ ಮಹಾ ನಾಯಕರಲ್ಲಿ ವಿ.ಪಿ.ಸಿಂಗ್ ಅವರು ಒಬ್ಬರು. ಇವತ್ತು ಅವರು ನಮ್ಮನ್ನು ಅಗಲಿದ್ದಾರೆ. ಅವರು ಈ ರಾಷ್ಟ್ರಕ್ಕೆ ವಿಶೇಷವಾಗಿ ಮುಂದಿನ ವಿಶ್ವದ ಯಾವುದೇ ಒಂದು ವ್ಯಕ್ತಿ ಮಾಡದಂಥ ಕೆಲಸವನ್ನು ಮಾಡಿ ಈ ರಾಷ್ಟ್ರದಲ್ಲಿ ಧ್ವನಿ ಇಲ್ಲದವರಿಗೆ ಧ್ವನಿಯಾಗಿ ಮಂಡಲ್ ಕಮೀಷನ್ ಜಾರಿಗೆ ಏನೆಲ್ಲಾ ವಿರೋಧ ಬಂದರೂ ಅದನ್ನು ಜಾರಿಗೆ ತಂದು ಅದರಿಂದ ಆಗತಕ್ಕ ಸಾಧಕ ಭಾದಕಗಳನ್ನು ವಿಮರ್ಶೆ ಮಾಡಿ ಈ ರಾಷ್ಟ್ರದ ಸರ್ವಾಂಗೀಣ ವ್ಯವಸ್ಥೆಯಲ್ಲಿ ಎಲ್ಲರಿಗೂ ಸಮಾನವಾದ ಹಕ್ಕಗಳನ್ನು ಕಲ್ಪಿಸಬೇಕು ಎನ್ನತಕ್ಕ ಚಿಂತನೆಯನ್ನು ಈ ರಾಷ್ಟ್ರದ ಒಬ್ಬ ರಾಜಕಾರಣಿಯಾಗಿ ಅವರಲ್ಲಿದ್ದ ಸಾಮಾನ್ಯ ಜನರೊಂದಿಗಿನ ಒಡನಾಟ ಅವರನ್ನು ಎಂದೆಂದೂ ಮರೆಯುವಂತಿಲ್ಲ. ಅಂಥ ನಾಯಕರನ್ನು ನಾವು ಇಂದು ಕಳೆದುಕೊಂಡಿದ್ದೇವೆ.

ಮಾನ್ಯ ಸಿದ್ದರಾಜುರವರು ನಮಗೆ ಬಾರಿ ಬೇಕಾದಂಥ ಆತ್ಮೀಯವಾಗಿದ್ದ ಸ್ನೇಹಿತರು. ನನ್ನ ಮತ್ತು ಅವರ ಒಡನಾಟ ಸುಮಾರು 20 ವರ್ಷಗಳದ್ದು. ಅವರು ಅಕಾಲಿಕ ಮರಣಕ್ಕೆ ತುತ್ತಾಗಿದ್ದಾರೆ. ಅವರ ಆರೋಗ್ಯ ಕ್ಷೀಣಿಸಿ ಅವರು ಇನ್ನೇನು ಸಾಯುವ 8-10 ದಿನ ಮೊದಲು ಅವರನ್ನು ಭೇಟಿ ಮಾಡಿದಾಗ ಅವರು ಹೇಳಿದ

ಒಂದು ಮಾತು ಏನೆಂದರೆ, ಈ ರಾಜ್ಯದಲ್ಲಿ ಯಾವುದೇ ಒಂದು ವ್ಯವಸ್ಥೆ ಸರಿಯಾಗಬೇಕಾದರೆ ಹಳ್ಳಿಗಾಡಿನ ಜನರಿಗೆ ಅಗತ್ಯವಿರತಕ್ಕ ಸೌಲಭ್ಯವನ್ನು ವಿಶೇಷವಾಗಿ ರೈತಪರವಾದ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ, ಅದರ ಪರವಾಗಿ ನಾನು ಇನ್ನು ಕೂಡ ಸಾಕಷ್ಟು ಕೆಲಸ ಮಾಡಬೇಕು ಎಂಬ ಚಿಂತನೆ ಇದೆಯೆಂದು ಹೇಳಿದ್ದು ಇಂದಿಗೂ ನನ್ನ ಮುಂದೆ ಜೀವಂತವಾಗಿದೆ.

ಲಕ್ಷ್ಮೀಸಾಗರ್‌ರವರು ಸಹ ನಿಧನರಾಗಿದ್ದಾರೆ. ಮಾನ್ಯ ಸುರೇಶ್‌ಕುಮಾರ್‌ರವರು ಹೇಳಿದಂತೆ ನಾವೆಲ್ಲರು ಅವರ ಒಡನಾಡಿಗಳಾಗಿ ಕೆಲಸ ಮಾಡಿದ್ದೇವೆ. ವಿಶೇಷವಾಗಿ 1980 ರಿಂದ ಅವರ ಕೊನೆಯ ದಿನದವರೆಗೆ ಅವರನ್ನು ಹತ್ತಿರದಲ್ಲಿ ನೋಡಿದ್ದೇವೆ. ಬೆಂಗಳೂರು ಅತ್ಯಂತ ದೊಡ್ಡ ನಗರವಾಗಲು ಅಪಾರವಾದಂತಹ ಚಿಂತನೆ ನೀಡಿದವರಲ್ಲಿ ದಿವಂಗತ ರಾಮುಲುರವರು, ಟಿ.ಎಂ. ನಾಗರಾಜ್ ಈ ವ್ಯವಸ್ಥೆಗೆ ಧ್ವನಿಗೂಡಿಸಿ ಸೈಕಲ್ ತೆರಿಗೆಯನ್ನು ಮಾಡಬೇಕೆಂದು ಹೇಳಿದಾಗ ಅದರ ವಿರುದ್ಧವಾಗಿ ಈ ನಗರಕ್ಕೆ ಏನಾದರು ಮಾಡಬೇಕು ಎಂದು ಚಿಂತನೆ ಮಾಡಿದಂಥ ಸಾಮಾನ್ಯರಲ್ಲಿ ಸಾಮಾನ್ಯರಾಗಿದ್ದಂಥವರು ಲಕ್ಷ್ಮೀಸಾಗರ್‌ರವರು. ಶುದ್ಧ ಹಸ್ತದ ರಾಜಕಾರಣಿಗಳಲ್ಲಿ ಮತ್ತೊಂದು ಹೆಸರು ಲಕ್ಷ್ಮೀಸಾಗರ್‌ರವರು. ಇವತ್ತೂ ಬೆಂಗಳೂರಿನಂಥ ದೊಡ್ಡ ನಗರದಲ್ಲಿ ಲಕ್ಷ್ಮೀಸಾಗರ್ ರವರಿಗೆ ಒಂದು ಸ್ವಂತ ಮನೆ ಇರಲಿಲ್ಲ. ಮುರುಗರಾಜ ಮಠದ ಸ್ವಾಮಿಯವರ ಆಶೀರ್ವಾದದಿಂದ ಒಂದು ಸಣ್ಣ ಕೊಠಡಿಯಲ್ಲಿ ಅವರೊಬ್ಬರೇ ಎಲ್ಲವನ್ನು ಮಾಡಿಕೊಂಡು ಜೀವನ ನಡೆಸಿದಂಥ ರಾಜಕಾರಣಿ. ಅವರನ್ನು ರಾಜಕಾರಣಿ ಎನ್ನುವುದಕ್ಕಿಂತ ಹೆಚ್ಚಾಗಿ ಅವರು ಒಬ್ಬರು ಉಪಾಧ್ಯಾಯರಾಗಿ ಕಾನೂನು ಅರಿವನ್ನು ಮೂಡಿಸುವಂತವರಾಗಿ ಯಾರು ಎಷ್ಟೇ ದೊಡ್ಡ ವ್ಯಕ್ತಿಯಾಗಿದ್ದರು ತಮ್ಮ ಮನಸ್ಸಿಗೆ ಅನ್ನಿಸಿದ್ದನ್ನು ನೇರವಾಗಿ ಹೇಳಿ ಇದು ಮಾಡಬಾರದು, ಇದು ತಪ್ಪು ಎಂದು ಹೇಳಿದಂಥ ಒಬ್ಬ ಮಹಾ ನಾಯಕರು ಅವರಾಗಿದ್ದರು. ಅವರು ನಮ್ಮನ್ನು ಅಗಲಿದ್ದಾರೆ.

ಮಾನ್ಯ ಮಿರಾಜುದ್ದೀನ್ ಪಟೇಲ್‌ರವರು ನನಗೆ ಬಹಳ ಹತ್ತಿರದ ಸ್ನೇಹಿತರು. ಅವರು ಒಂದು ಸಾಮಾನ್ಯ ಕುಟುಂಬದಿಂದ ಬಂದಿದ್ದವರು. ಹಳ್ಳಿಗಾಡಿನ ವ್ಯವಸ್ಥೆಯಿಂದ ಬಂದಿದ್ದ ಅವರು ರಾಜ್ಯದ ಪ್ರಭಾವಿ ನಾಯಕರಾಗಿ ಏನೆಲ್ಲಾ ಮಾಡಿದರೂ ಕೂಡ ತನ್ನ ಹಳ್ಳಿಯಲ್ಲೇ ವಾಸ ಮಾಡತಕ್ಕ ಇಚ್ಚೆಯನ್ನು ಇಟ್ಟುಕೊಂಡು ಜೀವನ ಸಾಗಿಸುವಂತಹ ವ್ಯಕ್ತಿಯಾಗಿದ್ದರು. ಅದೇ ರೀತಿ ಸನ್ಮಾನ್ಯ ವಿಶ್ವನಾಥ ರೆಡ್ಡಿ ಮುದ್ನಾಳ್‌ರವರು ಉತ್ತರ ಕರ್ನಾಟಕಕ್ಕೆ, ದಕ್ಷಿಣ ಕರ್ನಾಟಕಕ್ಕೆ ಅನ್ನುವುದಕ್ಕಿಂತ ಹೆಚ್ಚಾಗಿ ಅವರ ಕಲ್ಪನೆಯ ಚಿಂತನೆಯ ವ್ಯವಸ್ಥೆಯಲ್ಲಿ ಎಂದೂ ಕೂಡ ಅವರು ರಾಜಿ ಮಾಡಿಕೊಂಡವರಲ್ಲ.

ನೇರ ನುಡಿ ಮತ್ತು ಅವರ ದೃಢ, ದಿಟ್ಟ ನಿರ್ಧಾರಗಳು, ಯಾರು ಎಷ್ಟೇ ದೊಡ್ಡವರಾದರೂ ತಮಗೆ ಹಿಡಿಸಲಿಲ್ಲವೆಂದರೆ, ಅದನ್ನು ಸರಿಯಿಲ್ಲವೆಂದು ಹೇಳುತ್ತಿದ್ದ ಒಬ್ಬ ಧೀಮಂತ ನಾಯಕರಾಗಿದ್ದರು. ಸಾವಿರಾರು ಎಕರೆಯಷ್ಟು ಜಮೀನನ್ನು, ಭೂದಾನ ಚಳವಳಿ ಜರುಗಿದ ಸಂದರ್ಭದಲ್ಲಿ ***"ಉಳುವವನೇ ನೆಲದೊಡೆಯ"*** ಎಂದು ಸರ್ಕಾರ ಘೋಷಿಸಿದಾಗ, ಆ ತೀರ್ಮಾನದಲ್ಲಿ ತಮ್ಮದೇ ಸಕ್ರಿಯ ಭಾವನೆಗಳನ್ನು ಉಳ್ಳವರಾಗಿದ್ದರು. ಅಖಿಲ ಭಾರತ ವೀರಶೈವ ಮಹಾಸಭಾ ಎನ್ನುವ ದೊಡ್ಡ ಸಂಸ್ಥೆಯನ್ನು ಕರ್ನಾಟಕ ರಾಜ್ಯದಲ್ಲಿ ಕಟ್ಟಿ, ಆ ಸಮಾಜದ ಒಳಿತಿಗೆ ಅನ್ಯ ಸಮಾಜದ ಜೊತೆಯಲ್ಲಿ ವೀರಶೈವ ಸಮಾಜವನ್ನು ಯಾವ ರೀತಿ ಕೊಂಡೊಯ್ಯಬಹುದೆನ್ನುವ ಚಿಂತನೆ ಇವತ್ತಿಗೆ ನಮ್ಮೆಲ್ಲರಿಗೂ ಸ್ಫೂರ್ತಿ ನೀಡುತ್ತಿದೆ.

ಸನ್ಮಾನ್ಯ ನಂಜೇಗೌಡರು ಇಂದು ನಮ್ಮನ್ನು ಅಗಲಿದ್ದಾರೆ. ಆದರೆ, ಅವರ ಅನೇಕ ವಿಚಾರಗಳು ಈ ಸದನದಲ್ಲಿರುವ ನನ್ನಂತಹವರಿಗೆ, ಸುರೇಶ್‌ಕುಮಾರ್ ಮತ್ತು ಡಿ.ಕೆ.ಶಿವಕುಮಾರ್ ಅಂತಹವರಿಗೆ ಮತ್ತು ಬಹುತೇಕರಿಗೆ ಅವರು ಕೊಟ್ಟಿರುವ ವಿಚಾರಧಾರೆಗಳು ಎಂದಿಗೂ ಮರೆಯುವಂತಿಲ್ಲ. ನಾನು ಬೆಂಗಳೂರು ನಗರ ಅಭಿವೃದ್ಧಿ ಸಚಿವನಾಗಿದ್ದಾಗ ಅಂದಿನ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರಿಗೂ, ಅವರಿಗೂ ಸ್ವಲ್ಪ ಗೊಂದಲವುಂಟಾದಾಗ ನನಗೂ ಮತ್ತು ಅಂದು ಮುಖ್ಯ ಮಂತ್ರಿಗಳಾಗಿದ್ದ ದಿವಂಗತ ಜೆ.ಹೆಚ್.ಪಟೇಲರಿಗೆ ಪತ್ರವೊಂದನ್ನು ಬರೆದರು. ನನ್ನ ಕ್ಷೇತ್ರದಲ್ಲಿ ಕೆಲಸಗಳಾಗುತ್ತಿಲ್ಲ, ಸಾಮಾನ್ಯ ಕೆಲಸಗಳಿಗೂ ಅನನುಕೂಲವುಂಟಾಗುತ್ತಿದೆ. ಈ ಕೆಲಸ-ಕಾರ್ಯಗಳನ್ನು ನೀವು ಮಾಡಿಕೊಡದೇ ಹೋದರೆ ನಾನು ವಿಧಾನಸೌಧದ ಮುಂದೆ ಧರಣಿ ಕುಳಿತುಕೊಳ್ಳುತ್ತೇನೆ ಎಂದು ಪತ್ರ ಬರೆದರು. ಪಟೇಲರು ನಮ್ಮ ನಾಯಕರಾಗಿದ್ದರು. ನನ್ನನ್ನು ಕರೆದು ಆಯುಕ್ತರೊಂದಿಗೆ ಮಾತನಾಡು ಎಂದರು. ನಾನು ನಂಜೇಗೌಡರನ್ನು ಮತ್ತು ಆಯುಕ್ತರನ್ನು ನನ್ನ ಕಚೇರಿಗೆ ಕರೆಸಿ ಮಾತನಾಡಿದಾಗ ಎರಡು ವಿಚಾರಗಳನ್ನು ನಂಜೇಗೌಡರು ಆಯುಕ್ತರಿಗೆ ಹೇಳಿದರು.

ಮೊದಲನೆಯದು, ಈ ರಾಜ್ಯದ ರಾಜಧಾನಿಯಲ್ಲಿ ಹಮ್ಮಿಕೊಳ್ಳುವ ಅಭಿವೃದ್ಧಿಗೆ ಒತ್ತು ಕೊಡುವಾಗ, ಎಲ್ಲರನ್ನೂ ಸಮಾನವಾಗಿ ಕಾಣುವಾಗ, ಸಾಮಾನ್ಯ ಜನರಿಗೆ ಆಗಿರುವ ಅನನುಕೂಲಗಳನ್ನು ಸರಿಪಡಿಸುವುದಕ್ಕೆ ನಿಮ್ಮ ಚಿಂತನೆ ಸರಿಯಿಲ್ಲ. ನಾನು ಒಬ್ಬ ಶಾಸಕನಾಗಿ ಬೆಳಗ್ಗೆ 6.00 ಗಂಟೆಗೆ ಎದ್ದು, ಆ ಜನರ ನೋವು ಕಂಡು, ನಿಮಗೆ ತಿಳಿಸಿದರೂ ಏನೂ ಆಗುತ್ತಿಲ್ಲವೆಂದು ಒಂದು ಪಟ್ಟಿ ಕೊಟ್ಟು, ನಂತರ, ಪಟ್ಟಿಯಲ್ಲಿದ್ದ ಎಲ್ಲಾ ಕೆಲಸಗಳನ್ನೂ ಮಾಡಿಕೊಟ್ಟಾಗ ಅವರು ಒಂದು ಮಾತನ್ನು

ಹೇಳಿದರು. ನೀವು ಯಾರು, ಏನೇ ಮಾಡಿ. ಆದರೆ, ಯಾವುದಾದರೊಂದು ಕೆಲಸವನ್ನು ಕೈಗೆತ್ತಿಕೊಂಡರೆ, ಆ ಕೆಲಸದಿಂದ ಸಾರ್ವಜನಿಕರಿಗೆ ಅನುಕೂಲ, ಉಪಯುಕ್ತತೆಯುಂಟಾದರೆ, ಅದನ್ನು ಮಾಡಿ. ಉಪಯುಕ್ತತೆ ಇಲ್ಲವೆಂದರೆ, ಅದನ್ನು ಮಾಡುವ ಅವಶ್ಯಕತೆ ಇಲ್ಲವೆಂದು ಹೇಳಿದಂತಹ ದೊಡ್ಡ ವ್ಯಕ್ತಿತ್ವವುಳ್ಳ ನಾಯಕರನ್ನು ಕಳೆದುಕೊಂಡಿದ್ದೇವೆ.

ಒಂದು ಸಲ ವಿಧಾನಸಭೆಯಲ್ಲಿ ನಡೆದ ವಿಚಾರದಲ್ಲಿ 1994ರಲ್ಲಿ ಮುಖ್ಯಮಂತ್ರಿಗಳಾಗಿದ್ದ ಹೆಚ್.ಡಿ.ದೇವೇಗೌಡರು ಯಾವುದೋ ವಿಚಾರವೊಂದನ್ನು ಪ್ರಸ್ತಾಪಿಸಿದಾಗ, ನೇರ ನಿಲುವಿಗೆ ಮತ್ತೊಂದು ಹೆಸರಾಗಿದ್ದ ದಿವಂಗತ ನಂಜೇಗೌಡರ ಜೊತೆ ಒಂದು ದಿನವೋ, ಎರಡು ದಿನವೋ ಆ ವಿಚಾರಕ್ಕೆ ಸಂಬಂಧಿಸಿದಂತೆ ಕುಳಿತು ಚರ್ಚಿಸಬೇಕಾಗಿತ್ತು. ಬೆಂಗಳೂರು ನಗರದಲ್ಲಷ್ಟೇ ಅಲ್ಲ, ರಾಜ್ಯದಲ್ಲಷ್ಟೇ ಅಲ್ಲ, ಎಲ್ಲಿಯೇ ಯಾವುದೇ ಸಮಸ್ಯೆಗಳುಂಟಾದಾಗ ಅದನ್ನು ಯಾವ ರೀತಿ ಬಗೆಹರಿಸಬಹುದು ಎಂಬುದರ ಬಗ್ಗೆ ವಿಮರ್ಶಾತ್ಮಕವಾಗಿ ನಾವು ತೀರ್ಮಾನ ಮಾಡಿದರೆ, ಅದರಿಂದ ರಾಜ್ಯಕ್ಕೆ ಮತ್ತು ಆಯಾ ಭಾಗದ ಜನರಿಗೆ ಅನುಕೂಲವಾಗುತ್ತದೆನ್ನುವ ಚಿಂತನೆ ಹೊಂದಿದ್ದ ಒಬ್ಬ ದೊಡ್ಡ ನಾಯಕರು ಇಂದು ನಮ್ಮನ್ನು ಅಗಲಿದ್ದಾರೆ.

ಅನೇಕ ನಾಯಕರುಗಳನ್ನು ನಾವು ಇಂದು ಕಳೆದುಕೊಂಡಿದ್ದೇವೆ. ವಿಶೇಷವಾಗಿ ನನ್ನ ಮಿತ್ರರಾದ ಎಂ.ಶ್ರೀನಿವಾಸ್‌ರವರು ಶ್ರೀರಂಗಪಟ್ಟಣದಿಂದ ಆಯ್ಕೆಯಾಗಿದ್ದವರು. ಸರಳ ವ್ಯಕ್ತಿತ್ವವುಳ್ಳವರು, ದೊಡ್ಡ ಸಮಾಜದಿಂದ ಬಂದವರಾಗಿದ್ದರು. ಸಾಮಾನ್ಯ ಜನರ ಒಡನಾಟ ಬಯಸಿದ್ದ ಇಂತಹ ಅನೇಕ ನಾಯಕರನ್ನು ನಾವು ಕಳೆದುಕೊಂಡಿದ್ದೇವೆ. ಇವರೊಂದಿಗೆ ಸನ್ಮಾನ್ಯ ಡಿ.ಸಿ.ಶ್ರೀಕಂಠಪ್ಪನವರು ಎಂದರೆ, ಚಿಕ್ಕಮಗಳೂರು ಜಿಲ್ಲೆಯಲ್ಲಷ್ಟೇ ಅಲ್ಲ, ಉತ್ತರ ಕರ್ನಾಟಕದಲ್ಲಷ್ಟೇ ಅಲ್ಲ, ಇಡೀ ರಾಜ್ಯದಲ್ಲಿ ಗಾಂಧಿ ತತ್ವಗಳನ್ನು, ಸಾಮಾನ್ಯರ ಜೊತೆಯಲ್ಲಿ ಇರಬೇಕಾದ ವ್ಯಕ್ತಿತ್ವವನ್ನು, ಎಲ್ಲರನ್ನೂ ಸಮಾನವಾಗಿ ಕಾಣುವ ಒಬ್ಬ ನಾಯಕರು ಚಿಕ್ಕಮಗಳೂರು ಜಿಲ್ಲೆಯಲ್ಲಿ ಕೇವಲ ಒಂದು ಪಕ್ಷದ ಲೋಕಸಭಾ ಸದಸ್ಯರಾಗಿ ಗೆದ್ದಿದ್ದಾರೆಂದರೆ, ಅದನ್ನು ನಾನು ಒಪ್ಪುತ್ತಿಲ್ಲ. ಯಾರಿಗೂ ಮತ್ತು ಎಲ್ಲಿಯೂ ಸಣ್ಣ ತಪ್ಪನ್ನೂ ಮಾಡದೆ, ತಮಗೆ ಬರುತ್ತಿದ್ದ ಲೋಕಸಭಾ ಅನುದಾನದಲ್ಲಿ ಎಲ್ಲರನ್ನೂ ಕೂರಿಸಿಕೊಂಡು, ಸಮಾನವಾಗಿ ಅನುದಾನ ನೀಡಿ ತದನಂತರ, ಗ್ರಾಮ ಪಂಚಾಯಿತಿಯ ಸದಸ್ಯರು ಯಾರು, ತಾಲ್ಲೂಕು ಪಂಚಾಯಿತಿ ಸದಸ್ಯರು ಯಾರು, ಜಿಲ್ಲಾ ಪಂಚಾಯಿತಿ ಸದಸ್ಯರು ಯಾರು, ಮತ್ತೊಂದು ಏನೂ

ಕೇಳದೆ, ಸಾರ್ವಜನಿಕರ ಹಿತದೊಂದಿಗೆ ಒಡನಾಟವುಳ್ಳವರಾಗಿ ಚಿಕ್ಕಮಗಳೂರು ಜಿಲ್ಲೆಯ ಇತಿಹಾಸದಲ್ಲೇ ಪ್ರಾಯಶ: ಮುಂದೆ ಕೂಡ ಅಂತಹ ಲೋಕಸಭಾ ಸದಸ್ಯರನ್ನು ನಾವು ಕಾಣುತ್ತೇವೋ, ಇಲ್ಲವೋ ಗೊತ್ತಿಲ್ಲ. ಹಿಂದೆಯೂ ಕಂಡಿಲ್ಲ. ಅವರು ಒಬ್ಬ ಗಾಂಧಿವಾದಿಯಾಗಿದ್ದರು. ಶುದ್ಧ ಹಸ್ತದ ಒಬ್ಬ ದೊಡ್ಡ ನಾಯಕರಾಗಿದ್ದರು. ನನಗೆ ತುಂಬಾ ಹತ್ತಿರದ ಬಾಂಧವ್ಯವಿರುವ ಒಬ್ಬ ಹಿರಿಯರನ್ನು ನಾವು ಕಳೆದುಕೊಂಡಿದ್ದೇವೆ.

ಇಂತಹ ಅನೇಕ ನಾಯಕರ ಜೊತೆಯಲ್ಲಿ ನವೆಂಬರ್ 26ನೇ ತಾರೀಖು ಮುಂಬಯಿಯಲ್ಲಿ ಜರುಗಿದ ಭಯಾನಕ ಅವ್ಯವಸ್ಥೆ ಪ್ರಾಯಶ: ಈ ರಾಷ್ಟ್ರದ ಏಕತೆ, ಸಮಗ್ರತೆಯನ್ನು ಹಾಳುಗೈಯುತ್ತಿರುವ ವಿಚ್ಛಿದ್ರಕಾರಿ ಶಕ್ತಿಗಳನ್ನು ಬಗ್ಗು ಬಡಿಯಬೇಕೆಂಬ ಚಿಂತನೆಯುಳ್ಳವರಾಗಿ ಮೂರು ದಿವಸಗಳ ಕಾಲ ಇಡೀ ಭಾರತೀಯರಾಗಿ ಅಂದಿನ ದಿನಗಳಲ್ಲಿ ಜರುಗಿದ ಅನೇಕ ಕಹಿ ಘಟನೆಗಳು ಮುಂದೆಂದೂ ಜರುಗದಂತೆ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ಆ ನಿಟ್ಟಿನಲ್ಲಿ ಇಂದು ತಮ್ಮ ಪ್ರಾಣ ಸಮರ್ಪಿಸಿರುವ ಈ ರಾಷ್ಟ್ರದ ಅತ್ಯುನ್ನತ ಸ್ಥಾನದಲ್ಲಿರುವ ಅನೇಕ ನಾಯುಕರುಗಳನ್ನು ನಾವು ಕಳೆದುಕೊಂಡಿದ್ದೇವೆ. ಸಾಮಾನ್ಯ ಜನರು, ಏನೂ ತಪ್ಪು ಮಾಡದೇ ಇರುವ ಅನೇಕ ಅಮಾಯಕರು ತಮ್ಮ ಪ್ರಾಣಗಳನ್ನು ಕಳೆದುಕೊಂಡಿದ್ದಾರೆ. ಇಂತಹ ಭಯಾನಕ ಕೃತ್ಯವನ್ನು ನಾವೆಲ್ಲರೂ ಖಂಡಿಸುತ್ತಾ, ಅನೇಕ ನಾಯಕರುಗಳನ್ನು ಕಳೆದುಕೊಂಡಿರುವ ಹಿನ್ನೆಲೆಯುಲ್ಲಿ ತಾವು ತಂದಿರುವ ಸಂತಾಪ ಸೂಚಕ ನಿರ್ಣಯಕ್ಕೆ ನಾನು ದನಿಗೂಡಿಸುತ್ತಾ ಮೃತರೆಲ್ಲರ ಅತ್ಮಗಳಿಗೆ ಶಾಂತಿ ಕೋರುತ್ತೇನೆ.

ಮಾನ್ಯ ಸಚಿವರಾದ ಶ್ರೀ ಸುರೇಶ್‌ಕುಮಾರ್‌ರವರು ಹೇಳಿದ ಒಂದು ಮಾತನ್ನು ಒಪ್ಪಿಕೊಳ್ಳುತ್ತೇನೆ. ಎಲ್ಲಿಯೋ ಒಂದು ಕಡೆ ತಾಂತ್ರಿಕ ವ್ಯವಸ್ಥೆಯಲ್ಲಿ ಇತ್ತೀಚಿನ ದಿನಗಳಲ್ಲಿ ನಾವು ಕೆಲಸಗಳನ್ನು ಮಾಡುವಾಗ ಯಾವ್ಯಾವುದಕ್ಕೆ ಎಷ್ಟೆಷ್ಟು ಆದ್ಯತೆ ನೀಡಬೇಕು ಎನ್ನುವುದಕ್ಕಿಂತಲೂ ಹೆಚ್ಚಾಗಿ ನಾವು ಕೂಡ ಉತ್ತರದಾಯಿತ್ವ (accountability)ವನ್ನು ನಮ್ಮ ವ್ಯಕ್ತಿತ್ವದಲ್ಲಿ ಅಳವಡಿಸಿಕೊಳ್ಳುವ ಮೂಲಕ ಎಲ್ಲಿಯೋ ಒಂದೆಡೆ ತಪ್ಪು ಮಾಡಿದರೆ, ಆ ತಪ್ಪನ್ನು ಮುಂದಿನ ದಿನಗಳಲ್ಲಿ ಹೇಳುವವರು ಇರಬೇಕಾಗುತ್ತದೆ. ಈ ದೃಷ್ಟಿಯಿಂದ flex ಬಗ್ಗೆ ಹೇಳಿರುವುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಯಾವುದಕ್ಕೆ ಎಷ್ಟರಮಟ್ಟಿಗೆ ಆದ್ಯತೆ ನೀಡಬೇಕೆಂಬುದರ ಬಗ್ಗೆ ಚಿಂತನ ಮಾಡದೇ ಹೋದರೆ, ಕರ್ನಾಟಕದ ಜನರಷ್ಟೇ ಅಲ್ಲ, ಭಾರತೀಯರಾಗಿ ಯಾರು ಏನೇ ಹೇಳಿದರೂ ಯಾವುದಕ್ಕೆ ಆದ್ಯತೆ ಕೊಡಬೇಕೋ, ಅದಕ್ಕೆ ಕೊಡದೇ ಹೋದರೆ,

ಅದರಿಂದ ಏನಾದರೂ ನಾವು ದೊಡ್ಡವರಾಗಿಬಿಟ್ಟೆವು ಎನ್ನುವ ದೃಷ್ಟಿಕೋನವುಳ್ಳವರು ಇಂತಹುದನ್ನು ಮರೆಯಬೇಕಾಗುತ್ತದೆ.

ಇಂದು ಯಾರು ನಮ್ಮನ್ನು ಅಗಲಿದ್ದಾರೋ, ಅವರೆಲ್ಲರ ಚಿಂತನೆಗಳನ್ನು ನಾವೆಲ್ಲರೂ ಮೈಗೂಡಿಸಿಕೊಳ್ಳೋಣವೆಂದು ಹೇಳಿ, ಅವರೆಲ್ಲರ ಆತ್ಮಕ್ಕೆ ಶಾಂತಿ ಕೋರಿ, ನನಗೆ ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ನಂಜನಗೂಡು):- ಸನ್ಮಾನ್ಯ ಸಭಾಧ್ಯಕ್ಷರೆ, ಸದನದಲ್ಲಿ ಮಂಡಿಸಿರುವ ಸಂತಾಪ ಸೂಚಕ ನಿರ್ಣಯದ ಬಗ್ಗೆ ನಾನೂ ಮಾತನಾಡಲು ಇಷ್ಟಪಡುತ್ತೇನೆ. ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು, ವಿರೋಧ ಪಕ್ಷದ ಉಪ ನಾಯಕರು ಮಾತನಾಡಿದ್ದಾರೆ. ಇತರ ಸದಸ್ಯರೂ ಮಾತನಾಡಿ ತಿಳಿಸಿದ್ದಾರೆ. ಆದರೂ ನನ್ನ ಸಂತಾಪವನ್ನು ಸಂಕ್ಷಿಪ್ತವಾಗಿ ಸೂಚಿಸುತ್ತಿದ್ದೇನೆ.

ಮೊದಲನೆಯದಾಗಿ, ಭಾರತದ ಮಾಜಿ ಪ್ರಧಾನಿಗಳಾದ ವಿಶ್ವನಾಥ ಪ್ರತಾಪಸಿಂಗ್‌ರವರ ಬಗ್ಗೆ ಈಗಾಗಲೇ ಮಾನ್ಯ ಸದಸ್ಯರೆಲ್ಲರೂ ಮಾತನಾಡುತ್ತಾ ತಮ್ಮ ವಿಷಯಗಳನ್ನು ಪ್ರಸ್ತಾಪಿಸಿದ್ದಾರೆ. ನಾನು ಸಂಸತ್‌ನಲ್ಲಿ ಸದಸ್ಯನಾಗಿ, ಅವರ ಸಹೋದ್ಯೋಗಿಯಾಗಿ ಅವರನ್ನು ಬಹಳ ಹತ್ತಿರದಿಂದ ನೋಡಿದ್ದೇನೆ. ಮೂಲತಃ, ಅವರು ಕಾಂಗ್ರೆಸ್‌ನವರಾಗಿದ್ದರು. ಉತ್ತರ ಪ್ರದೇಶದಲ್ಲಿ ಕಾಂಗ್ರೆಸ್ ಪಕ್ಷದ ಮುಖ್ಯಮಂತ್ರಿಗಳಾಗಿದ್ದರು. ಅನಂತರ, ಲೋಕಸಭಾ ಸದಸ್ಯರಾಗಿ ಆಯ್ಕೆಯಾಗಿ, ಕೇಂದ್ರ ಸರ್ಕಾರದಲ್ಲೂ ಬಹಳ ಜವಾಬ್ದಾರಿಯುತ ಖಾತೆಗಳನ್ನು ಹೊಂದಿ, ಅತ್ಯಂತ ಜವಾಬ್ದಾರಿಯಿಂದ ಆ ಖಾತೆಗಳನ್ನು ನಿರ್ವಹಿಸಿರುತ್ತಾರೆ. ಅವರು ಹಣಕಾಸು ಮತ್ತು ರಕ್ಷಣಾ ಸಚಿವರಾಗಿದ್ದರು. ಅವರು ಪ್ರಧಾನಮಂತ್ರಿಗಳಾಗಿದ್ದುದು ಕೇವಲ ಹತ್ತು ತಿಂಗಳು ಮಾತ್ರ.

ನನಗೆ ಗೊತ್ತಿರುವಂತೆ, ಪ್ರಧಾನಿಗಳಾಗಿದ್ದಾಗ ವಿಶೇಷವೇನೆಂದರೆ, rightist parties and leftist parties, ಈ ಎರಡೂ ಪಕ್ಷಗಳ ಬೆಂಬಲ ಪಡೆದು ಪ್ರಧಾನಮಂತ್ರಿ ಆಗಿದ್ದ ಹೆಗ್ಗಳಿಕೆ ಅವರದು. ಭಾರತೀಯ ಜನತಾ ಪಕ್ಷ ಮತ್ತು ಕಮ್ಯುನಿಸ್ಟ್ ಪಕ್ಷಗಳನ್ನೂ ಸೇರಿಸಿ ಅವರೆಲ್ಲರ ಬೆಂಬಲ ಗಳಿಸಿ ಸರ್ಕಾರ ರಚಿಸಿ ಪ್ರಧಾನಮಂತ್ರಿಗಳಾಗಿದ್ದವರು ದಿವಂಗತ ಸನ್ಮಾನ್ಯ ವಿ.ಪಿ.ಸಿಂಗ್‌ರವರು. ಸುಮಾರು ಹತ್ತು ತಿಂಗಳ ಕಾಲ ಪ್ರಧಾನ ಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ಅವರು

ಬಹಳ ವಿಶೇಷವಾದ ಅವಿಸ್ಮರಣೀಯವಾದ ಕೊಡುಗೆಯನ್ನು ಕೊಟ್ಟಿದ್ದಾರೆ. ಮಂಡಲ್ ಕಮಿಷನ್ ಎಂದು ನಾವು ಏನು ಹೇಳುತ್ತಿದ್ದೆವು, ಬಹುಶ: Mandal Commission Report was kept in the cold storage. ಮಂಡಲ್ ಆಯೋಗದ ವರದಿ ಕೇವಲ ಚರ್ಚೆಯಾಗುತ್ತಿತ್ತೇ ಹೊರತು ಯೂವುದೇ ಸರ್ಕಾರಗಳಿಂದ ಅದನ್ನು ಜಾರಿಗೆ ತರಲು ಸಾಧ್ಯವಿಲ್ಲವೆಂಬ ರೀತಿಯಲ್ಲಿ ನಾವೆಲ್ಲರು ಕೂಡ ಯೋಚನೆ ಮಾಡಿದ್ದೆವು. ಆದರೆ, ಅವರಿಗೆ ಇದ್ದಂಥ ರಾಜಕೀಯ ಇಚ್ಚಾಶಕ್ತಿ ಮತ್ತು ಒಂದು ಕಮಿಟ್‌ಮೆಂಟ್, ಸಮಾಜದ ಬಗ್ಗೆ ಅವರಿಗೆ ಇದ್ದಂಥ ಕಳಕಳಿ ಬಹುಶ: ಅವರು ಆ ಮಂಡಲ್ ಕಮಿಷನ್‌ನ ವರದಿಯನ್ನು ಅನುಷ್ಠಾನಕ್ಕೆ ತರತಕ್ಕ ಪ್ರಯತ್ನವನ್ನು ಮಾಡಿ ಅದರಲ್ಲಿ ಯಶಸ್ವಿ ಕೂಡ ಆದರು. ಮಂಡಲ್ ಕಮಿಷನ್‌ನ್ನು ಜಾರಿಗೆ ತರಬಾರದು ಎಂದು ಅದನ್ನು ವಿರೋಧಿಸಿ ದೇಶಾದ್ಯಂತ ದೊಡ್ಡ ಚಳುವಳಿಯೇ ಆಯಿತು ಎಂಬುದು ತಮಗೆ ಗೊತ್ತಿದೆ. ಕೊನೆಗೆ ಅದು ಸರ್ವೋಚ್ಚ ನ್ಯಾಯಾಲಯದ ಮುಂದೆ ಸಹ ಅದು ಹೋಯಿತು. ಅದಾದನಂತರ ಆ ವರದಿ implement ಆಗಬೇಕು, ಶೇಕಡ 27ರಷ್ಟು ಮೀಸಲಾತಿಯನ್ನು ಹಿಂದುಳಿದ ವರ್ಗದವರಿಗೆ ಕೊಡಬೇಕು ಎನ್ನತಕ್ಕ ಬಗ್ಗೆ ಸುಪ್ರಿಂಕೋರ್ಟ್ ಕೂಡ ವರದಿಯನ್ನು ಕೊಟ್ಟಿರತಕ್ಕದ್ದು. ಬಹುಶ: ಅದರ ಅನುಷ್ಠಾನಕ್ಕೆ ತೀರ್ಪನ್ನು ಕೊಟ್ಟಿರತಕ್ಕ ಹಿನ್ನೆಲೆಯಲ್ಲಿ ಬಂದಿರತಕ್ಕದ್ದು. ಇವತ್ತು ಕೂಡ ಶೋಷಿತವರ್ಗಕ್ಕೆ ಅದರಲ್ಲೂ ವಿಶೇಷವಾಗಿ ಹಿಂದಿಳಿದ ವರ್ಗಕ್ಕೆ ತಮಗೆ ಗೊತ್ತಿರಬಹುದು, higher education ...ರಬಹುದು ಅಥವಾ super speciality courses ...ರಬಹುದು, ಇವೆಲ್ಲವು ಕೂಡ ಅದು ಯಾವ ರೀತಿಯಾಗಿ ಎಷ್ಟೊಂದು ಅನುಕೂಲಗಳಾಗಿದೆ ಎನ್ನತಕ್ಕದ್ದು. ವಿ.ಪಿ. ಸಿಂಗ್‌ರವರು ಎಂದು ಹೇಳಿದರೆ he was beacon of backward classes ಎನ್ನತಕ್ಕ ರೀತಿಯಲ್ಲಿ ಇವತ್ತು ದೊಡ್ಡ ಕೊಡುಗೆಯನ್ನು ಸಾಧನೆಯನ್ನು ಮಾಡಿರತಕ್ಕದನ್ನು ನಾವು ಇವತ್ತು ನೋಡುತ್ತಿದ್ದೇವೆ. ವಿಶೇಷವಾಗಿ ನಾನು ಬಹಳ ಹತ್ತಿರದಿಂದ ಅವರನ್ನು, ಅದು ಅವರು ರಕ್ಷಣಾ ಸಚಿವರಾಗಿ ಬೋಫೋರ್ಸ್ ವರದಿಯನ್ನು ಹೊರಕ್ಕೆ ತಂದು ಅಲ್ಲಿ ಆಗಿರತಕ್ಕ ಭ್ರಷ್ಟಾಚಾರದ ಬಗ್ಗೆ ಅವರು ತೆಗೆದುಕೊಂಡಂಥ ತೀರ್ಮಾನ, ಇವೆಲ್ಲಕ್ಕಿಂತ ಹೆಚ್ಚಾಗಿ ನಾನು ನೋಡಿದಂತೆ, ಇವತ್ತು ರಾಜಕೀಯ ಕ್ಷೇತ್ರ ಎಂದರೆ ಮೂಗು ಮುರಿಯತಕ್ಕ ಕ್ಷೇತ್ರವಾಗಿದೆ. ಯಾರೂ ಇಷ್ಟಪಡತಕ್ಕ ಕ್ಷೇತ್ರವಲ್ಲ. ನಾವು ಆ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದೇವೆ. ಮಾನ್ಯ ಸುರೇಶ್ ಕುಮಾರ್‌ರವರು ಬಹಳ ಸೂಕ್ಷ್ಮವಾಗಿ ಇದರ ಬಗ್ಗೆ ಮಾತನಾಡುತ್ತ ಹೇಳಿದರು. ಪ್ರತಿ ನಿಮಿಷದಲ್ಲೂ ನಾವು ಜನರ ಹಂಗಿನಲ್ಲಿ ಅವರ

obligation ನಲ್ಲಿ ನಾವು ಇರತಕ್ಕವರು. ಬಹಳ ಕಷ್ಟಕರವಾದ ಜವಾಬ್ದಾರಿ ನಮಗಿದೆಯೆಂದು ಅವರು ಹೇಳಿದರು. ಇದರ ಮಧ್ಯದಲ್ಲಿಯೂ ನಾವು ಕೆಲವು ರಾಜಕಾರಣಿಗಳನ್ನು ಚುನಾಯಿತ ಪ್ರತಿನಿಧಿಗಳನ್ನು ನೆನಪಿಸಿಕೊಳ್ಳಬೇಕಾಗಿದೆ. ಬೇಕಾದರೆ role model „ ಆಗಿ ಬಹಳ ಆದರ್ಶಪ್ರಾಯವಾಗಿ ಈ ಕ್ಷೇತ್ರದಲ್ಲಿಯೂ ಬಹಳ ಪ್ರಮಾಣಿಕವಾಗಿ ನಿಷ್ಟೆಯಿಂದ ತಮ್ಮ ಜವಾಬ್ದಾರಿಯನ್ನು ನಿರ್ವಹಿಸಿರುವ ರಾಜಕಾರಣಿಗಳನ್ನು ನಾವು ಕಾಣುತ್ತೇವೆ. ವಿಶೇಷವಾಗಿ ವಿ.ಪಿ. ಸಿಂಗ್‌ರವರನ್ನು ಆ ದೃಷ್ಟಿಯಲ್ಲಿ ಕಾಣುತ್ತೇವೆ. ನಾವು ಇವತ್ತು ಪ್ರಾಮಾಣಿಕತೆ ಮತ್ತು ಪಾರದರ್ಶಕತೆಯ ಬಗ್ಗೆ ಮಾತನಾಡಬಹುದು. ಆದರೆ, ಅದನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದು ಬಹಳ ಕಷ್ಟ. ಆದರೆ. ವಿಶೇಷವಾಗಿ ವಿ.ಪಿ. ಸಿಂಗ್‌ರವರನ್ನು ನಾವೇನು charity begins at home ಎಂದು ಹೇಳುತ್ತೇವೆ ಅದನ್ನು ಕೇವಲ ಮಾತಿನಲ್ಲಿ ಅಲ್ಲ, ಅದನ್ನು ನಾವು ಕಾರ್ಯರೂಪದಲ್ಲಿ ಅಳವಡಿಸಿಕೊಳ್ಳಬೇಕು, ಅದು ನಮ್ಮಿಂದ ಆರಂಭವಾಗಬೇಕು ಎನ್ನುವುದು ಇದೆಯಲ್ಲಾ, ಬಹುಶ: ಅದನ್ನು ಮಾನ್ಯ ವಿ.ಪಿ. ಸಿಂಗ್‌ರವರಲ್ಲಿ ಬಹಳ ಮುಖ್ಯವಾಗಿ ಕಾಣುತ್ತಿದ್ದೆವು. ಬಹಳ ಶುದ್ಧವಾದ ರಾಜಕಾರಣಿ. ತಾವು ಏನನ್ನು ಹೇಳಿರುತ್ತಾರೆ ಬಹುಶ: ಅದೇ ರೀತಿ ನಡೆದುಕೊಂಡಿರತಕ್ಕ ರಾಜಕಾರಣಿಗಳಲ್ಲಿ, ರಾಜಕೀಯ ಮುಖಂಡರುಗಳಲ್ಲಿ ಅವರು ಒಬ್ಬರು. ಇಲ್ಲದಿದ್ದರೆ ಅವರು ಪ್ರಧಾನ ಮಂತ್ರಿಗಳಾಗಿ ಮುಂದುವರೆಯಬಹುದಾಗಿತ್ತು. ಅವರು ಯಾವ ಹಿನ್ನೆಲೆಯಲ್ಲಿ ಯಾವುದೇ ರಾಜಿಗೂ ಮುಲಾಜಿಗೂ ಒಳಗಾಗದೆ ತಮ್ಮ ಅಧಿಕಾರದಿಂದ ಕೆಳಗೆ ಇಳಿದರು ಎಂಬುದು ತಮಗೆ ಗೊತ್ತಿದೆ. ಅವರು ಸ್ವಲ್ಪ ಪ್ರಯತ್ನ ಮಾಡಿದ್ದರೂ ಅಧಿಕಾರದಲ್ಲಿ ಉಳಿದುಕೊಳ್ಳಬಹುದಾಗಿತ್ತು. ರಥಾಯಾತ್ರೆಯ ವಿಷಯದಲ್ಲಿರಬಹುದು, ಅದರಲ್ಲಿ ಅವರು ರಾಜಿಯಾಗಲಿಲ್ಲ. ಅವರ ಮನಸ್ಸು ಒಪ್ಪಲಿಲ್ಲ. ಆದ್ದರಿಂದ ಅವರು ಪ್ರಧಾನಿ ಪಟ್ಟದಲ್ಲೇ ಮುಂದುವರೆಯಬೇಕು ಎಂಬ ಇಚ್ಛೆ ಮುಖ್ಯವಾಗಿ ಅವರಿಗೆ ಇರಲಿಲ್ಲ. ಅವರಿಗೆ ಅಧಿಕಾರ ಮುಖ್ಯವಾಗಿ ಬೇಕಾಗಿರಲಿಲ್ಲ. ಅವರು ಪ್ರಧಾನ ಮಂತ್ರಿಗಳ ಮಟ್ಟಕ್ಕೆ ಹೋದರೂ ಕೂಡ ಅವರು ರಾಜ ಮನೆತನದಿಂದ ಬಂದಿದ್ದರೂ ಶ್ರೀಸಾಮಾನ್ಯರ ಸಮಸ್ಯೆಗಳನ್ನು ಬಹಳ ಚೆನ್ನಾಗಿ ಅರಿತಿದ್ದರು. ಬಹಳ ಶುದ್ಧವಾದ ಹಸ್ತದಿಂದ ಸಾಮಾಜಿಕ ಕಳಕಳಿಯನ್ನಿಟ್ಟುಕೊಂಡು ಬಹಳ ಎತ್ತರದಲ್ಲಿ ಚಿಂತನೆ ಮಾಡಿದಂಥವರು. ಈ ನಿಟ್ಟಿನಲ್ಲಿ ವಿ.ಪಿ. ಸಿಂಗ್‌ರವರು ಬಹಳ ಆದರ್ಶಪ್ರಾಯವಾದ ರಾಜಕಾರಣಿ, ರಾಜಕೀಯ ಮುಖಂಡರು ಮತ್ತು ಮಾಜಿ ಪ್ರಧಾನ ಮಂತ್ರಿಯಾಗಿದ್ದಂಥವರು. ಅಂಥವರನ್ನು ನಾವು ಈ ಸದನದಲ್ಲಿ ನೆನಪಿಸಿಕೊಳ್ಳುತ್ತೇವೆ.

ಅವರಿಗೆ ಸಂತಾಪವನ್ನು ಸೂಚಿಸುತ್ತಿರುವ ಸಂದರ್ಭದಲ್ಲಿ ಅವರನ್ನು ನೆನಪಿಸಿಕೊಳ್ಳುವ ಈ ಸಂದರ್ಭದಲ್ಲಿ ನಾವೂ ಕೂಡ ಜನಪ್ರತಿನಿದಿಗಳಾಗಿರುವ ಈ ಸಂದರ್ಭದಲ್ಲಿ ನಮ್ಮ ಜೀವನದಲ್ಲಿ ಸ್ವಲ್ಪ ಆ ರೀತಿ ಯೋಚನೆ ಮಾಡಿ ಅವರ ವಿಚಾರಧಾರೆಗಳನ್ನು ಅವರ ಆಲೋಚನೆಗಳನ್ನು ನಾವು ಅಳವಡಿಸಿಕೊಂಡರೆ ಬಹುಶ: ನಮ್ಮ ಜೀವನ ಸಾರ್ಥಕವಾಗುತ್ತದೆ ಎಂಬುದನ್ನು ಈ ಸಂದರ್ಭದಲ್ಲಿ ನಾನು ಅವರನ್ನು ನೆನಪಿಸಿಕೊಳ್ಳುತ್ತೇನೆ.

ಮಾನ್ಯ ಸಿದ್ದರಾಜುರವರ ಬಗ್ಗೆ ಈಗಾಗಲೇ ಹಲವಾರು ಜನ ಸದಸ್ಯರುಗಳು ಮಾತನಾಡಿದ್ದಾರೆ. ಸಿದ್ದರಾಜುರವರು ಯವಕರಾಗಿದ್ದವಂಥವರು. ಸ್ವಲ್ಪ ದಿವಸಗಳ ಕಾಲ ವಿಧಾನ ಪರಿಷತ್ತಿನ ಸದಸ್ಯರಾಗಿದ್ದರು. ಅವರ ಅಕಾಲಿಕ ನಿಧನದಿಂದ ಇತ್ತೀಚೆಗೆ ನಡೆದ ಉಪಚುನಾವಣೆಯಲ್ಲಿ ಅವರ ಶ್ರೀಮತಿಯವರು ಆಯ್ಕೆಯಾಗಿದ್ದಾರೆ. ಬಹಳ ಜನಪರ ಚಳುವಳಿಯಲ್ಲಿ ತೊಡಗಿಸಿಕೊಂಡಿದ್ದ ಯುವಕರಾಗಿದ್ದಂಥ ಒಳ್ಳೆಯ ಜನಪ್ರತಿನಿದಿಗಳಾಗಿದ್ದಂಥ ಸಿದ್ದರಾಜುರವರ ಅಗಲಿಕೆಯಿಂದ ನಮ್ಮ ಭಾಗದಲ್ಲಿ, ಅದರಲ್ಲೂ ವಿಶೇಷವಾಗಿ ದಲಿತರು, ರೈತರು ಮತ್ತು ಹಿಂದುಳಿದ ವರ್ಗದವರ ಬಗ್ಗೆ ಸದಾ ಚಿಂತನೆ ಮಾಡಿ ಅವರ ಒಡನಾಟವನ್ನು ಇಟ್ಟುಕೊಂಡಿದ್ದಂಥ ಸಿದ್ದರಾಜುರವರ ಅಗಲಿಕೆಯಿಂದ ಒಬ್ಬ ಯುವಕ ಮತ್ತು ಜನಪ್ರತಿನಿದಿಯನ್ನು ನಾವು ಕಳೆದು ಕೊಂಡಂತಾಗಿದೆ.

ಲಕ್ಷ್ಮೀಸಾಗರ್‌ರವರು, ಅವರನ್ನು ನಾನು ಬಹಳ ವರ್ಷಗಳಿಂದ ಬಹಳ ಹತ್ತಿರದಿಂದ ನೋಡಿದ್ದೇನೆ. ಅವರು ಒಬ್ಬರು ರಾಜಕಾರಣಿ ಎಂಬುದಕ್ಕಿಂತ ಅವರು ಒಬ್ಬರು ಸಮಾಜವಾದಿ ಚಿಂತಕರಾಗಿದ್ದರು. ಸಾಮಾಜಿಕ ನ್ಯಾಯದ ಹೋರಾಟದ ಮುಂಚೂಣಿಯಲ್ಲಿದ್ದಂಥವರು. ಏಕೆಂದರೆ ನಮಗೆ Politics is a series of compromise ಎನ್ನತಕ್ಕ ಮಾತನ್ನು ಕೇಳುತ್ತೇವೆ. ನಮ್ಮ ಜೀವನದಲ್ಲಿ ಮೊದಲನೆಯ ಪಾಠವನ್ನು ಬಹಳವಾಗಿ ಕಲಿಯುವುದೇ ಅದು. ರಾಜಕೀಯ ಎಂದರೆ ಹೊಂದಾಣಿಕೆ ಎಂಬುದು ಸಾಮಾನ್ಯ. ಏಕೆಂದರೆ ನಮ್ಮ ಅಧಿಕಾರಕ್ಕೋಸ್ಕರ, ನಮ್ಮ ಮೇಲೆ ಇರತಕ್ಕ ಮುಖಂಡರುಗಳನ್ನು ಒಲೈಸುವುದಕ್ಕೋಸ್ಕರ, ರಾಜಕೀಯದಲ್ಲಿ ಒಂದು ಸಲ ಆಯ್ಕೆಯಾದರೆ ಎರಡನೆಯ ಸಲ ಆಯ್ಕೆಯಾಗಬೇಕು, ಎರಡನೆಯ ಸಲ ಆಯ್ಕೆಯಾದರೆ ಮಂತ್ರಿಗಳಾಗಬೇಕು ಎಂಬ ಬಯಕೆಗಳೇನಿದೆ, ಹಾಗಾಗಿ ನಮ್ಮಲ್ಲಿ ಎಲ್ಲೋ ಒಂದು ಕಡೆ ಎಷ್ಟೇ ದೌಜ್ಯನ್ಯ ದಬ್ಬಾಳಿಕೆಗಳು ಅನ್ಯಾಯಗಳು ನಡೆದಾಗಲೂ ನಾವು ಕಾಂಪ್ರಮೈಸ್ ಮಾಡಿಕೊಳ್ಳತಕ್ಕದ್ದು, ಹೊಂದಾಣಿಕೆ ಮಾಡಿಕೊಳ್ಳತಕ್ಕದು ನಮ್ಮ

ಜೀವನದಲ್ಲಿ ತುಂಬಾ ಮೊದಲನೆಯ ಪಾಠವಾಗಿ ಕಲಿಯತಕ್ಕದ್ದು. ಆದರೆ, ನಾವು ಲಕ್ಷ್ಮೀಸಾಗರ್‌ರವರಂಥವರನ್ನು ನೋಡಿದಾಗ, ನಮಗೆ ರಾಜಕೀಯ ಜೀವನದಲ್ಲಿ ಒಳ್ಳೆಯ ಅವಕಾಶ ಸಿಕ್ಕಿದೆ, ರಾಜಕೀಯ ಎನ್ನತಕ್ಕದ್ದು ಒಂದು ಸಾಮಾಜಿಕ ಸಂಬಂಧ ಮತ್ತು ಕಳಕಳಿ ಇರಬೇಕು ಎನ್ನತಕ್ಕದನ್ನು ನಾವು ನೋಡಿದಂಥದ್ದು ಬಹುಶಃ ಲಕ್ಷ್ಮೀಸಾಗರ್‌ರವರಲ್ಲಿ. ಅವರು ತಮ್ಮ ಜೀವನವನ್ನೇ ಈ ರೀತಿಯ ಹೋರಾಟಕ್ಕಾಗಿ ಮುಡಿಪಾಗಿಟ್ಟಿದ್ದರು. ಸಮಾಜದಲ್ಲಿ ಈ ಒಂದು ಸಮಾಜವಾದಿ ಚಳುವಳಿಯಲ್ಲಿ ತೊಡಗಿಸಿಕೊಂಡು ಸಮಾನತೆಗೋಸ್ಕರ ಸಾಮಾಜಿಕ ನ್ಯಾಯಕ್ಕೋಸ್ಕರ ರಾಜಕೀಯ ಜೀವನದಲ್ಲಿ ಇದ್ದರೂ ಹೋರಾಟ ಮಾಡಿದಂಥ ಒಬ್ಬರು ಆದರ್ಶವಾದಿ. ಸದಾ ಅತ್ಯಂತ ಪ್ರಾಮಾಣಿಕ ಮತ್ತು ನಿಷ್ಠೆಯಿಂದ ತಮ್ಮ ರಾಜಕೀಯ ಜೀವನವನ್ನು ಸವೆಸಿದಂಥವರು ಲಕ್ಷ್ಮೀಸಾಗರ್‌ರವರು. ಅಂಥವರನ್ನು ನಾವು ಈ ಸಂದರ್ಭದಲ್ಲಿ ಎಲ್ಲರೂ ನೆನಪಿಸಿಕೊಳ್ಳಬೇಕಾಗಿದೆ.

ಮಾನ್ಯ ಹೆಚ್.ಎನ್. ನಂಜೇಗೌಡರು, ಅವರು ನನ್ನ ಸಹೋದ್ಯೋಗಿಗಳಾಗಿ ಎರಡು ಅವಧಿಗೆ ಲೋಕಸಭೆಯಲ್ಲಿ ನನ್ನ ಪಕ್ಕದಲ್ಲೇ ಕುಳಿತುಕೊಳ್ಳುತ್ತಿದ್ದರು. ಅವರು ಸ್ವಲ್ಪ ಮುಂಗೋಪಿಗಳಾಗಿದ್ದರು. ಯುವುದೇ ವಿಷಯ ಬಂದಾಗ ಅವರಿಗೆ ಹಿಡಿಸಲಿಲ್ಲವೆಂದರೆ ನೇರವಾಗಿ ಒಂದು ರೀತಿ attack ಮಾಡುವ ರೀತಿಯಲ್ಲಿ ವಿರೋಧ ಮಾಡುವ ರೀತಿಯಲ್ಲಿ ಅದಕ್ಕೆ ಹಿನ್ನೆಲೆಯನ್ನು expose ಮಾಡಬೇಕು ಎಂಬ ರೀತಿಯಲ್ಲ ಬಹಳ ಹೋರಾಟ ಮಾಡಬೇಕು ಎಂಬ ಮನೋಭಾವ ಅವರಲ್ಲಿತ್ತು. He was a good Parliamentarian. ಬಹಳ ಉತ್ತಮವಾದ ಸಂಸದೀಯಪಟುಗಳಾಗಿದ್ದರು. ನೀರಾವರಿಯ ಬಗ್ಗೆ ಕೃಷ್ಣ ಕಾವೇರಿ ಬಗ್ಗೆ ಹೇಳಿದರು. ಕಾವೇರಿ ನೀರಿನ ವಿಚಾರ ಬಂದಾಗ ನಾನು ಕೂಡ ಅವರ ಜೊತೆ ಕುಳಿತು ಚರ್ಚೆ ಮಾಡುತ್ತಿದ್ದೆ. ಕಾವೇರಿ ನದಿ ನೀರಿನ ವಿಚಾರ ಬಂದಾಗ ನಾವು ಕರ್ನಾಟಕದವರು ಟ್ರಿಬ್ಯೂನಲ್‌ನ್ನು ರಚನೆ ಮಾಡುವುದು ಬೇಡ, ಜಗತ್ತಿನಲ್ಲಿ ಎಲ್ಲೂ ನ್ಯಾಯಾಲಯಗಳು ಅಥವಾ ಟ್ರಿಬ್ಯೂನಲ್‌ಗಳಿಂದ ನೀರಿನ ಹಂಚಿಕೆ ಸಾಧ್ಯವಿಲ್ಲ, ಕೇವಲ ಮಾತುಕತೆಯಿಂದ ಮಾತ್ರ ಅದು ಸಾಧ್ಯ ಎನ್ನುವುದನ್ನು ಅವರು ಸದಾ ನಮ್ಮ ಜೊತೆ ಮಾತನಾಡುವಾಗ ಹೇಳುತ್ತಿದ್ದರು. ನಾವು ಅವರು ಚರ್ಚೆ ಮಾಡುತ್ತಿದ್ದ ಆ ವಿಚಾರಗಳು ಬಹಳ ಪ್ರಮುಖವಾದಂಥವು. ನೀರಾವರಿ ತಜ್ಞರಾಗಿ ಅವರು ಕಾವೇರಿ ಮತ್ತು ಕೃಷ್ಣ ನದಿ ನೀರಿನ ಹಂಚಿಕೆಯನ್ನು ನಾವು ಮಾತುಕತೆಯ ಮೂಲಕವೇ ಪರಿಹಾರ ಮಾಡುವುದಕ್ಕೆ ಸಾಧ್ಯವೆಂದು ಹೇಳಿದ್ದಂಥವರು, ಜೊತೆಗೆ ನನಗೆ ತಿಳಿದ ಮಟ್ಟಿಗೆ national water policy ಆಗಬೇಕು ಎಂದು ಹೇಳಿದಂಥವರು, ರಾಷ್ಟ್ರೀಯ ಜಲನೀತಿಯೇ ಆಗಬೇಕು ಅದರ ಮೂಲಕ ಈ ನೀರಿನ ಸಮಸ್ಯೆಯನ್ನು ಬಗೆಹರಿಸಬಹುದು ಎಂಬ ಚಿಂತನೆಯನ್ನು ಬಹಳ ಆಳವಾಗಿ ಯೋಚನೆ ಮಾಡಿದಂಥವರು ಆ ಮೂಲಕ ನೀರಿನ ಸಮಸ್ಯೆಯನ್ನು ಬಗೆಹರಿಸಬಹುದು ಎಂಬ ಯೋಚನೆ ಮಾಡಿದಂಥವರು ಮತ್ತು ಕಾನೂನು ತಜ್ಞರು ಕೂಡ ಆಗಿದ್ದರು ಮಾನ್ಯ ಹೆಚ್.ಎನ್. ನಂಜೇಗೌಡರು. ಬಹುಶ: ಕರ್ನಾಟಕದಲ್ಲಿ ಯಾವುದೇ ಸರ್ಕಾರ ಬಂದಾಗಲೂ ನೀರಾವರಿ ಸಮಸ್ಯೆಗಳು ಬಂದಂಥ ಸಮಯದಲ್ಲಿ ಅವರ ಸಲಹೆಗಳು ಮತ್ತು ಮಾರ್ಗದರ್ಶನವನ್ನು ಎಲ್ಲಾ ಸರ್ಕಾರಗಳು, ಯಾವುದೇ ಸರ್ಕಾರಗಳಿರಲಿ ಪಡೆದುಕೊಳ್ಳುತ್ತಿದ್ದರು. ಅಂಥವರ ಅಗಲಿಕೆಯಿಂದ ನಮಗೆ ಭರಿಸಲಾರದಂತ ನಷ್ಟವಾಗಿದೆ.

ಎಂ.ಶ್ರೀನಿವಾಸ್‌ರವರು, ಬಹುಶ: ಅವರು ಒಂದೇ ಬಾರಿಗೆ ಶ್ರೀರಂಗಪಟ್ಟಣದಿಂದ ಆಯ್ಕೆಯಾಗಿ ಬಂದಿದ್ದರು. ಅವರ ಊರು ಶ್ರೀರಂಗಪಟ್ಟಣದ ಚಂದಗಾಲ ಎಂಬುದು. ಚಂದಗಾಲದ ಮರಿಯಪ್ಪ ಎಂದರೆ ಆ ಕಾಲದಲ್ಲೇ ನೀರಾವರಿ ಪ್ರದೇಶದ ನೂರಾರು ಎಕರೆ ಭೂಮಿ ಇದ್ದಂಥ ಮನೆತನದ ಹಿನ್ನೆಲೆಯಿಂದ ಅವರು ಬಂದಂಥವರು. ಅವರನ್ನು ನೋಡಿದರೆ ಬಹುಶ: ಅವರು ಅಂಥ ಮನೆತನದ ಹಿನ್ನೆಲೆಯಿಂದ ಬಂದಂಥವರು ಎಂದು ಹೇಳುವುದಕ್ಕೆ ಆಗುತ್ತಿರಲಿಲ್ಲ. ಅಷ್ಟು ಸರಳ ಸೌಜನ್ಯ ಸಜ್ಜನಿಕೆ ಮತ್ತು ಪ್ರಾಮಾಣಿಕವಾದ ರಾಜಕಾರಣಿಯಾಗಿದ್ದರು. ಆ ಕಾಲಕ್ಕೆ ಗೇಣಿದಾರರ ಕಾಯ್ದೆ ಬಂದಂಥ ಸಂದರ್ಭದಲ್ಲಿ ಯಾರು ಗೇಣಿದಾರರಾಗಿದ್ದರು ಅವರಿಗೆ ನೂರಾರು ಎಕರೆ ನೀರಾವರಿ ಭೂಮಿಯನ್ನು ಕೊಡಿಸಿಕೊಟ್ಟಂಥವರು.

ನಾವಿಬ್ಬರೂ ಕೂಡ ಸ್ನೇಹಿತರು ಮತ್ತು ಸಮಕಾಲೀನರು ಮತ್ತು ಒಟ್ಟಿಗೇ ರಾಜಕೀಯವನ್ನು ಪ್ರವೇಶಿಸಿದವರಾಗಿದ್ದೇವೆ. ನಿಗರ್ವಿಗಳಾಗಿದ್ದು, ಅತ್ಯಂತ ಶ್ರೀಮಂತ ಕುಟುಂಬದ ಹಿನ್ನೆಲೆಯಿಂದ ಬಂದವರಾಗಿದ್ದರೂ ಕೂಡ ಶ್ರೀಸಾಮಾನ್ಯನ ಜೊತೆಯಲ್ಲಿಯೆ ವಿಶೇಷವಾಗಿ ಬೆರೆಯುತ್ತಿದ್ದರು. ಅವರು ಬಹಳ ಸರಳ, ಸಜ್ಜನಿಕೆಯ ಒಬ್ಬ ಜನ ಪ್ರತಿನಿಧಿಯಾಗಿದ್ದರು. ಅವರ ಅಕಾಲಿಕ ನಿಧನದಿಂದ ರಾಜಕೀಯ ಕ್ಷೇತ್ರದಲ್ಲಿ ಒಬ್ಬ ಸರಳ ಸಜ್ಜನಿಕೆಯ ವ್ಯಕ್ತಿಯನ್ನು ಕಳೆದುಕೊಂಡಿದ್ದೇವೆಂದು ನಾನು ಹೇಳಬಯಸುತ್ತೇನೆ. ಮಾನ್ಯ ಶ್ರೀಕಂಠಪ್ಪನವರೂ ಸಹ ನನ್ನ ಜೊತೆಗೆ ಸಹೋದ್ಯೋಗಿ ಆಗಿದ್ದರು. 'Talk less, work more' ಎಂಬ ರೀತಿಯಲ್ಲಿ ಅವರು ಮಾತು ಕಡಿಮೆ ಮಾಡಿ ಕೆಲಸ ಹೆಚ್ಚು ಮಾಡುತ್ತಿದ್ದರು. ಕೃಷಿ ಮತ್ತು ಕೃಷಿಕರ ಬಗ್ಗೆ

ಅವರು ಸದಾಕಾಲ ಚಿಂತನೆಯನ್ನು ಮಾಡುತ್ತಿದ್ದರು. ಅವರು Parliamentನ Standing Committee ಇರಲಿ ಅಥವಾ Consultative Committee ಇರಲಿ ಅಥವಾ ಬೇರೆ ಯಾವುದೇ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳ ಹತ್ತಿರ ಸಮಾಲೋಚನೆ ಮಾಡುವ ಸಂದರ್ಭದಲ್ಲಿ, ಏನಾದರೂ ಅವರ ಗಮನಕ್ಕೆ ತರುವ ಸಂದರ್ಭದಲ್ಲಿ ಅವರು ಕೃಷಿಕರ ಬಗ್ಗೆ ಪ್ರಸ್ತಾಪಿಸುತ್ತಿದ್ದರು. ಅವರ ಬಗ್ಗೆ ಅಪಾರವಾದ ಕಾಳಜಿ ಇಟ್ಟುಕೊಂಡಿದ್ದರು. ಬಹಳ ಸರಳತೆಯಿಂದಿದ್ದ ಮಾನ್ಯ ಡಿ.ಸಿ.ಶ್ರೀಕಂಠಪ್ಪ ಅವರು ಸಂಸತ್ ಸದಸ್ಯರಾಗಿ ಕಡಿಮೆ ಮಾತಿನಲ್ಲಿ ಹೆಚ್ಚು ಕೆಲಸ ಮಾಡಬೇಕೆನ್ನುವ ಮನೋಭಾವ ಹೊಂದಿದ್ದರು. ಅವರ ಅಕಾಲಿಕ ಮರಣದಿಂದ ನಾವು ಉತ್ತಮ ಜನಪ್ರತಿನಿಧಿಯೊಬ್ಬರನ್ನು ಕಳೆದುಕೊಂಡಂತಾಗಿದೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನೂ ಅನೇಕ ಪ್ರಮುಖರು ನಿಧನ ಹೊಂದಿದ್ದಾರೆ. ಅವರೆಲ್ಲರ ಬಗ್ಗೆ ಈಗಾಗಲೇ ಮಾನ್ಯ ಸಭಾ ನಾಯಕರು ಹಾಗೂ ಇತರರು ಮಾತನಾಡಿದ್ದಾರೆ. ಮುಂಬೈ ಭಯೋತ್ಪಾದನಾ ಘಟನೆ ಬಗ್ಗೆ ಮಾನ್ಯ ಸುರೇಶ್‌ಕುಮಾರ್‌ರವರು ಮಾತನಾಡುತ್ತಾ, passing remarks ಮಾಡಿದರು. ಸಂಸತ್‌ನಲ್ಲಿ ಚರ್ಚೆಯಾಗಿದ್ದರ ಬಗ್ಗೆ ನಾವಿಲ್ಲಿ ಮಾತನಾಡುವುದು ಅಷ್ಟೊಂದು ಸೂಕ್ತವಲ್ಲವೆಂದು ನನಗನಿಸುತ್ತದೆ. ಭಯೋತ್ಪಾದನೆ ಬಗ್ಗೆ ಸಂಸತ್‌ನಲ್ಲಿ ಪ್ರಸ್ತಾಪವಾಗಿದ್ದನ್ನು ಯಾರೋ, ಎಲ್ಲೋ ಒಂದು ಕಡೆ ಮಾತನಾಡಿದರು. ಬಹುಶ: ಅದನ್ನು ಯಾರೂ ಕೂಡ ಒಪ್ಪಿಲ್ಲ. ರಾಷ್ಟ್ರದ ಎಲ್ಲಾ ಪಕ್ಷದವರೂ ಕೂಡ ಭಯೋತ್ಪಾದನೆ ವಿರುದ್ಧ ನಾವೆಲ್ಲರೂ ಒಟ್ಟಾಗಿ ಹೋರಾಟ ಮಾಡಬೇಕೆನ್ನುವ ಸಂಕಲ್ಪವನ್ನು ಮಾಡಿದ್ದೇವೆ. ಈ ವಿಷಯದಲ್ಲಿ ಎಲ್ಲರೂ ಕೂಡ ಒಗ್ಗಟ್ಟಾಗಿರುವುದನ್ನು ನಾವೆಲ್ಲರೂ ಮೆಚ್ಚಬೇಕಾಗಿದೆ. ಭಯೋತ್ಪಾದನೆ ಎಂಬುದು ಇವತ್ತು ಇಡೀ ಜಗತ್ತನ್ನೇ ನಡುಗಿಸಿದೆ. ವಿಶ್ವ ವಾಣಿಜ್ಯ ಕೇಂದ್ರದಿಂದ ಮುಂಬೈವರೆಗೂ ಕೂಡ ಇವತ್ತು ಭಯೋತ್ಪಾದನೆ ಯಾವ ರೀತಿ ನಡೆದಿದೆ? ಭಯೋತ್ಪಾದಕರು ಯಾವ ರೀತಿಯಾಗಿ ನಡೆದುಕೊಂಡು ಬರುತ್ತಿದ್ದಾರೇ ಎಂಬುದು ನಮ್ಮೆಲ್ಲರಿಗೂ ಕೂಡ ಗೊತ್ತಿದೆ. ಇಡೀ ಜಗತ್ತೇ ಇದರ ವಿರುದ್ಧ ಇವತ್ತು ಸಿಡಿದು ನಿಂತಿದೆ ಮತ್ತು ಜಾಗೃತವಾಗಿದೆ. ಮುಂಬೈಯಲ್ಲಿ ನಡೆದಂತಹ ಘಟನೆ ಇವತ್ತು ಪಾಠವಾಗಬೇಕು. ಅಮೆರಿಕಾದಲ್ಲಿ World Trade Centre ಮೇಲೆ attack ಆದ ನಂತರ, ಮುಂದೆ ಆ ರೀತಿಯ ಕೃತ್ಯಗಳನ್ನು ನಡೆಸಲು ಭಯೋತ್ಪಾದಕರಿಗೆ ಅವಕಾಶ ಕೊಡಬಾರದು ಎಂಬ ರೀತಿಯಲ್ಲಿ ಯಾವ ರೀತಿಯಾಗಿ ಅಮೆರಿಕಾ ರಾಷ್ಟ್ರ ಎಚ್ಚರಿಕೆಯಿಂದ ಇದೆಯೋ, ಅದೇ ರೀತಿಯಲ್ಲಿ

ನಮ್ಮಲ್ಲೂ ಕೂಡ ಪ್ರತಿಯೊಬ್ಬರೂ ಅದರ ಬಗ್ಗೆ ಎಚ್ಚರಿಕೆಯಿಂದ ಇರಬೇಕು. ಪ್ರತಿಯೊಬ್ಬರೂ ಒಗ್ಗಟ್ಟಾಗಿ ಭಯೋತ್ಪಾದನೆ ವಿರುದ್ಧ ಹೋರಾಟ ನಡೆಸಬೇಕೆಂದು ಇವತ್ತು ಪಣ ತೊಟ್ಟಿದ್ದಾರೆ. ಇದರಲ್ಲಿ ಎರಡನೇ ಮಾತೇ ಇಲ್ಲ. ಇವತ್ತು ಮುಂಬೈನಲ್ಲಿ ಘಟನೆ ನಡೆದ ದಿನ ಒಂದು ಕರಾಳ ದಿನವಾಗಿದೆ. ಪ್ರತಿ ನಿಮಿಷದಲ್ಲೂ ಕೂಡ ಪ್ರತಿ ಭಾರತೀಯನಲ್ಲೂ ಕೂಡ ಆತಂಕ ಮನೆ ಮಾಡಿದೆ. ಆ ಸುದ್ದಿಯನ್ನು ನಾವು electronic mediaದಲ್ಲಿ ಅಥವಾ ಇನ್ನಿತರ ಮಾಧ್ಯಮದಲ್ಲಿ ನೋಡಿದಂತಹ ಸಂದರ್ಭದಲ್ಲಿ ಪ್ರತಿಯೊಬ್ಬ ಭಾರತೀಯನೂ ಕೂಡ ಅದರ ಬಗ್ಗೆ ಚಿಂತನೆ ಮಾಡಿದ್ದಾನೆ ಅಥವಾ ಯೋಚನೆ ಮಾಡಿದ್ದಾನೆ. ಪ್ರತಿ ನಿಮಿಷವೂ ಕೂಡ ನಮಗೆ ಆತಂಕದ ಕ್ಷಣಗಳಾಗಿದ್ದವು. ಭಯೋತ್ಪಾದನೆ ವಿರುದ್ಧ ಜೀವದ ಹಂಗನ್ನು ತೊರೆದು NSGಯುವರು ಯಾವ ರೀತಿ ಹೋರಾಟ ಮಾಡಿದರು ಎಂಬುದನ್ನು ನಾವು ನೋಡಿದ್ದೇವೆ. ಇಡೀ ದೇಶ ಇವತ್ತು ಅವರನ್ನು ಸ್ಮರಿಸಿಕೊಳ್ಳುತ್ತಿದೆ. ಇವತ್ತು ನಮ್ಮ ದೇಶದಲ್ಲಿ ಅವರೆಲ್ಲರೂ ಕೂಡ ಹುತಾತ್ಮರಾಗಿದ್ದಾರೆ. Anti-terrorist squadನಲ್ಲಿ ಇದ್ದಂತಹ ಹೇಮಂತ್ ಕರ್ಕರೆ ಇರಬಹುದು, encounter specialists ಇರಬಹುದು ಅಥವಾ NSGಯಲ್ಲಿ ಇದ್ದಂತಹ ಮೇಜರ್ ಸಂದೀಪ್ ಉನ್ನಿಕೃಷ್ಣನ್ ಇರಬಹುದು, ಇವರೆಲ್ಲರೂ ಕೂಡ ಭಯೋತ್ಪಾದನೆ ವಿರುದ್ಧ ಹೋರಾಟ ಮಾಡಿದ್ದನ್ನು ನಾವೆಲ್ಲರೂ ಕೂಡ ಮೆಚ್ಚಬೇಕಾಗಿದೆ ಮತ್ತು ಬಹುಶ: ಅದನ್ನು ಅನುಸರಿಸಬೇಕಾಗಿದೆ. ಪ್ರತಿಯೊಬ್ಬ ಭಾರತೀಯನೂ ಕೂಡ ಅವರ ಬಗ್ಗೆ ಹೆಮ್ಮೆ ಪಡಬೇಕಾಗಿದೆ. ಅಂದು ಅವರು ಭಯೋತ್ಪಾದಕರ ವಿರುದ್ಧ ವೀರಾವೇಶದ ಹೋರಾಟ ಮಾಡಿದ್ದು, ಬಹುಶ: ನಮ್ಮೆಲ್ಲರ ನೆನಪಿನಲ್ಲಿಯೂ ಕೂಡ ಚಿರಸ್ಥಾಯಿಯಾಗಿ ಉಳಿಯುತ್ತದೆ. ಭಯೋತ್ಪಾದನೆ ವಿರುದ್ಧ ನಾವೆಲ್ಲರೂ ಕೂಡ ಏಕತೆಯಿಂದ ಹೋರಾಟ ಮಾಡಬೇಕು. ಮುಂಬೈ ಘಟನೆಯ ಹಿನ್ನೆಲೆಯಲ್ಲಿ ಭಯೋತ್ಪಾದನೆ ವಿರುದ್ಧದ ಹೋರಾಟದಲ್ಲಿ ಮಡಿದವರಿಗೆ ನಾವು ಶ್ರದ್ಧಾಂಜಲಿಯನ್ನು ಅರ್ಪಿಸಬೇಕಾಗಿದೆ. ನಾನೂ ಕೂಡ ಈ ಸಂತಾಪ ಸೂಚನಾ ನಿರ್ಣಯಕ್ಕೆ ಬೆಂಬಲಿಸಿ, ಅಗಲಿದ ಮಹಾನ್ ನಾಯಕರಿಗೆ ಮತ್ತು ಮುಂಬೈ ಘಟನೆ ಹಿನ್ನೆಲೆಯಲ್ಲಿ ಭಯೋತ್ಪಾದನೆ ವಿರುದ್ಧದ ಹೋರಾಟದಲ್ಲಿ ಸಾವನ್ನಪ್ಪಿದವರಿಗೆ ನಾನೂ ಕೂಡ ಶ್ರದ್ಧಾಂಜಲಿಯನ್ನು ಅರ್ಪಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್ [ಕನಕಪುರ] :- ಮಾನ್ಯ ಅಧ್ಯಕ್ಷರೆ, ತಾವು ಮತ್ತು ಮಾನ್ಯ ಮುಖ್ಯಮಂತ್ರಿಗಳು ಏನೊಂದು ಸಂತಾಪ ಸೂಚಕ ನಿರ್ಣಯವನ್ನೇನು

ಮಂಡಿಸಿದ್ದೀರಿ, ಅದಕ್ಕೆ ನಾನು ಸಂಪೂರ್ಣವಾಗಿ ಬೆಂಬಲವನ್ನು ವ್ಯಕ್ತಪಡಿಸಿ, ಕೆಲವು ಮಾತುಗಳನ್ನು ಆಡಲಿಕ್ಕೆ ಬಯಸುತ್ತೇನೆ. ಈ ದೇಶ ಮತ್ತು ನಮ್ಮ ರಾಜ್ಯ ಕಂಡಂತಹ 15 ಜನ ಗಣ್ಯ ಮಹಾನ್ ನಾಯಕರುಗಳ ಬಗ್ಗೆ ನಾವೆಲ್ಲಾ ಈಗ ಚಿಂತನೆಯನ್ನು ಮಾಡುತ್ತಿದ್ದೇವೆ. 'ಹುಟ್ಟು ಆಕಸ್ಮಿಕ, ಸಾವು ಅನಿವಾರ್ಯ', 'ಜನನ ಉಚಿತ, ಮರಣ ಖಚಿತ', ಈ ಹುಟ್ಟು ಸಾವಿನ ಮಧ್ಯದಲ್ಲಿ, ಯಾರು ಏನು ಮಾಡಿದ್ದಾರೆಂದು ಇವತ್ತು ನಾವು ಚರ್ಚೆಯನ್ನು ಮಾಡುತ್ತಿದ್ದೇವೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಥವಾ ರಾಜಕಾರಣದಲ್ಲಿ ಮಾನ್ಯ ವಿ.ಪಿ.ಸಿಂಗ್‌ರವರು ಬಹುಶ: ಸರಳತೆಗೆ ಮತ್ತೊಂದು ಹೆಸರಾಗಿದ್ದರು ಎಂದರೆ ತಪ್ಪಾಗಲಾರದು. ಪ್ರಧಾನ ಮಂತ್ರಿಗಳಂತಹ ಉನ್ನತ ಸ್ಥಾನಕ್ಕೆ ಏರಿದಂತಹ ವ್ಯಕ್ತಿ ಅವರಾಗಿದ್ದರು. ರಾಜ ಮನೆತನದ ಕುಟುಂಬದಲ್ಲಿ ಜನಿಸಿ, ಒಬ್ಬ ಸಾಮಾನ್ಯ ಪ್ರಾಮಾಣಿಕ ರಾಜಕಾರಣಿಯಾಗಿ ವಿ.ಪಿ.ಸಿಂಗ್ ನಡೆದುಕೊಂಡಿದ್ದರು. ಎಲ್ಲಾ ಮಾಧ್ಯಮ ಮಿತ್ರರು 'Mr.Clean' ಎಂಬ ಹೆಸರಿನಿಂದ ಅವರನ್ನು ಗುರುತಿಸಿದ್ದರು. ಬಹುಶ: ಅವರು ಅದೇ ರೀತಿಯಿಂದ ನಡೆದುಕೊಂಡರು. ಅದು ಬೇರೆ ವಿಚಾರ.

[ಈ ಹಂತದಲ್ಲಿ ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು]

ನಾನು ಹಿಂದೆ Urban Development Minister ಆಗಿದ್ದಾಗ ನಮ್ಮ officers ಜೊತೆಗೆ ಚರ್ಚೆ ಮಾಡುತ್ತಿದ್ದೆ. Urbanನಲ್ಲಿ ಶೇಕಡ 32-33ರಷ್ಟು population ಇದೆ. ಯಾವ್ಯಾವ ನಾಯಕರು urban movementನಿಂದ ಬಿಂಬಿತರಾಗಿದ್ದಾರೆಂದು ನಾನು ಯೋಚಿಸಿದೆ. ದಿವಂಗತ ಜವಾಹರ್‌ಲಾಲ್ ನೆಹರೂ ಅವರೂ ಕೂಡ ಮುನಿಸಿಪಾಲಿಟಿ election contest ಮಾಡಿದ್ದರು. ಅವರ ನಂತರ ವಿ.ಪಿ.ಸಿಂಗ್‌ರವರೂ ಕೂಡ ಅಲಹಾಬಾದ್ ಮುನಿಸಿಪಾಲಿಟಿ ಚುನಾವಣೆಯಲ್ಲಿ ಸ್ಪರ್ಧಿಸಿದ ದಾಖಲೆ ಇದೆ. ಒಬ್ಬ ರಾಜ ಮನೆತನದಿಂದ ಬಂದವರೂ ಕೂಡ, ಬೇರು ಮಟ್ಟದ ಸ್ಥಳೀಯ ಸಂಸ್ಥೆಗಳ ಚುನಾವಣೆ ಮುಖಾಂತರ ರಾಜಕಾರಣವನ್ನು ಪ್ರಾರಂಭ ಮಾಡಿ, ಇವತ್ತು ರಾಷ್ಟ್ರದ ಪ್ರಧಾನ ಮಂತ್ರಿಗಳಾಗುವ ಮಟ್ಟಕ್ಕೆ ಬೆಳೆದರು ಎಂದರೆ ಬಹುಶ: ಬೇರು ಕೆಳಗಡೆ ಚೆನ್ನಾಗಿರಲೇಬೇಕು. 'If you forget the root, you will not get the fruit' ಎನ್ನುವಂತೆ, 'ಬೇರು ಬೆಳೆದಿಲ್ಲ, ಬೇರು ಶಕ್ತಿಶಾಲಿಯಾಗಿಲ್ಲ ಎಂದರೆ ಒಳ್ಳೆಯ ಹಣ್ಣೂ ಸಿಗುವುದಿಲ್ಲ' ಎನ್ನುವುದಕ್ಕೆ ಇವೆಲ್ಲಾ ಉದಾಹರಣೆಗಳಾಗಿವೆ. ಕೆಲವು ರಾಜಕಾರಣಿಗಳು ಏಕ್‌ದಂ ನಾವು ಎಂ.ಎಲ್.ಎ. ಆಗಬೇಕು, ಎಂ.ಪಿ. ಎಲೆಕ್ಷನ್‌ಗೆ

ನಿಂತುಕೊಳ್ಳಬೇಕು, **Assembly**ಗೆ ಬರುವುದಕ್ಕೆ ಮುಂಚೆಯೇ ಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಬೇಕೆಂದು ಕನಸು ಕಾಣುತ್ತಿರುತ್ತಾರೆ. ಅಂತಹವರು ಇವರ ಆದರ್ಶ ಜೀವನವನ್ನು ನೋಡಬೇಕಾಗುತ್ತದೆಂದು ನಾನು ಭಾವಿಸಿಕೊಂಡಿದ್ದೇನೆ. ಇಂತಹ ಒಬ್ಬ ನಾಯಕರ ಬಗ್ಗೆ ಇವತ್ತು ಗೌರವ ಸಲ್ಲಿಸುವ ಸಂದರ್ಭದಲ್ಲಿ ನಾವೆಲ್ಲ ಪಾಲ್ಗೊಂಡಿದ್ದೇವೆ. **Mandal Commission** ವರದಿ ಅನುಷ್ಠಾನದ ವಿಚಾರದಲ್ಲಿ ಅವರು ತೋರಿಸಿದಂತಹ ಬದ್ಧತೆ, ರಾಜಕೀಯವಾದ ಅಚಲ ನಿರ್ಧಾರ ನಾವು ಮೆಚ್ಚಬೇಕಾಗಿದೆ. ತಮ್ಮ ಸರ್ಕಾರಕ್ಕೆ ಬೆಂಬಲ ಕೊಟ್ಟಂತಹ ಪಕ್ಷಗಳೂ ಸೇರಿದಂತೆ ವಿವಿಧ ಪಕ್ಷಗಳೂ ಇದರ ಅನುಷ್ಠಾನವನ್ನು ವಿರೋಧಿಸಿದ್ದರೂ ಕೂಡ, ಹಿಂದುಳಿದ ಜನಾಂಗಕ್ಕೆ ಈ ಸಂದರ್ಭದಲ್ಲಿ ಕೊಡುಗೆಯೊಂದನ್ನು ನಾನು ಕೊಡಲೇಬೇಕು, ನಾನು ಚಿಕ್ಕ ಅವಧಿಯಲ್ಲಿ ಅಧಿಕಾರದಲ್ಲಿದ್ದರೂ ಕೂಡ ಗುರುತರವಾದ ಕೆಲಸ ಮಾಡಬೇಕೆಂಬ ಧ್ಯೇಯದಿಂದ ಅವರು ಮಂಡಲ್ ವರದಿಯನ್ನು ಅನುಷ್ಠಾನಗೊಳಿಸಿದರು. ಅದನ್ನೇ ನಾನು ಹುಟ್ಟು ಮತ್ತು ಸಾವಿನ ಮಧ್ಯದಲ್ಲಿ ಯಾರು ಏನು ಮಾಡಿದ್ದಾರೆಂಬುದು ಬಹಳ ಮುಖ್ಯವೆಂದು ಆಗಲೇ ಹೇಳಿದ್ದೆ. ಇವತ್ತು **Mandal Commission** ಗೆ ಒಂದು ಶಕ್ತಿಯನ್ನು ಕೊಟ್ಟಂತಹ ಮಹಾನ್ ನಾಯಕರನ್ನು ಇವತ್ತು ನಾವು ಸ್ಮರಿಸಿಕೊಳ್ಳುತ್ತಿದ್ದೇವೆ. ಅವರ ಆತ್ಮಕ್ಕೆ ಕೂಡ ಈ ಸಂದರ್ಭದಲ್ಲಿ ಶಾಂತಿ ದೊರೆಯಬೇಕಾಗುತ್ತದೆ. ಅವರು ನಂಬಿಕೆಗೆ ಅರ್ಹರಾಗಿದ್ದರು. ರಾಜಕಾರಣದಲ್ಲಿ ನಂಬಿಕೆ ಬಹಳ ಮುಖ್ಯ. ನಾವು ಮತ್ತು ಮಾನ್ಯ ಜಯಚಂದ್ರರವರು ಚರ್ಚೆ ಮಾಡುತ್ತಿದ್ದೆವು. ಮಾನ್ಯ ವಿ.ಪಿ.ಸಿಂಗ್‌ರವರು ರಾಜೀವ್ ಗಾಂಧಿರವರ ಜೊತೆಯಲ್ಲಿ ಯಾವುದೋ ವಿಚಾರದ ಬಗ್ಗೆ ಚರ್ಚಿಸುವಾಗ, ಅವರಿಬ್ಬರ ನಡುವೆ ಭಿನ್ನವಾದಂತಹ ಅಭಿಪ್ರಾಯ ಬಂದಾಗ, ಯಾವುದೋ Airportವೊಂದರಲ್ಲಿ ಅವರ ಬೆರಳನ್ನೇ ಕೊಯ್ದುಕೊಂಡು, ರಕ್ತದಲ್ಲಿ ಏನಿದೆ ಎನ್ನುವುದನ್ನು ಅವರು ತೋರಿಸಿದರು ಎಂಬುದನ್ನು ಚರಿತ್ರೆಯಲ್ಲಿ ಮತ್ತು ಮಾಧ್ಯಮದಲ್ಲಿ ನಾವು ಓದಿದ್ದೇವೆ. ಹೀಗೆ ಅವರು ನಿಷ್ಠೆ, ಪ್ರಾಮಾಣಿಕತೆ ಮತ್ತು ನಂಬಿಕೆ ಹೆಸರಾಗಿದ್ದ ಮಹಾನ್ ವ್ಯಕ್ತಿಯಾಗಿದ್ದರು.

ಇದರ ಜೊತೆಗೆ ಬಹಳ ಜನ ನಾಯಕರಿದ್ದಾರೆ, ನಾವು ಬಹಳ ಶಾಸಕರು ಅವರ ಜೊತೆಯಲ್ಲಿ ಕೆಲಸವನ್ನು ಮಾಡಿದ್ದೇವೆ. ವಿಶೇಷವಾಗಿ ಸಿದ್ದರಾಜುರವರು, ಲಕ್ಷ್ಮಿಸಾಗರ್ ಅವರು, ನಂಜೇಗೌಡರು, ಮೀರಾಜುದ್ದೀನ್ ಪಟೇಲರು, ಇವರುಗಳ ಜೊತೆಯಲ್ಲಿ ನಾವೆಲ್ಲಾ ಶಾಸಕರಾಗಿದ್ದಾಗ ಅವರ ಜೊತೆಯಲ್ಲಿ ಕೆಲಸವನ್ನು ಮಾಡಿದ್ದೇವೆ. ಮೀರಾಜುದ್ದೀನ್ ಪಟೇಲರನ್ನು ಭೇಟಿ ಮಾಡಿದಾಗ ನಾವು ಗುರುಪಾದಪ್ಪನವರನ್ನು

ನೆನಪಿಸಿಕೊಳ್ಳುತ್ತಿದ್ದೆವು. ನಾನು ಇತ್ತೀಚೆಗೆ 3-4 ತಿಂಗಳ ಹಿಂದೆ ಅವರ ಕುಟುಂಬವನ್ನು ನೋಡಲು ಅವರ ಮನೆಗೆ ಭೇಟಿ ಕೊಟ್ಟೆ. ಬೆಂಗಳೂರಿನಲ್ಲಿ ಅವರ ಮನೆ ಇದೆ. ಆ ಮನೆಯಲ್ಲಿ ಯಾರೋ ಗೂಂಡಾಗಳು ಸೇರಿಕೊಂಡಿದ್ದಾರೆ, ಅವರಿಗೆ 5-6 ಜನ ಮಕ್ಕಳಿದ್ದಾರೆ, ಅವರದು ಬಹಳ ಕಷ್ಟವಾದ ಪರಿಸ್ಥಿತಿ. ಅವರು ಒಂದು ಸಕ್ಕರೆ ಕಾರ್ಖಾನೆಯನ್ನು ಮಾಡಬೇಕೆಂದು ಹೊರಟು, ಬಹುಶ: ದೊಡ್ಡ ಕನಸನ್ನು ಕಾಣುತ್ತಿದ್ದರು. ಇವತ್ತು ಕೂಡ ಆ ಸಕ್ಕರೆ ಕಾರ್ಖಾನೆಯನ್ನು ಪೂರ್ಣ ಮಾಡಿಲ್ಲ. ಇದಕ್ಕಾಗಿ ಡಿಸಿಸಿ ಬ್ಯಾಂಕ್‌ನಿಂದ ಸಾಕಷ್ಟು ಸಹಾಯಯನ್ನು ಮಾಡಿದ್ದಾರೆ. ಆದರೂ ಕೂಡ ಸರ್ಕಾರ ಈ ಬಗ್ಗೆ ಚಿಂತನೆಯನ್ನು ಮಾಡಬೇಕು, ಏಕೆಂದರೆ, ಅರ್ಧಕ್ಕೆ ನಿಂತಿರುವ ಸಕ್ಕರೆ ಕಾರ್ಖಾನೆಯನ್ನು ವಾಪಸ್ ಸರ್ಕಾರ ತೆಗೆದುಕೊಳ್ಳುವುದೋ ಇಲ್ಲವೇ ಅವರಿಗೇನಾದರೂ ಶಕ್ತಿಯನ್ನು ಕೊಡುವುದೋ ಅಥವಾ ಡಿಸಿಸಿ ಬ್ಯಾಂಕ್ ಮೂಲಕ ಆರ್ಥಿಕವಾಗಿ ಶಕ್ತಿಯನ್ನು ಕೊಟ್ಟು ಅದನ್ನು ಪ್ರಾರಂಭ ಮಾಡಿಸಿ. ಇನ್ನು ಅದರಿಂದ ಅವರು ಫಲವೇನು ಪಡೆಯಲಾಗಲಿಲ್ಲ, ಅವರ ಕುಟುಂಬಕ್ಕೆ ಸ್ವಲ್ಪ ಅನುಕೂಲ ವಾಗಬೇಕು. ಅದನ್ನು ಚಾಲು ಮಾಡುವುದರ ಮುಖಾಂತರ ಅವರ ಆತ್ಮಕ್ಕೆ ಶಾಂತಿಯನ್ನು ದೊರಕಿಸಿ. ಸರ್ಕಾರ, ಮುಖ್ಯಮಂತ್ರಿಗಳು , ಪೋಲಿಸ್ ಕಮೀಷನರ್ ಇದ್ದರೆ, ಅವರ ಮಕ್ಕಳು ವಿದ್ಯಾಭ್ಯಾಸಕ್ಕಾಗಿ ಪ್ರಯತ್ನವನ್ನು ಮಾಡುತ್ತಿದ್ದಾರೆ, ಡಾಲರ್ಸ್ ಕಾಲೋನಿಯಲ್ಲಿರುವ ಅವರ ಮನೆಯಲ್ಲಿ ಯಾರೊ ಗುಂಡಾಗಳು ಹೋಗಿ ಸೇರಿಕೊಂಡುಬಿಟ್ಟಿದ್ದಾರೆ. ಸರ್ಕಾರ ಜವಾವ್ದಾರಿಯನ್ನು ತೆಗೆದುಕೊಂಡು ಅವರನ್ನು ತೆರವುಗೊಳಿಸಬೇಕು. ನಾವು ಅವರಿಗೆ ಅವಕಾಶವಿದ್ದಾಗ, ಅಧಿಕಾರವಿದ್ದಾಗ ಇನ್ನು ಯಾವ ರೀತಿ ಸಹಾಯುವನ್ನು ಮಾಡಲಾಗುತ್ತದೆ? ದಯುವಿಟ್ಟು, ಏನಾದರೂ ಬೋಗಸ್ ಮಾಡಿಕೊಂಡಿರಲಿ ಅಲ್ಲಿ ಸೇರಿಕೊಂಡಿರುವವರನ್ನು ಹೊರಗೆ ಹಾಕಿಸಿ, ಅವರ ಕುಟುಂಬದವರನ್ನು ಅವರ ಮನೆಗೆ ಸೇರಿಸುವಂಥ ಕೆಲಸವನ್ನು ಮಾನ್ಯ ಮುಖ್ಯಮಂತ್ರಿಗಳು ಮಾಡಬೇಕು, ಒಂದು ದೊಡ್ಡ ಹೃದಯ ಶ್ರೀಮಂತಿಕೆಯನ್ನು ಮುಖ್ಯಮಂತ್ರಿಗಳು, ಗೃಹಮಂತ್ರಿಗಳು ತೋರಿಸಬೇಕೆಂಬ ಮನವಿಯನ್ನು ನಾನು ಮಾಡುತ್ತೇನೆ. ನಮಗೆ ನೋವಾಗುವಂಥ ಇನ್ನೊಂದು ಘಟನೆ ಏನೆಂದರೆ, ಕಾಂಗ್ರೆಸ್ ಪಕ್ಷದ ಕಾರ್ಯಾಧ್ಯಕ್ಷರಾಗಿವುದು ಬೇರೆ, ಅದು ಬೇರೆ, ಒಬ್ಬ ಮಾಜಿ ಶಾಸಕರ ಪತ್ನಿ ನನ್ನ ಹತ್ತಿರ ಬಂದು ಕಾಂಗ್ರೆಸ್ ಕಚೇರಿಯಲ್ಲಿ ನೌಕರಿ ಕೊಡಿ ಎಂದು ಕೇಳಿದರು. ನಮ್ಮ ಗಾಂಧಿನಗರ ಕ್ಷೇತ್ರ ಮಾಜಿ ಶಾಸಕರ ಪತ್ನಿ ಬಂದು ನನಗೆ ನೌಕರಿ ಕೊಡಿ ಎಂದು ಕೇಳಿದರು. ನಾನು, ಏನು ನೌಕರಿ ಬೇಕಮ್ಮ ಎಂದು ಕೇಳಿದೆ, ಅದಕ್ಕೆ ಅವರು, ಸರ್,

ನನಗೆ ಕಸಗುಡಿಸುವ ಕೆಲಸ ಕೊಡಿ ಎಂದು ಹೇಳಿದರು, ನನ್ನ ಮನಸ್ಸಿಗೆ ಬಹಳ ನೋವಾಯಿತು. ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಶ್ರೀ ವಾಟಾಳ್ ನಾಗರಾಜ್ ಅವರು ನನ್ನ ಪಕ್ಕದಲ್ಲಿದ್ದಾಗ ಬೇಕಾದಷ್ಟು ವಾದ ಮಾಡುತ್ತಿದ್ದರು. ಈಗ ನಾನು ಆರ್ಥಿಕವಾಗಿ ಶಕ್ತಿವಂತ ಶಾಸಕರಲ್ಲಿ ಒಬ್ಬನು, ಬಿಡಿ, ನಮಗೆಲ್ಲಾ ಏನು ಬೇಡ. ಆದರೆ ಕೆಲವು ಶಾಸಕರು ಪ್ರಜಾಪ್ರಭುತ್ವದಲ್ಲಿ ಸರ್ವೀಸ್ ಮಾಡಿಕೊಂಡು ಬಂದಿರುತ್ತಾರೆ, ಬಡತನದಿಂದ ಬಂದಿರುತ್ತಾರೆ, ಅವರ ಮಕ್ಕಳನ್ನು ನೋಡಿಕೊಳ್ಳುವುದಿಲ್ಲ, ಅಣ್ಣತಮ್ಮಂದಿರನ್ನು ನೋಡಿಕೊಳ್ಳುವುದಿಲ್ಲ, ಕುಟುಂಬ ನೋಡಿಕೊಳ್ಳುವುದಿಲ್ಲ. ಆರ್ಥಿಕವಾಗಿ ಅಧಿಕಾರವಿರುವವರೆಗೆ ಮಾತ್ರ ಅಷ್ಟೆ, ಅದಿಕಾರ ಹೋದ ಮೇಲೆ ಯಾರು ನಮ್ಮ ಜೊತೆಯಲ್ಲಿರುವುದಿಲ್ಲ, ಅದನ್ನು ನೀವು ನೋಡಿದ್ದೀರಿ, ನಾವು ನೋಡಿದ್ದೇವೆ. ಆದರೆ ಅವರ ಕುಟುಂಬದಲ್ಲಿರುವ ಬರಿ ಅವರ ಪತ್ನಿಯರಿಗೆ ಅನುಕೂಲ ಮಾಡುವಂತ ಕಾರ್ಯಕ್ರಮವನ್ನು ಸರ್ಕಾರ ರೂಪಿಸಬೇಕು. ಹಣವಿಲ್ಲ, ಕಾರ್ಯಕ್ರಮವನ್ನು ರೂಪಿಸಲು ಈ ಸರ್ಕಾರಕ್ಕೆ ಸಾಧ್ಯವಿಲ್ಲವೆಂದರೆ ಹೇಗೆ, ನಾವು ಎಷ್ಟು ಜನ ಶಾಸಕರಿದ್ದೇವೆ, ನಮ್ಮ ಜಯಚಂದ್ರರವರು ಹೇಳಿದಂತೆ, ಆಶ್ರಯ ಮನೆಯನ್ನು ತೆಗೆದುಕೊಂಡ ಎಷ್ಟೋ ಜನ ಶಾಸಕರಿದ್ದಾರೆ, ಅವರ ಕುಟುಂಬಗಳ ಪರಿಸ್ಥಿತಿ ಬಹಳ ಅಧೋಗತಿಯಲ್ಲಿದೆ, ಅವರನ್ನು ಕಾಪಾಡುವುದಕ್ಕೆ ಯಾವುದಾದರೊಂದು ಕಾರ್ಯಕ್ರಮವನ್ನು ರೂಪಿಸಲು ತಮ್ಮ ಅಧ್ಯಕ್ಷ ಪೀಠದಿಂದ ಒಂದು ಸಭೆಯನ್ನು ಕರೆದು, ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಇಲ್ಲಿ ಒಂದು ರೆಸಲೂಷನ್ ತೆಗೆದುಕೊಂಡು ಬನ್ನಿ, ನಾವೆಲ್ಲಾ ಅದಕ್ಕೆ ಸಹಾಯ ಮಾಡುವುದಕ್ಕೆ ಸಿದ್ದರಿದ್ದೇವೆ. ನೂರು ರೂಪಾಯಿಯಾದರು, ಐನೂರು ರೂಪಾಯಿಯಾದರು ಸಾವಿರ ರೂಪಾಯಿಗಳನ್ನಾದರು ತಿಂಗಳಿಗೆ ನಮ್ಮಿಂದ ಹಿಡಿದುಕೊಂಡು ಅಂಥ ಕುಟುಂಬಗಳಿಗೆ ನೆರವಾಗುವ ಕಾರ್ಯಕ್ರಮ ಒಂದನ್ನು ತಾವು ರೂಪಿಸಬೇಕು, ಈ ರೀತಿಯ ಶಾಶ್ವತವಾದ ಕೆಲಸ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಅವರು ಬಹಳ ನಿಷ್ಠೆ ಪ್ರಾಮಾಣಿಕತೆಯಿಂದ ಸರ್ವೀಸ್ ಅನ್ನು ಮಾಡಿದ್ದಾರೆಂದು ಅವರಿಗೆ ಯಾರು ಪೆನ್ಷನ್ ಕೊಡುತ್ತಾರೆಯೇ? ಅವರು ಸತ್ತರೆ ಅವರ ಕುಟುಂಬಕ್ಕೆ ಏನಾದರು ನೆರವು ಸಿಗುವಂತೆ ಮಾಡಬೇಕೆಂದು ಈ ಸಂದರ್ಭಲ್ಲಿ ನಾನು ಹೇಳುವುದಕ್ಕೆ ಬಯಸುತ್ತೇನೆ.

ಇನ್ನು ಮುಖಂಡರಾದ ದಿವಂಗತ ನಂಜೇಗೌಡರ ವಿಚಾರವನ್ನು ಪ್ರಸ್ತಾಪ ಮಾಡಿದರು. ನಮ್ಮ ಮುಖ್ಯಮಂತ್ರಿಗಳಿಗೆ ಅವರು ಬಹಳ ಆಪ್ತರು, ಅವರ ಜೊತೆಯಲ್ಲಿ ಒಂದೇ ಸ್ಥಾನದಲ್ಲಿ ಕುಳಿತುಕೊಂಡು, ಒಂದೇ ಪಕ್ಷದಲ್ಲಿ ಇದ್ದುದ್ದನ್ನು ನಾವು

ನೋಡಿದ್ದೇವೆ. ಬಹುಶ: ಸುರೇಶ್ ಕುಮಾರ್‌ರವರಿಗೆ ಗೊತ್ತಿದೆ, ಮುದ್ದಪ್ಪನವರ ವಿಷಯದಲ್ಲಿ ಅವರು ಸದನದಲ್ಲಿ ಮಾಡಿರುವ ಭಾಷಣ ಬಹಳ ಮುಖ್ಯವಾದುದು. ಅವರು ವಿಧಾನ ಸಭೆಯಲ್ಲಿ ಮಾಡಿದ 8-10 ಭಾಷಣಗಳನ್ನು ನಾನು ಮರೆಯಲು ಸಾದ್ಯವಿಲ್ಲ. ಅದರಲ್ಲೂ ನೀರಾವರಿಯ ವಿಚಾರ ಬಂದಾಗ ಅವರು ಗ್ರಂಥಾಲಯವಿದ್ದಂತೆ. ಮಾನ್ಯ ಮುಖ್ಯಮಂತ್ರಿಗಳು ಅವರ ಹೆಸರಿನಲ್ಲಿ ವಿಶ್ವವಿದ್ಯಾಲಯದಲ್ಲಿ ಪೀಠವನ್ನು ಸ್ಥಾಪನೆ ಮಾಡುವ ಮುಖಾಂತರ ಅವರ ನೆನಪನ್ನು ಯಾವ ರೀತಿ ಉಳಿಯುವಂತೆ ಮಾಡಲಾಗುವುದೆಂಬುದರ ಬಗ್ಗೆ ಚಿಂತನೆ ಮಾಡಬೇಕು. ಯಾವ ರೀತಿ ಅವರ ಹೆಸರು ಉಳಿಯುವ ರೀತಿಯಲ್ಲಿ ಕಾರ್ಯಕ್ರಮವನ್ನು ರೂಪಿಸಬೇಕೆಂಬುದನ್ನು ಯೋಚನೆ ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮತ್ತೆ ದಿವಂಗತ ಸಿದ್ದರಾಜು ಅವರು ಕೃಷಿಕರು ಮತ್ತು ಹೋರಾಟಗಾರರು. ಮದ್ದೂರಿನಲ್ಲಿ ಎಸ್.ಎಂ.ಕೃಷ್ಣ, ಮಾದೇಗೌಡ ಸೇರಿದಂತೆ ಕೇವಲ ಮೂವರ ರಾಜಕಾರಣಿಗಳ ಕಾರ್ಯಕ್ಷೇತ್ರವಾಗಿತ್ತು. ಸಿದ್ಧರಾಜುರವರು ಅವರು ಮಾಡಿದ ಹೋರಾಟ, ಸೇವೆಯ ನಿಮಿತ್ತ ಅವರ ಪತ್ನಿಯವರು ಚುನಾವಣೆಯಲ್ಲಿ ಗೆಲ್ಲಲು ಸಹಾಯವಾಯಿತು. ಅವರು ಎಂಎಲ್‌ಸಿ ಆಗಿದ್ದರು, ನಮ್ಮ ಪಕ್ಷದಲ್ಲಿದ್ದರು, ನಂತರ ಜನತಾದಳಕ್ಕೆ ಹೋದರು. ಅವರು ಸಾಮಾನ್ಯ ವ್ಯಕ್ತಿತ್ವವನ್ನು ಹೊಂದಿದ್ದ ವ್ಯಕ್ತಿಯಾಗಿದ್ದರು, ಅವರ ಆತ್ಮಕ್ಕೆ ಶಾಂತಿ ಸಿಗಲೆಂದು ಹಾರೈಸುತ್ತೇನೆ. ಇನ್ನು ಬಾಂಬೆ ಭಯೋತ್ಪಾದನೆ ಕೃತ್ಯದಲ್ಲಿ ಮರಣಹೊಂದಿದ ಎಲ್ಲರ ಆತ್ಮಕ್ಕೂ ಶಾಂತಿ ಕೋರಬಯಸುತ್ತೇನೆ. ಈ ಸಂದರ್ಭದಲ್ಲಿ ಒಂದು ಮಾತನ್ನು ನಾನು ಹೇಳಬಯಸುತ್ತೇನೆ, ಕೇಂದ್ರ ಸರ್ಕಾರದವರು ಎನ್‌ಎಸ್‌ಜಿ ಪಡೆಯನ್ನು ಬೆಂಗಳೂರಿನಲ್ಲಿ ಸ್ಥಾಪಿಸಲು ಅನುಮತಿ ಕೊಡಲಿಲ್ಲವೆಂದು ನಿರಾಸೆಯ ಮಾತುಗಳನ್ನು ಆಡುವುದು ಬೇಡವೆಂದು ಸರ್ಕಾರಕ್ಕೆ ತಿಳಿಸುತ್ತೇನೆ. ನಮ್ಮಲ್ಲಿ ಹೆಚ್‌ಎಎಲ್ ಇದೆ, ಸಿಆರ್‌ಎಫ್ ಇದೆ. ನಮ್ಮಲ್ಲೂ ಒಳ್ಳೆಯ ಪೋಲಿಸ್ ಅಧಿಕಾರಿಗಳಿದ್ದಾರೆ. ಸರ್ಕಾರ ಒಂದು ನಿರ್ಧಾರ ತೆಗೆದುಕೊಂಡು ಎನ್‌ಎಸ್‌ಜಿ ಯಂತಹ ಪಡೆಯನ್ನು ಭಯೋತ್ಪಾದನೆ ನಿಯಂತ್ರಣಕ್ಕೆ ರೂಪಿಸುವ ನಿಟ್ಟಿನಲ್ಲಿ ಕ್ರಮ ತೆಗೆದುಕೊಳ್ಳಬೇಕು. ಕೇಂದ್ರ ಸರ್ಕಾರ ಮಾಡಲಿಲ್ಲವೆಂದು ಹೇಳುವುದಕ್ಕಿಂತ ನಾವು ಈ ವಿಷಯದಲ್ಲಿ ಏನು ಮಾಡಿದ್ದೇವೆಂಬುದನ್ನು ತೋರಿಸಬೇಕಾಗಿದೆ. ನಮ್ಮಲ್ಲಿ ಸಂಪನ್ಮೂಲದ ಕೊರತೆ ಇಲ್ಲ. ನಮಗೆ ಅಷ್ಟು ದೊಡ್ಡ ಶಕ್ತಿ ಇದೆ, ಸಣ್ಣ ಸಣ್ಣ ರಾಜ್ಯಗಳೆಲ್ಲಾ, ದೊಡ್ಡ ದೊಡ್ಡ ದೇಶಗಳಾಗಿ ಪರಿವರ್ತನೆಯಾಗಿ ಬೆಳೆಯುತ್ತಿದ್ದಾವೆ. ಆ ರೀತಿ ಇರುವ ಸಂದರ್ಭದಲ್ಲಿ ನೀವೆ ಇದರ

ನಾಯಕತ್ವವನ್ನು ವಹಿಸಿ ಈ ಕೆಲಸವನ್ನು ಮಾಡಬೇಕೆಂದು ಒಂದು ಸಲಹೆಯನ್ನು ನಾನು ಕೊಡುತ್ತೇನೆ. ಇವತ್ತು ಈ ಒಂದು ವಿಷಯದಲ್ಲಿ ಇಡೀ ದೇಶ ತಲ್ಲಣಗೊಂಡಿದೆ, ಆದರೂ ಕೂಡ ನಾವು ಈ ಬಗ್ಗೆ ಹೋರಾಟವನ್ನು ಮಾಡಬೇಕಾಗುತ್ತದೆ, ಜಾಗ್ರತೆ ಮಾಡಬೇಕಾಗುತ್ತದೆ. ಜಾಗ್ರತೆ ಮಾಡುವುದೆಂದರೆ, ಇದರಿಂದ ಕೇಸರೀಕರಣ ಮಾಡುವುದಲ್ಲ, ಇದರಿಂದ ರಾಜಕಾರಣ ಮಾಡುವುದಲ್ಲ, ಅ ವಿಚಾರದ ಬಗ್ಗೆ ನಾನು ಬೇರೆ ಸಂದರ್ಭದಲ್ಲಿ ಮಾತನಾಡುತ್ತೇವೆ. ದೇಶದ ಐಕ್ಯತೆಗಾಗಿ ನಾವು ಅನೇಕ ನಾಯಕರುಗಳನ್ನು ಕಳೆದುಕೊಂಡಿದ್ದೇವೆ. ರಾಷ್ಟ್ರದ ನಾಯಕರುಗಳಾದ ಇಂದಿರಾಗಾಂಧಿ, ರಾಜೀವ್ ಗಾಂಧಿಯವರನ್ನು ಕಳೆದುಕೊಂಡಿದ್ದೇವೆ. ಅಂತರಾಷ್ಟ್ರೀಯ ಮಟ್ಟದಲ್ಲಿ ಅನೇಕ ನಾಯಕರುಗಳನ್ನು ಮತ್ತು ಸಾಮಾನ್ಯ ಜನರನ್ನು ನಾವು ಕಳೆದುಕೊಂಡಿದ್ದೇವೆ. ಇದನ್ನು ಕಾಪಾಡಬೇಕು, ಈ ದೇಶ ಒಂದು ಪುಣ್ಯಭೂಮಿ, ದರ್ಮಭೂಮಿ ಎಂದು ತೋರಿಸುವುದಕ್ಕೆ ನಾವು ಒಂದು ಕಾರ್ಯಕ್ರಮವನ್ನು ರೂಪಿಸಬೇಕು. ಯಾರ್ಯಾರು ಅಗಲಿದ್ದಾರೆ ಅವರ ಆತ್ಮಕ್ಕೆ ಶಾಂತಿ ಸಿಗಲೆಂದು ನನು ದೇವರಲ್ಲಿ ಪ್ರಾರ್ಥಿಸುತ್ತೇನೆ, ತಾವು ಮಂಡಿಸಿರುವ ಸಂತಾಪ ಸೂಚನೆ ಮಂಡಿಸಿದ್ದಕ್ಕೆ ತಮಗೆ ವಂದಿಸಿ, ಬೆಂಬಲವನ್ನು ವ್ಯಕ್ತಪಡಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ, ನಮಸ್ಕಾರ.

ಶ್ರೀ ಸಿ.ಎಸ್. ಪುಟ್ಟೇಗೌಡ :- ಅಧ್ಯಕ್ಷರೆ, ಜೆ.ಡಿ.ಎಸ್. ಪಕ್ಷ ನಿಮ್ಮ ಕಣ್ಣಿಗೆ ಕಾಣುವುದಿಲ್ಲ . ಇದೂ ಒಂದು ಪಾರ್ಟಿ ಎನ್ನುವ ಘನತೆ ಇಲ್ಲವಾ, ನಮಗೆ ಏನು ಘನತೆ ಇದೆ? ರೊಟ್ಟಿ ಊಟ ಕೊಡಿಸುವುದಕ್ಕಾಗಿ ನಮಗೆ ಕರೆದುಕೊಂಡು ಬಂದರಾ?400ಕಿ.ಮಿ. ದೂರದಿಂದ ಬರುವ ಅಗತ್ಯ ಏನಿತ್ತು? ಈ ಪಾರ್ಟಿ ಇದೆ ಎನ್ನುವ ಸತ್ಯಾಂಶ ಬೇಡವಾ ನಿಮಗೆ? ನಿಮ್ಮ ಬಳಿ ಬಿಕ್ಷೆ ಬೇಡಿ ಕೇಳಬೇಕಾ? ಮಕ್ಕಳು ಕೇಳಿದ ಹಾಗೆ ಕೇಳಬೇಕಾ? ನಮ್ಮದು ಜನತಾದಳ ಒಂದು ಪಕ್ಷ ಎನ್ನುವ ಭಾವನೆ ಬೇಡವಾ ನಿಮಗೆ. ನಾವು ಕಟ್ ಔಟ್ ನೋಡುವುದಕ್ಕೆ ಬಂದಿಲ್ಲ.

ಉಪಾಧ್ಯಕ್ಷರು :- ಪುಟ್ಟೇಗೌಡರೇ ಮಾತನಾಡಿ.

ಶ್ರೀ ಕೆ.ಎಂ.ಕೃಷ್ಣಮೂರ್ತಿ :- ಮಾನ್ಯ ಅಧ್ಯಕ್ಷರೆ, ನಾನು ದಿವಂಗತ ಶ್ರೀಕಂಠಯ್ಯನವರ ಬಗ್ಗೆ ಮಾತನಾಡಬೇಕಾಗಿದೆ. ನನಗೂ ಕಾಲಾವಕಾಶ ಬೇಕಾಗಿದೆ.

ಶ್ರೀ ಸಿ.ಎಸ್. ಪುಟ್ಟೇಗೌಡ :- ಊಟ ತಿಂಡಿ ಮಾಡುವುದಕ್ಕೆ ನಾವು ಬೆಳಗಾಂಗೆ ಬಂದಿದ್ದೇವಾ?

ಶ್ರೀ ಬಸವರಾಜ ಬೊಮ್ಮಾಯಿ :- ಯಾವ ವಿಷಯವನ್ನು ಎಲ್ಲಿಗೆ ತೆಗೆದುಕೊಂಡು ಹೋಗುತ್ತೀರಿ? ಮುದ್ದೆ ಸಾರು ತಿನ್ನುವುದಕ್ಕೆ ಇಲ್ಲಿಗೆ ಬರುತ್ತಾರಾ?

(ಗೊಂದಲ)

ಶ್ರೀ ಬಸವರಾಜ್ ಬೊಮ್ಮಾಯಿ :- ನಿಮಗೆ ಹಕ್ಕು ಇದೆ ನೀವು ಕೇಳಿ ತೊಂದರೆ ಇಲ್ಲ.ನಿಮ್ಮ ಪಕ್ಷಕ್ಕೆ ಹಕ್ಕು ಇದೆ ಕೇಳಿ. ಈ ಭಾಗದ ಜನರಿಗೆ ಮನಸ್ಸಿಗೆ ನೋವು ಉಂಟು ಮಾಡಿದ್ದಾರೆ.

(ಗೊಂದಲ)

(ಈ ಹಂತದಲ್ಲಿ ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಅಧ್ಯಕ್ಷರು :- ಸಂತಾಪ ಸೂಚಕ ಸಭೆ ಗಂಭೀರವಾಗಿ ನಡೆಯಬೇಕು. ಇಲಿ ಸಂತಾಪ ಸೂಚನಾ ಸಭೆ ನಡೆದಂತಹ ಸಂದರ್ಭದಲ್ಲಿ ಕೆಲವು ಸದಸ್ಯರು ನಾವು ಮಾತನಾಡುತ್ತೇವೆಂದು ರಿಕ್ವೆಸ್ಟ್ ಮಾಡುತ್ತಾರೆ.ಪ್ರಮುಖ ಲೀಡರ್ಸ್ ಯಾರು ಇರುತ್ತಾರೆ ಮುಖ್ಯ ಮಂತ್ರಿಗಳಿಗೆ ವಿರೋಧ ಪಕ್ಷದ ನಾಯಕರಿಗೆ ಹಾಗೂ ಸದನದ ನಾಯಕರಿಗೆ ನಾನು ಕರೆದು ಕೇಳುತ್ತೇನೆ, ಇಲ್ಲಿ ಯಾರಿಂದ ರಿಕ್ವೆಸ್ಟಿಂಗ್ ಲೆಟರ್ ಕಳುಹಿಸಿರುತ್ತಾರೆ ಅವರಿಗೆ ಕರೆಯುತ್ತಿದ್ದೇನೆ.ನಿಮ್ಮ ಕಡೆಯಿಂದ ರಿಕ್ವೆಸ್ಟಿಂಗ್ ಪತ್ರ ಬರಲಿಲ್ಲ.ನೀವು ಕೈ ಮೇಲೆ ಮಾಡಿ ಮಾತನಾಡುತ್ತೇನೆಂದು ಹೇಳಬಹುದಾಗಿತ್ತು. ನಿಮ್ಮಿಂದ ಯಾವುದೇ ಸೂಚನೆ ಬರಲಿಲ್ಲ.ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ. ಯಾರಿಗೂ ಅಡೆತಡೆ ಮಾಡುವ ಪ್ರಶ್ನೆ ಇಲ್ಲ.ಕೆಲವರಿಗೆ 10 ನಿಮಿಷ ತಡ ಇನ್ನು ಕೆಲವರಿಗೆ 20 ನಿಮಿಷ ತಡವಾಗಿ ಅವಕಾಶ ಸಿಗಬಹುದು. ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ. ಸ್ವಲ್ಪ ತಾಳ್ಮೆ ತೆಗೆದುಕೊಳ್ಳಿ, ಸಹಕಾರ ಕೊಡಿ. ನಿಮಗೂ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ.ದಯವಿಟ್ಟು ಕುಳಿತುಕೊಳ್ಳಿ.

ಮಾನ್ಯ ಸದಸ್ಯರು :- ನಾವು ಇಲ್ಲಿ ಉತ್ತರ ಕರ್ನಾಟಕದಲ್ಲಿ ಅಧಿವೇಶನ ನಡೆಸುತ್ತಿದ್ದೇವೆ.ನಾವು ರೊಟ್ಟಿ ತಿನ್ನುವುದಕ್ಕೆ ಬಂದಿದ್ದೇವಾ ಅದನ್ನು ತಿನ್ನುವುದಕ್ಕೆ ಬಂದಿದ್ದೇವಾ ಎಂದು ಹೇಳಿದರೆ ಹೇಗೆ? ಬೆಂಗಳೂರಿನಲ್ಲಿ ಅಧಿವೇಶನ ನಡೆಸಿದಾಗ ನಾವು ಮುದ್ದೆ ತಿನ್ನುವುದಕ್ಕೆ ಬರುತ್ತೇವಾ? ಮಾನ್ಯ ಅಧ್ಯಕ್ಷರೆ ಅವರ ಮಾತುಗಳನ್ನೆಲ್ಲಾ ಹಿಂದಕ್ಕೆ ತೆಗೆದುಕೊಳ್ಳಬೇಕು.

(ಗೊಂದಲ)

ಶ್ರೀ ಎಂ.ಪಿ. ರೇಣುಕಾಚಾರ್ಯ :- ಹಿರಿಯ ಸದಸ್ಯರು ದಬ್ಬಾಳಿಕೆ ಮಾಡಿ ಸದನಕ್ಕೆ ಅಗೌರವ ಸಲ್ಲಿಸುತ್ತಿದ್ದಾರೆ. ಇವರು ಈ ತರಹ ಮಾತನಾಡುವುದು ಸರಿಯಲ್ಲ.

ಮಾನ್ಯ ಸದಸ್ಯರು :- ಮಾನ್ಯ ಸದಸ್ಯರು ಈ ಮಾತುಗಳನ್ನು ವಾಪಸ್ ತೆಗೆದುಕೊಳ್ಳಬೇಕು.

ಶ್ರೀ ಎಂ.ಟಿ. ಕೃಷ್ಣಪ್ಪ :- ಊಟದ ವಿಷಯಕ್ಕೆಲ್ಲಾ ವಾಪಸ್ ತೆಗೆದುಕೊಳ್ಳುವುದು ಏನೂ ಇಲ್ಲ ಅಧ್ಯಕ್ಷರೆ.

(ಗೊಂದಲ)

ಶ್ರೀ ಎಂ.ಪಿ. ರೇಣುಕಾಚಾರ್ಯ :- ಬೆಳಗಾಂನಲ್ಲಿ ಅಧಿವೇಶನ ನಡೆಸುವುದಕ್ಕೆ ಅವರ ನಾಯಕರೆಲ್ಲಾ ಸಹಕಾರ ನೀಡುತ್ತಿಲ್ಲ.

ಶ್ರೀ ಟಿ.ಬಿ. ಜಯಚಂದ್ರ :- ಮಾನ್ಯ ಅಧ್ಯಕ್ಷರೆ, ಬಹುಶ: ವಿರೋಧ ಪಕ್ಷದ ನಾಯಕರೆಲ್ಲಾ ಇವತ್ತು ಬೇರೆ ಕಾರ್ಯಕ್ರಮಕ್ಕೆ ಹೋಗಿರುವುದರಿಂದ ಕಮ್ಯುನಿಕೇಶನ್ ಗ್ಯಾಪ್ ಆಗಿರಬಹುದು ಎಂದು ನಾನು ಭಾವಿಸುತ್ತೇನೆ. ಸಂತಾಪ ಸೂಚನೆ ಬಗ್ಗೆ ಮಾತನಾಡುವುದಕ್ಕೆ ಕಾಲಾವಕಾಶ ಇದೆ ಮಾತನಾಡಬಹುದು. ಆದರೆ ಮಾನ್ಯ ಪುಟ್ಟೇಗೌಡರು ಮಾತನಾಡಬೇಕಾದರೆ, ಅವರು ಫೆರೋಶಿಯಸ್ ಆಗಿ ಮಾತನಾಡುವವರು.ಮಾತನಾಡುವಾಗ ಅಲ್ಲಿ ಜೋಳದ ರೊಟ್ಟಿ ಇತ್ತು ತಿನ್ನುವುದಕ್ಕೆ ಹೋಗಿದ್ದೆ ಎಂದು ಹೇಳುತ್ತಾರೆ. ಜೋಳದ ರೊಟ್ಟಿಯನ್ನು ತಿಂದು ಎಲ್ಲರೂ ಸಂತೋಷ ಪಟ್ಟಿದ್ದಾರೆ. ಜೋಳದ ರೊಟ್ಟಿ ಎನ್ನುವುದು ಉತ್ತರ ಕರ್ನಾಟಕದ ಫುಡ್ ಅಲ್ಲ. ದಕ್ಷಿಣ ಕರ್ನಾಟಕದ ಫುಡ್ ಆಗಿದೆ. ಬೆಳಿಗ್ಗೆ ಎದ್ದರೆ ನಾವು ಊಟ ಮಾಡುವುದೇ ಜೋಳದ ರೊಟ್ಟಿ ಎಂದು ಹೇಳುತ್ತಾರೆ. ಊಟದ ಬಗ್ಗೆ ಎಲ್ಲೋ ಒಂದು ರೀತಿಯಲ್ಲಿ ಕೀಳು ಮಟ್ಟದಲ್ಲಿ ತೋರಿಸತಕ್ಕಂಥದ್ದು ಸರಿಯಾಗುವುದಿಲ್ಲ. ನೆನ್ನೆ ಮೊನ್ನೆ ಊಟ ಮಾಡಿದ ರೊಟ್ಟಿಯಿಂದ ಮಾನ್ಯ ಪುಟ್ಟೇಗೌಡರಿಗೂ ಸಂತೋಷವಾಗಿದೆ ಎಂದು ನಾನು ಭಾವಿಸಿದ್ದೇನೆ.ಈಗಾಗಲೇ ಮಾನ್ಯ ಸಭಾಧ್ಯಕ್ಷರು ಅಪ್ಪಣೆ ಕೊಟ್ಟಿದ್ದಾರೆ. ಅನ್ ಪಾರ್ಲಿಮೆಂಟರಿ ಎನ್ನುವುದಕ್ಕಿತ ಹೆಚ್ಚಾಗಿ ಊಟದ ವಿಷಯ ಬಂದಾಗ ನಾವು different taste ನಲ್ಲಿ ತೆಗೆದುಕೊಳ್ಳಬೇಕಾಗುತ್ತದೆ. ಇದು ಅನ್ ಪಾರ್ಲಿಮೆಂಟರಿ ಅಲ್ಲದೆ ಇರಬಹುದು, ಆದರೆ ಅದನ್ನು ಬೇರೆ ಟೇಸ್ಟ್ ನಲ್ಲಿ ನಾವು

ತೆಗೆದುಕೊಳ್ಳಬೇಕಾಗುತ್ತದೆ ಎನ್ನುವ ವಿಚಾರವನ್ನು ಹೇಳುತ್ತಿದ್ದೇನೆ. ದಯಮಾಡಿ ತಾವು ಮಾತನಾಡಿ ತಮ್ಮ ಮಾತನ್ನು ನಾವೆಲ್ಲರೂ ಕೇಳಬೇಕು. ಕಮ್ಯುನಿಕೇಷನ್ ಗ್ಯಾಪ್‌ನಿಂದ ಇಷ್ಟೊಂದು ದೊಡ್ಡ ವಿವಾದವನ್ನು ಮಾಡುವ ಅವಶ್ಯಕತೆ ಇಲ್ಲ.

ಶ್ರೀ ಸಿ.ಎಸ್. ಪುಟ್ಟೇಗೌಡ :- ನಮ್ಮ ಲೀಡರ್ ಇಲ್ಲ, ಮಾತನಾಡಬಾರದು, ನಾವು ಪತ್ರ ಕೊಟ್ಟಿಲ್ಲ ಮಾತನಾಡುವ ಹಾಗಿಲ್ಲವೆಂದು ಹೇಳಿದ್ದಾರೆ. ಇವತ್ತಿನ ಮಟ್ಟಿಗೆ ಬೇಡ ನಾವು ಮಾತನಾಡುವುದಿಲ್ಲ.

ಶ್ರೀ ಎಂ.ಟಿ. ಕೃಷ್ಣಪ್ಪ :- ಮಾನ್ಯ ಜಯಚಂದ್ರರವರೇ ದಯಮಾಡಿ ತಪ್ಪು ತಿಳಿದುಕೊಳ್ಳಬೇಡಿ. ಅವರ ಭಾವನೆ ಏನೆಂದರೆ, ಕಾನೂನು ಸಚಿವರ ಹೆಸರು ಹೇಳಿದರು. ನೀವು ಏಕೆ ತಪ್ಪು ತಿಳಿದುಕೊಳ್ಳುತ್ತೀರಿ?

ಶ್ರೀ ಸಿ.ಎಸ್. ಪುಟ್ಟೇಗೌಡ :- ನೀವು ಏನು ಮಾತನಾಡುತ್ತೀರೋ ಅದನ್ನು ಕೇಳಿಕೊಂಡು ಹೋಗುತ್ತೇವೆ. ಅದನ್ನು ನಾವು ಕೇಳಿಕೊಂಡು ಹೋಗುತ್ತೇವೆ.

ಅಧ್ಯಕ್ಷರು :- ಎಲ್ಲರಿಗೂ ಅವಕಾಶ ಕೊಡುತ್ತೇವೆ.ನೀವು ಹಾಗೆಲ್ಲಾ ತಿಳಿದುಕೊಳ್ಳಬೇಡಿ. ಮೊದಲು ನೀವೇ ಮಾತನಾಡಿ. ಮಾನ್ಯ ಬೆಲ್ಲದ್‌ರವರು ಆದ ಮೇಲೆ ನೀವೇ ಮಾತನಾಡಿ. ಬೆಲ್ಲದ್‌ರವರೇ ಮೊದಲು ನೀವು ಮಾತನಾಡಿ ನಂತರ ಪುಟ್ಟೇಗೌಡರು ಮಾತನಾಡುತ್ತಾರೆ. ಇನ್ನೂ 8 ರಿಂದ 10 ಜನ ಶಾಸಕರು ಮಾತನಾಡುವವರಿದ್ದಾರೆ ಎಲ್ಲರಿಗೂ ಅವಕಾಶ ಕೊಡುತ್ತೇನೆ. ಎಲ್ಲರೂ ಒಂದೇ ಸಾರಿ ಮಾತನಾಡಬೇಕೆಂದರೆ ಆಗುತ್ತದಾ ಹೇಳಿ.

ಶ್ರೀ ಚಂದ್ರಕಾಂತ್ ಬೆಲ್ಲದ್ (ಹುಬ್ಬಳ್ಳಿ ಧಾರವಾಡ ಪಶ್ಚಿಮ) :- ಮಾನ್ಯ ಸಭಾಧ್ಯಕ್ಷರೆ, ತಾವು ತಂದಿರತಕ್ಕಂತಹ ಸಂತಾಪಸೂಚಕ ನಿರ್ಣಯಕ್ಕೆ ಬೆಂಬಲವನ್ನು ಸೂಚಿಸುತ್ತಾ, ಮಾನ್ಯ ವಿ.ಪಿ. ಸಿಂಗ್‌ರವರ ಬಗ್ಗೆ ನಾನು ನಾಲ್ಕು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ವಿಶ್ವನಾಥಪ್ರತಾಪ್ ಸಿಂಗ್‌ರವರು, ಈ ರಾಷ್ಟ್ರ ಕಂಡ ಕೆಲವೇ ಕೆಲವು ಧೀಮಂತ ರಾಷ್ಟ್ರದ ರಾಜಕಾರಣಿಗಳಲ್ಲಿ ಕೂಡ ಒಬ್ಬರಾಗಿದ್ದಾರೆ. ಇವರು ಒಂದು ಅರಸು ಮನೆತನದಿಂದ ಬಂದಿದ್ದರೂ ಕೂಡ ಸಕ್ರಿಯವಾಗಿ ರಾಜಕಾರಣದಲ್ಲಿ ಭಾಗವಹಿಸಿ ಸಾಮಾನ್ಯ ಜನರ ಕಷ್ಟಸುಖಗಳನ್ನು ತಿಳಿದುಕೊಂಡು ರಾಜ್ಯದ ಮತ್ತು ರಾಷ್ಟ್ರದ ರಾಜಕಾರಣದಲ್ಲಿ ತಮ್ಮದೇ ಆದಂಥ ಪವಿತ್ರವಾದಂಥ ಕರ್ತವ್ಯಗಳನ್ನು ಮಾಡಿದಂಥ

ರಾಜಕಾರಣಿಗಳಲ್ಲಿ ವಿಶ್ವನಾಥ ಪ್ರತಾಪ್‌ಸಿಂಗ್‌ರವರು ಪ್ರಮುಖರು. ಇವರು ಹಣಕಾಸಿನ ಸಚಿವರಾಗಿದ್ದಾಗ ಈ ರಾಷ್ಟ್ರದ ಯಾವ ಭ್ರಷ್ಟಾಚಾರದಲ್ಲಿಏನು ಅವರು ರಾಜೀನಾಮೆ ಕೊಡುವಂಥ ಪ್ರಸಂಗ ಬಂತು ಎನ್ನುವುದನ್ನು ಇಡೀ ರಾಜ್ಯದ ರಾಷ್ಟ್ರದ ಜನತೆ ಕಂಡಂಥ ಪ್ರಸಂಗವಾಗಿದೆ. ಅಂದರೆ ಅವರು ಒಬ್ಬ ಹಸ್ತಶುದ್ಧ ಇರುವಂಥ ರಾಜಕಾರಣಿಗಳಾಗಿ ಈ ರಾಷ್ಟ್ರದ ಎಲ್ಲ ರಾಜಕಾರಣಿಗಳಿಗೆ ಮಾದರಿಯಾದಂಥ ಒಂದು ವ್ಯಕ್ತಿತ್ವವನ್ನು ಪ್ರದರ್ಶನ ಮಾಡಿದ್ದಾರೆ. ಅವರು ರಾಷ್ಟ್ರಕ್ಕೆ ಒಬ್ಬ ಧೀಮಂತ, ಪ್ರಾಮಾಣಿಕ, ಸ್ವಚ್ಛ ರಾಜಕಾರಣವನ್ನು ತರುವುದಕ್ಕೆ ಪ್ರಯತ್ನ ಮಾಡಿದಂಥ ರಾಜಕಾರಣಿಗಳಲ್ಲಿ ಒಬ್ಬರು. ಅವರು ಈ ರಾಜ್ಯದ, ರಾಷ್ಟ್ರದ ಎಲ್ಲ ಜನರ ರಾಜಕಾರಣಿಗಳಿಗೆ ಮಾದರಿಯಾದಂಥ ವ್ಯಕ್ತಿ. ಅವರು ಕಷ್ಟದಲ್ಲಿರುವಂಥ ಜನರ ಸಂಕಷ್ಟವನ್ನು ಮತ್ತು ತುಳಿತಕ್ಕೆ ಒಳಗಾದಂಥ ಜನರ ಕಷ್ಟವನ್ನು ಅರಿತುಕೊಂಡು ಮಂಡಲ್ ವರದಿಯನ್ನು ತರುವುದಕ್ಕೆ ಕೂಡ ಪ್ರಯತ್ನ ಮಾಡಿ ಅದರ ಬಗ್ಗೆ ತಮ್ಮದೇ ಆದಂಥ ಒಂದು ಕಾರ್ಯವನ್ನು ಈ ರಾಷ್ಟ್ರದಲ್ಲಿ ಮಾಡಿದಂಥ ಒಬ್ಬ ಧೀಮಂತ ರಾಜಕಾರಣಿ. ಅದೂ ಅಲ್ಲದೇ ಅವರು ಪ್ರಧಾನ ಮಂತ್ರಿಗಳಾಗಿ ಎಷ್ಟು ದಿವಸ ಇದ್ದರು ಎನ್ನುವುದು ಮುಖ್ಯವಲ್ಲ. ಒಬ್ಬ ವ್ಯಕ್ತಿ ಆ ಸ್ಥಾನದಲ್ಲಿ ಎಷ್ಟು ದಿವಸ ಇದ್ದರು ಎನ್ನುವುದು ಮುಖ್ಯವಲ್ಲ. ಅವರು ಇದ್ದಂಥ ಕಾಲದಲ್ಲಿ ಈ ರಾಷ್ಟ್ರಕ್ಕೆ ಏನು ಕೊಡುಗೆಯನ್ನು ಕೊಟ್ಟಿದ್ದಾರೆ ಎನ್ನುವುದು ಬಹಳ ಮುಖ್ಯವಾಗುತ್ತದೆ. ಅಂಥ ಉತ್ತಮ ಕಾರ್ಯವನ್ನು ಪ್ರಧಾನಮಂತ್ರಿಗಳಾಗಿ ಅವರು ಮಾಡಿದ್ದಾರೆ. ಅವರು ಮಂಡಲ್ ಆಯೋಗದ ವರದಿಯನ್ನು ಜಾರಿಗೆ ತರುವಲ್ಲಿ ಮತ್ತು ಈ ರಾಷ್ಟ್ರದಲ್ಲಿ ಉತ್ತಮ ಆಡಳಿತವನ್ನು ತರುವಂಥದ್ದರಲ್ಲಿ ಪ್ರಾಮಾಣಿಕ ರಾಜಕಾರಣಿಯಾಗಿ ನಮ್ಮೆಲ್ಲರಿಗೆ ಮತ್ತು ಈ ರಾಷ್ಟ್ರದ ರಾಜಕಾರಣಿಗಳಿಗೆ ಮಾದರಿಯಾದಂಥ ವ್ಯಕ್ತಿಯಾಗಿದ್ದರು. ಅಂಥ ಒಬ್ಬ ಉತ್ತಮ ವ್ಯಕ್ತಿಯ ನಿಧನದಿಂದ ನಮ್ಮ ರಾಷ್ಟ್ರ ಒಬ್ಬ ಉತ್ತಮ ವ್ಯಕ್ತಿತ್ವ ಹೊಂದಿದಂಥ ರಾಜಕಾರಣಿಯನ್ನು ಕಳೆದುಕೊಂಡಿದೆ ಎಂದು ಹೇಳ ಬಯಸುತ್ತೇನೆ. ಇನ್ನು ಪ್ರೊ. ಲಕ್ಷ್ಮೀಸಾಗರ್‌ರವರೂ ಕೂಡ ಇಂದು ನಮ್ಮನಗಲಿದ್ದಾರೆ. ಅವರ ಜೊತೆಗೆ ಕೂಡ ಈ ರಾಜ್ಯದಲ್ಲಿ ವಿಧಾನಸಭೆಗೆ ನಾನು ಶಾಸಕನಾಗಿ ಬಂದು ಅವರನ್ನು ಹತ್ತಿರದಲ್ಲಿ ಕಂಡಿದ್ದೇನೆ. ಅವರೂ ಕೂಡ ಒಬ್ಬ ಉತ್ತಮ ರಾಜಕಾರಣಿ ಎನ್ನುವುದಕ್ಕಿಂತಲೂ ಒಬ್ಬ ಸಮಾಜ ಚಿಂತಕರಾಗಿದ್ದರು. ಕೆಳಗೆ ಬಿದ್ದಂಥ ಜನರಿಗೆ ಮತ್ತು ಕಷ್ಟದಲ್ಲಿರುವಂಥ ಜನರಿಗೆ ಯಾವ ರೀತಿಯಲ್ಲಿ ಅವರಿಗೆ ನ್ಯಾಯವನ್ನು ಒದಗಿಸಬೇಕು ಎನ್ನುವುದರ ಬಗ್ಗೆ ಚಿಂತನೆಯನ್ನು ಮಾಡುವಂಥ ಒಬ್ಬ ರಾಜಕಾರಣಿಯಾಗಿ ಸತತವಾಗಿ ನ್ಯಾಯದ ಜೊತೆಗೆ ಇದ್ದು ಅವರು ತಮ್ಮ ಸೇವೆಯನ್ನು

ಮಾಡಿದ್ದಾರೆ. ಅವರು ಸಚಿವ ಸ್ಥಾನವನ್ನು ಪಡೆದು ಈ ರಾಜ್ಯದಲ್ಲಿ ಉತ್ತಮವಾದಂಥ ಪಾರದರ್ಶಕವಾದ ಆಡಳಿತವನ್ನು ತರುವುದಕ್ಕೆ ಪ್ರಯತ್ನ ಮಾಡಿದ್ದಾರೆ ಮತ್ತು ಅವರು ಸಚಿವರಾಗಿದ್ದಂಥ ಇಲಾಖೆಗಳಿಗೆ ತಮ್ಮದೇ ಆದಂಥ ಮಾರ್ಗದರ್ಶನವನ್ನು ಮಾಡಿದಂಥ ಒಬ್ಬ ಪ್ರಾಮಾಣಿಕ ರಾಜಕಾರಣಿಯಾಗಿದ್ದರು. ಹಿಂದುಳಿದ ವರ್ಗದವರ ಬಗ್ಗ ಸತತವಾಗಿ ಚಿಂತನೆಯನ್ನು ಮಾಡುತ್ತಿದ್ದಂಥ ರಾಜಕಾರಣಿಗಳಾಗಿದ್ದರು. ಅವರ ನಿಧನದಿಂದ ನಮ್ಮ ರಾಜ್ಯ ಒಬ್ಬ ಉತ್ತಮವಾದ ಆಡಳಿತಗಾರ ಮತ್ತು ಚಿಂತಕ ಮತ್ತು ಸಮಾಜದ ಬಗ್ಗೆ ಕಳಕಳಿ ಇದ್ದಂಥವರನ್ನು ಕಳೆದುಕೊಂಡಂತಾಗಿದೆ. ಇನ್ನು ಮಾನ್ಯ ವಿಶ್ವನಾಥರೆಡ್ಡಿ ಮುದ್ನಾಳ್‌ರವರನ್ನು ಕೂಡ ನಾವು ಕಳೆದುಕೊಂಡಿದ್ದೇವೆ. ಇವರು ಬಹಳ ದೊಡ್ಡ ಮನೆತನದಿಂದ ಬಂದಂಥವರಾಗಿದ್ದರು. ಇವರು ಯಾದ್‌ಗಿರ್‌ನಲ್ಲಿ ಒಂದು ರೈತ ಕುಟುಂಬ, ವ್ಯಾಪಾರದ ಕುಟುಂಬದಿಂದ ಬಂದಂಥವರು. ಪ್ರಾಮಾಣಿಕವಾದಂಥ ಸರಳ ವ್ಯಕ್ತಿಯಾಗಿದ್ದರು. ಅವರು ತಮ್ಮ ಜೀವನದುದ್ದಕ್ಕೂ ಸ್ವಾತಂತ್ರ್ಯಯೋಧರಾಗಿ ಮತ್ತು ಸುಭಾಷ್‌ಚಂದ್ರ ಭೋಸ್‌ರವರ ಆದರ್ಶವನ್ನು ತಮ್ಮ ಜೀವನದಲ್ಲಿಟ್ಟುಕೊಂಡು ಯುವಕರಿಗೆ ಸುಭಾಷ್‌ಚಂದ್ರ ಬೋಸ್‌ರ ಯಾವ ವಿಚಾರಗಳಿದ್ದವು ಅದನ್ನು ಮಾರ್ಗದರ್ಶನ ಮಾಡುವುದರಲ್ಲಿ ಸತತವಾಗಿ ಪ್ರಯತ್ನಗಳನ್ನು ಮಾಡಿದವರಾಗಿದ್ದರು. ಅವರು ಬಸವ ಸಮಿತಿಯಿಂದ ಬಸಣ್ಣನವರ ಕಾರ್ಯವನ್ನು ಈ ರಾಜ್ಯದಲ್ಲಿ ಬಸವ ಸಮಿತಿಗೆ ಬಿ.ಡಿ. ಜತ್ತಿಯವರು ಕರ್ನಾಟಕದಲ್ಲಿ ಅಧ್ಯಕ್ಷರಾಗಿದ್ದಾಗ ಆ ಬಸವ ಸಮಿತಿಯಲ್ಲಿ ಮಾನ್ಯ ರೆಡ್ಡಿಯವರು ಕಾರ್ಯಾಧ್ಯಕ್ಷರಾಗಿ ಕೆಲಸವನ್ನು ಮಾಡಿದ್ದಾರೆ. ಇಡೀ ರಾಜ್ಯದ ಉದ್ದಗಲಕ್ಕೂ ಕೂಡ ಬಸವ ತತ್ವವನ್ನು ಪಸರಿಸುವುದಕ್ಕೆ ಅವರು ಪ್ರಯತ್ನವನ್ನು ಮಾಡಿದ್ದಾರೆ. ಅದೂ ಅಲ್ಲದೇ ಅಖಿಲ ಭಾರತ ವೀರಶೈವ ಸಭೆಯಲ್ಲಿಯೂ ಕೂಡ ದೀರ್ಘ ಕಾಲ ಅವರು ಕೆಲಸವನ್ನು ಮಾಡಿದ್ದಾರೆ. 1980 ರಲ್ಲಿ ಅಖಿಲ ಭಾರತ ವೀರಶೈವ ಸಭಾದ ಅಧ್ಯಕ್ಷರಾಗಿ ಮಾನ್ಯ ಮಲ್ಲಾರಾಧ್ಯರವರು ಕೆಲಸವನ್ನು ಮಾಡುತ್ತಿದ್ದರು. ಅಂದಿನಿಂದಲೂ ಕೂಡ ನಾನು ಅವರ ಜೊತೆಯಲ್ಲಿ ಅಖಿಲ ಭಾರತ ವೀರಶೈವ ಸಭಾದಲ್ಲಿ ಕೆಲಸವನ್ನು ಮಾಡುತ್ತಾ ಬಂದಿದ್ದೇನೆ. ಈ ಸಮಾಜ ಎಂಬುದು ಒಂದು ಜಾತಿಗೆ ಮಾತ್ರ ಸಂಬಂಧಿಸಿದ್ದಲ್ಲ. ಇಡೀ ಮನುಕುಲದಲ್ಲಿ ಎಲ್ಲರನ್ನೂ ಪ್ರೀತಿ ಮಾಡುವಂಥ ಈ ಲಿಂಗಾಯತ ಅಖಿಲ ಭಾರತ ವೀರಶೈವ ಸಭಾ ಈ ದೇಶದ ವಿಚಾರವಾಗಿ ತನ್ನದೇ ಆದಂಥ ಕಾರ್ಯವನ್ನು ಮಾಡಲು ಹಿಂದಿನ ಎಲ್ಲ ಅಧ್ಯಕ್ಷರುಗಳೂ ಪ್ರಯತ್ನವನ್ನು ಮಾಡುತ್ತಾ ಬಂದಿರುತ್ತಾರೆ. 1800 ರಲ್ಲಿ ಪ್ರಾರಂಭ ಮಾಡಿದಂಥ ಅಖಿಲ ಭಾರತ ವೀರಶೈವ ಮಹಾಸಭೆ ಈ ಒಂದು ಕೆ.ಎಲ್.ಇ.

ಸಂಸ್ಥೆಯನ್ನು ಹುಟ್ಟು ಹಾಕುವುದಕ್ಕೆ ಅಖಿಲ ಭಾರತ ವೀರಶೈವ ಸಭೆಯ ಹಿರಿಯರೇ ಮುಖ್ಯ ಕಾರಣರಾಗಿದ್ದಾರೆ. ಇದುವರೆಗೆ ಬಾಗಲಕೋಟೆಯಲ್ಲಿದ್ದಂಥ ಬಸವೇಶ್ವರ ವಿದ್ಯಾವರ್ಧಕ ವಿದ್ಯಾ ಸಂಸ್ಥೆಯನ್ನು ಕೂಡ ಹುಟ್ಟು ಹಾಕುವುದಕ್ಕೆ ಅಖಿಲ ಭಾರತ ವೀರಶೈವ ಸಭೆಯೇ ಕಾರಣ. 1904ರಲ್ಲಿ ವೀರಶೈವ ಮಹಾಸಭೆ ಈ ರಾಜ್ಯದಲ್ಲಿ, ಈ ರಾಷ್ಟ್ರದಲ್ಲಿ ಪ್ರಾರಂಭವಾಗಿ ಇಡೀ ಕರ್ನಾಟಕದಲ್ಲಿ ವೀರಶೈವ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭ ಮಾಡುವುದಕ್ಕೆ ಅಖಿಲ ಭಾರತ ವೀರಶೈವ ಮಹಾಸಭೆಯೇ ಕಾರಣ. ಸಮಾಜದಲ್ಲಿರತಕ್ಕಂಥ ಎಲ್ಲ ವರ್ಗದ ಜನರಿಗೆ ಶಿಕ್ಷಣ ಕೊಡುವಂಥ ಕಾರ್ಯವನ್ನು ಮಾಡಿದ್ದು ಅಖಿಲ ಭಾರತ ವೀರಶೈವ ಮಹಾಸಭೆ. ಅಂಥ ಮಹಾಸಭೆಯ ಉಪಾಧ್ಯಕ್ಷರಾಗಿ ಕೂಡ ಮಾನ್ಯ ವಿಶ್ವನಾಥರೆಡ್ಡಿ ಮುದ್ನಾಳ್‌ರವರು ಕೆಲಸವನ್ನು ಮಾಡಿದ್ದಾರೆ. ಇವೊತ್ತಿನ ದಿವಸ ಕರ್ನಾಟಕದಲ್ಲಿ ಇಷ್ಟೊಂದು ವೀರಶೈವ ಶಿಕ್ಷಣ ಸಂಸ್ಥೆಗಳು ಬಂದಿರುವೆಯೋ, ಮಠಾದೀಶರುಗಳ ಶಿಕ್ಷಣ ಸಂಸ್ಥೆಗಳು ಬಂದಿವೆಯೋ, ಇಡೀ ರಾಷ್ಟ್ರದಲ್ಲಿ ಎಲ್ಲಿಯೂ ಕಾಣದಷ್ಟು ಶಿಕ್ಷಣ ಸಂಸ್ಥೆಗಳು ಕರ್ನಾಟಕದಲ್ಲಿ ಬಂದಿರುವುದಕ್ಕೆ ಅಖಿಲ ಭಾರತ ವೀರಶೈವ ಮಹಾಸಭೆಯೇ ಕಾರಣ. ಅದು ಕೇವಲ ವೀರಶೈವರಿಗಷ್ಟೇ ಅಲ್ಲ, ಸಮಾಜದಲ್ಲಿರತಕ್ಕಂಥ ಎಲ್ಲ ವರ್ಗದ ಜನರಿಗೆ ಅಕ್ಷರಸ್ಥರನ್ನಾಗಿ ಮಾಡಿದ್ದು ಈ ಒಂದು ಅಖಿಲ ಭಾರತ ವೀರಶೈವ ಮಹಾಸಭೆ. ಇಂಥ ಅಖಿಲ ಭಾರತ ವೀರಶೈವ ಮಹಾಸಭೆಯ ಉಪಾಧ್ಯಕ್ಷರಾಗಿ ಪ್ರಾಮಾಣಿಕವಾಗಿ ಕೆಲಸ ಮಾಡಿದಂಥ ಮಾನ್ಯ ರೆಡ್ಡಿಯವರು ನಮ್ಮನ್ನಗಲಿದ್ದಾರೆ. ಅವರ ನಿಧನದಿಂದ ಒಬ್ಬ ಆದರ್ಶ ವ್ಯಕ್ತಿಯನ್ನು ನಮ್ಮ ರಾಜ್ಯ ಕಳೆದುಕೊಂಡಂತಾಗಿದೆ. ಇನ್ನು ಮಾನ್ಯ ನಂಜೇಗೌಡರನ್ನೂ ಕೂಡ ನಾವು ಕಳೆದುಕೊಂಡಿದ್ದೇವೆ. ಅವರ ಬಗ್ಗೆ ಈಗಾಗಲೇ ಹಲವಾರು ಸದಸ್ಯರುಗಳು ಮಾತನಾಡುತ್ತಾ ಹೇಳಿದ್ದಾರೆ. ನಂಜೇಗೌಡರು ನೀರಾವರಿ ಸಚಿವರಾಗಿದ್ದರು. ಮಾನ್ಯ ಚನ್ನಬಸಪ್ಪನವರು ಪಿ.ಡಬ್ಲ್ಯೂ.ಡಿ., ನೀರಾವರಿ ಸಚಿವರಾಗಿದ್ದರು. ಇಡೀ ರಾಜ್ಯದಲ್ಲಿ ಮಾದರಿಯ ಲೋಕೋಪಯೋಗಿ ಮತ್ತು ನೀರಾವರಿ ತಜ್ಞರು ಎಂದರೆ ಚನ್ನಬಸಪ್ಪನವರು ಎಂದು ಕರ್ನಾಟಕ ರಾಜ್ಯದಲ್ಲಿ ಹೇಳಲಾಗುತ್ತಿತ್ತು. ಅಂಥ ಚನ್ನಬಸಪ್ಪನವರ ಗರಡಿಯಲ್ಲಿ ತಯಾರಾದಂಥ ಮಾನ್ಯ ನಂಜೇಗೌಡರು ಕೃಷ್ಣ ಮತ್ತು ಕಾವೇರಿ ನದಿ ವಿಚಾರದಲ್ಲಿ ಮತ್ತು ನೀರಾವರಿ ವಿಷಯದಲ್ಲಿ ಬಹಳ ದೊಡ್ಡ ತಜ್ಞರಾಗಿದ್ದರು. ಅವರು ಎಲ್ಲ ಸರ್ಕಾರಗಳಿಗೂ ಕೂಡ ನೀರಾವರಿ ವಿಚಾರದಲ್ಲಿ ತಮ್ಮದೇ ಆದಂಥ ಮಾರ್ಗದರ್ಶನವನ್ನು ಮಾಡಿ ಈ ರಾಜ್ಯದ ಅಭಿವೃದ್ಧಿಗೆ ತಮ್ಮದೇ ಆದಂಥ ಕೊಡುಗೆಯನ್ನು ಕೊಟ್ಟಿದ್ದಾರೆ.

ಇಂಥ ಪ್ರಾಮಾಣಿಕ ವ್ಯಕ್ತಿಯನ್ನೂ ಕೂಡ ನಾವು ಇವೊತ್ತಿನ ದಿವಸ ಕಳೆದುಕೊಂಡಿದ್ದೇವೆ. ಇವರ ಅಗಲಿಕೆಯಿಂದ ಕರ್ನಾಟಕ ರಾಜ್ಯ ಒಬ್ಬ ದಕ್ಷ ನೀರಾವರಿ ತಜ್ಞರನ್ನು ಕಳೆದುಕೊಂಡಂತಾಗಿದೆ. ಇನ್ನು ಡಿ.ಸಿ. ಶ್ರೀಕಂಠಪ್ಪನವರನ್ನೂ ಕೂಡ ನಾವು ಇಂದು ಕಳೆದುಕೊಂಡಿದ್ದೇವೆ. ಇವರನ್ನು ನಾವು ಕೇವಲ ರಾಜಕಾರಣಿ ಎನ್ನುವುದಕ್ಕಿಂತ ಒಬ್ಬ ಸಮಾಜ ಚಿಂತಕ ಎಂದು ಹೇಳಬೇಕಾಗುತ್ತದೆ. ಸಮಾಜ ಚಿಂತಕರಾಗಿ ಮಲೆನಾಡಿನಲ್ಲಿರುವಂಥ ಪ್ರದೇಶದಲ್ಲಿ ಪ್ರತಿಯೊಂದು ಹಳ್ಳಿ ಹಳ್ಳಿಗೂ ಕೂಡ ಹೋಗಿ ಅಲ್ಲಿ ಅಡ್ಡಾಡಿ ಕೆಲಸವನ್ನು ಮಾಡಿ ಮೂರು ಬಾರಿ ಅವರು ಲೋಕಸಭೆಗೆ ಸದಸ್ಯರಾಗಿ ಆರಿಸಿದ್ದರು. ಅವರು ಬಡವರ ಬಗ್ಗೆ ಸಾಮಾಜಿಕವಾಗಿ ಎಲ್ಲ ರೀತಿಯಲ್ಲಿ ಚಿಂತನೆಯನ್ನು ಮಾಡುತ್ತಿದ್ದರು. ಇಂಥ ವ್ಯಕ್ತಿ ಕೂಡ ಇಂದು ನಮ್ಮನಗಲಿದ್ದಾರೆ. ಇಳಿ ವಯಸ್ಸಿನಲ್ಲಿಯೂ ಕೂಡ ಎಲ್ಲ ಹಳ್ಳಿಗಳಿಗೆ ಹೋಗಿ ಸುತ್ತಾಡಿ ಕೆಲಸವನ್ನು ಜನರಿಗಾಗಿ ಮಾಡಿಸುತ್ತಿದ್ದರು. ಇಂಥ ಒಬ್ಬ ಸಚ್ಚಾರಿತ್ರ್ಯ ಪ್ರಾಮಾಣಿಕ ವ್ಯಕ್ತಿಯನ್ನು ನಾವು ಕಳೆದುಕೊಂಡಿದ್ದೇವೆ. ಇನ್ನು ಇವೊತ್ತಿನ ದಿನಗಳಲ್ಲಿ ದೇಶದಲ್ಲಿ ಭಯಂಕರ ಭಯೋತ್ಪಾದಕತೆಯನ್ನು ತಡೆಗಟ್ಟುವಲ್ಲಿ ತಮ್ಮನ್ನೇ ತಾವು ಅರ್ಪಿಸಿಕೊಂಡಂಥ ಪೋಲಿಸ್ ಇಲಾಖೆಯ ಹೆಚ್ಚುವರಿ ಪೋಲಿಸ್ ಅಧಿಕಾರಿಗಳಾದಂಥ, ಭಯೋತ್ಪಾದನೆ ನಿಗ್ರಹ ಪಡೆಯ ಮುಖ್ಯಸ್ಥರಾದಂಥ ಹೇಮಂತ್ ಕರ್ಕರೆಯಾಗಲಿ, ಹೆಚ್ಚುವರಿ ಪೋಲಿಸ್ ಆಯುಕ್ತರಾಗಿದ್ದಂಥ ಅಶೋಕ್ ಕಾಮ್ಟೆ, ಎನ್‌ಕೌಂಟರ್ ಸ್ಪೆಷಲಿಸ್ಟ್ ವಿಜಯ್ ಸಾಲಸ್ಕರ್ ಹಾಗೂ ಎನ್.ಎಸ್.ಜಿ. ಕಮಾಂಡೋ ಕರ್ನಾಟಕದ ಮೇಜರ್ ಸಂದೀಪ್ ಉನ್ನಿಕೃಷ್ಣನ್‌ರವರಾಗಲಿ, ಇವರೆಲ್ಲರೂ ಇವೊತ್ತು ಈ ರಾಷ್ಟ್ರದಲ್ಲಿ ಉಗ್ರವಾದಿಗಳು ಏನು ಬೆಳೆದಿದ್ದಾರೆ ಅವರನ್ನು ತಡೆಹಿಡಿಯುವುದಕ್ಕಾಗಿ ದೊಡ್ಡ ಹೋರಾಟವನ್ನು ಮಾಡಿ ತಮ್ಮ ಪ್ರಾಣವನ್ನು ಕಳೆದುಕೊಂಡಿದ್ದಾರೆ. ಇವರು ರಾಷ್ಟ್ರಕ್ಕೆ ಬಹು ದೊಡ್ಡ ಗೌರವವನ್ನು ತಂದುಕೊಟ್ಟಿದ್ದಾರೆ. ಇಂಥ ಉತ್ತಮ ಅಧಿಕಾರಿಗಳನ್ನು ಕಳೆದುಕೊಂಡಿರುವುದಕ್ಕೆ ಇಡೀ ರಾಷ್ಟ್ರವೇ ಅವರ ಬಗ್ಗೆ ಕಂಬನಿಯನ್ನು ಹಾಕಿದೆ. ಅನೇಕ ಜನರ ಪ್ರಾಣವನ್ನು ಉಳಿಸುವುದಕ್ಕೆ ಇವರು ಕಾರಣಕರ್ತರಾಗಿ ತಮ್ಮ ಜೀವನವನ್ನೇ ಪ್ರಾಣಾರ್ಪಣೆ ಮಾಡಿಕೊಂಡಿದ್ದಾರೆ. ಇವರುಗಳು ರಾಷ್ಟ್ರಪ್ರೇಮಿಗಳಾಗಿದ್ದರು. ಇಂಥ ರಾಷ್ಟ್ರಪ್ರೇಮಿಗಳನ್ನು ಕಳೆದುಕೊಂಡಿರುವುದಕ್ಕೆ ನಮಗೆ ದು:ಖವಾಗಿದೆ. ಇಂಥ ಅಧಿಕಾರಿಗಳು ನಮ್ಮ ರಾಜ್ಯದಲ್ಲಿ, ರಾಷ್ಟ್ರದಲ್ಲಿ ಇರುವುದರಿಂದಲೇ ನಮ್ಮ ದೇಶಕ್ಕೆ ಸಂರಕ್ಷಣೆ ದೊರಕುತ್ತಿದೆ. ಇಂಥವರ ಬೆಳವಣಿಗೆ ಬಹಳ ಮುಖ್ಯವಾಗಿರುತ್ತದೆ. ದಿವಂಗತರುಗಳ ಕುಟುಂಬದವರಿಗೆ ಇವರ ಅಗಲಿಕೆಯಿಂದ ಆಗಿರುವ ದು:ಖವನ್ನು ಭರಿಸುವಂಥ ಶಕ್ತಿ ಭಗವಂತ ನೀಡಲೆಂದು

ಪ್ರಾರ್ಥಿಸಿ ಈ ದಿನ ದಿವಂಗತರುಗಳ ಬಗ್ಗೆ ತಾವು ಮಂಡಿಸಿರುವಂಥ ಸಂತಾಪ ಸೂಚನೆ ಪ್ರಸ್ತಾವದ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿ.ಎಸ್. ಪುಟ್ಟೇಗೌಡ (ಶ್ರವಣಬೆಳಗೊಳ) :- ಇವತ್ತು ಅಗಲಿರುವಂತಹ ಗಣ್ಯರಿಗೆ ಸಂತಾಪಸೂಚನಾ ವಿಚಾರವಾಗಿ ನಮ್ಮ ಮಾನ್ಯ ಸಭಾಧ್ಯಕ್ಷರನ್ನೊಳಗೊಂಡಂತೆ ಮಾನ್ಯ ವಿರೋಧಪಕ್ಷದ ಮುಖಂಡರು ಬಹಳ ಜನ ಮಾತನಾಡಿದ್ದಾರೆ. ನಾನು ಇದರ ಬಗ್ಗೆ ಹೆಚ್ಚು ಮಾತನಾಡುವುದಿಲ್ಲ. ಮಾನ್ಯ ವಿಶ್ವನಾಥ್ ಪ್ರತಾಪ್ ಸಿಂಗ್‌ರವರು ಈ ದೇಶದ ಸೂತ್ರವನ್ನು ಹತ್ತು ತಿಂಗಳು ಹಿಡಿದಿದ್ದರೂ ಕೂಡ, ಈ ದೇಶಕ್ಕೆ ದೊಡ್ಡ ಕಂದರವಾಗಿರುವಂತಹ ಜಾತಿ-ಭಾಷೆಯ ಬಗ್ಗೆ ಅತ್ಯಂತ ಗಂಭೀರವಾಗಿ ಗಮನವನ್ನು ಸೆಳೆದಂತಹ ವ್ಯಕ್ತಿ ಈ ದೇಶದ ಪ್ರಧಾನ ಮಂತ್ರಿಗಳಾಗಿದ್ದರು. ಅವರು ರಾಜಮನೆತನದಲ್ಲಿ ಹುಟ್ಟಿದ್ದರೂ ಕೂಡ ಸಾಮಾನ್ಯರಂತೆ ಬದುಕಿ, ಸಾಮಾನ್ಯರ ಬದುಕಿಗೆ ಸ್ಪಂದಿಸಿದಂತಹ ಒಬ್ಬ ಮಹಾನ್ ವ್ಯಕ್ತಿ.

ಅವರಲ್ಲದೆ ಇವತ್ತು ಮಾನ್ಯ ಸಿದ್ಧರಾಜುರವರಂತಹ ಒಬ್ಬ ಗಣ್ಯರನ್ನು ಕಳೆದುಕೊಂಡಿದ್ದೇವೆ. ಅವರು ಕಳೆದ ಶಾಸನಸಭೆಯಲ್ಲಿ ಶಾಸಕರಾಗಿ ನಮ್ಮೆಲ್ಲರ ಒಡನಾಡಿಗಳಾಗಿದ್ದಂತಹವರು. ಇವತ್ತು ಅವರು ನಮ್ಮನ್ನಗಲಿದ್ದಾರೆ. ಅವರು ಇನ್ನು ಉತ್ಸಾಹಿ ಯುವಕರಾಗಿದ್ದರು, ರಾಜಕೀಯದಲ್ಲಿ ಅವರದೇ ಆದಂತಹ ಪ್ರೌಢತೆಯನ್ನು ಮೆರೆದಂತಹವರು. ಮಾನ್ಯ ಡಿ.ಕೆ. ಶಿವಕುಮಾರ್‌ವರು ಹೇಳುತ್ತಿದ್ದರು, ಮದ್ದೂರಿನಲ್ಲಿ ಕೆಲವೇ ಕುಟುಂಬಗಳಿಗೆ ಇದ್ದಂತಹ ರಾಜಕೀಯ ರಾಜಕಾರಣವನ್ನು ಭೇಧಿಸಿ ಒಂದು ಬಡತನದ ಕುಟುಂಬದಲ್ಲಿ ಬಂದರೂ ಕೂಡ ಹೋರಾಟ ಮಾಡಿ ಗೆದ್ದು ಅವರದೇ ಆದಂತಹ ಛಾಪನ್ನು ಮೂಡಿಸಿದಂತಹ ವ್ಯಕ್ತಿ ಇವತ್ತು ಆಗಲಿದ್ದಾರೆ.

ಪ್ರೊ॥ ಲಕ್ಷ್ಮೀಸಾಗರ್‌ರವರ ಜೊತೆ ನಾವೂ ಕೂಡ ರಾಜಕಾರಂಣದಲ್ಲಿ ಒಡನಾಡಿಗಳಾಗಿದ್ದವರು. ಅವರು ಅತ್ಯಂತ ಸರಳ ಜೀವನವನ್ನು ನಡೆಸಿ, ಈ ಸಮಾಜದ ಸರ್ವತೋಮುಖದ ಅಭಿವೃದ್ಧಿಗೆ, ಕಳಂಕರಹಿತ ರಾಜಕೀಯುವನ್ನು ಹೇಗೆ ಮಾಡಬಹುದು ಎಂದು ತೋರಿಸಿದಂತಹ ಒಬ್ಬ ಆದರ್ಶ ವ್ಯಕ್ತಿ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ವಿಶೇಷವಾಗಿ ನಮ್ಮ ಜಿಲ್ಲೆಯವರೇ ಆದಂತಹ ಮಾನ್ಯ ನಂಜೇಗೌಡರು ಅತ್ಯಂತ ಬಡತನದ ಕುಟುಂಬದಲ್ಲಿ ಹುಟ್ಟಿದವರು. ಅವರು ಓದುವಂತಹ

ಸಂದರ್ಭದಲ್ಲಿ ಮನೆಗಳಲ್ಲಿ ವಾರದ ಊಟ ಮಾಡಿ ಓದಿದಂತಹ ವ್ಯಕ್ತಿ ಎಂದು ಎಲ್ಲರ ಬಾಯಿಂದ ನಾವು ಕೇಳುತ್ತಿದ್ದೆವು. ವಿದ್ಯಾಭ್ಯಾಸದಲ್ಲಿ ಬಹಳ ಶ್ರಮಪಟ್ಟು ಮೇಲೆ ಬಂದಿದ್ದು, ಅವರು ಬಹಳ ದಿಟ್ಟತನದ ರಾಜಕಾರಣಿ, ಎಂದೂ ಕೂಡ ರಾಜಿ ಮಾಡಿಕೊಳ್ಳುವ ಸ್ವಭಾವ ಅವರಿಗಿರಲಿಲ್ಲ. ಏನಾದರೂ ಒಬ್ಬ ವ್ಯಕ್ತಿಯನ್ನು, ರಾಜಕಾರಣಿಯನ್ನು ಅಥವಾ ಅಧಿಕಾರಿಯನ್ನು ನಮ್ಮಂತಹವರು ಮಾತನಾಡಿಸುವುದಕ್ಕೆ ಆಗುವುದಿಲ್ಲವೆಂದರೆ, ಅವರನ್ನು ನಂಜೇಗೌಡರಿಂದ ಮಾತ್ರ ಮಾತನಾಡಿಸುವುದಕ್ಕೆ ಸಾಧ್ಯವಿತ್ತು. ಸದನದಲ್ಲಿ ಕೂಡ ಬಹಳ ಗಂಭೀರವಾಗಿ ಮಾತನಾಡುವಾಗ, ಅಪ್ಪಟ ಹಳ್ಳಿಯ ಭಾಷಿಗನಾಗಿ ಅವರದೇ ಆದಂತಹ ರೀತಿಯಲ್ಲಿ, ಗಟ್ಟಿ ಧ್ವನಿಯಲ್ಲಿ ಗಮನ ಸೆಳೆವ ರೀತಿಯಲ್ಲಿ ಮಾತನಾಡಿ ನಮಗೆಲ್ಲರಿಗೂ ಆದರ್ಶ ರಾಜಕಾಣಿಯಾಗಿದ್ದರು. ಅವರು ಬಡವರು, ದೊಡ್ಡವರು ಎನ್ನುವ ಅಂತರವನ್ನು ಕಂಡವರಲ್ಲ. ನಾವು ವಯಸ್ಸಿನಲ್ಲಿ ಚಿಕ್ಕವರಾಗಿದ್ದರೂ ನಮ್ಮನ್ನೆಲ್ಲ ಅತ್ಯಂತ ವಿಶ್ವಾಸದಿಂದ ಕಾಣುತ್ತಿದ್ದ ಅವರು ಸ್ನೇಹಮಯಿಯಾಗಿದ್ದರು.

ಮಾನ್ಯ ಶ್ರೀಕಂಠಪ್ಪನವರನ್ನು ನಾವು ನೋಡಿರಲಿಲ್ಲ. ಅವರು ಎಂದೂ ಸೋಲನ್ನು ಕಂಡರಿಯದಂತಹ ಮನುಷ್ಯ. ಅವರು ಬಡವರ ಬಗ್ಗೆ ಕಾಳಜಿ ಇದ್ದವರು. ಸರಳ ಹಾಗೂ ರೈತ ಕುಟುಂಬಕ್ಕೆ ಬಹಳ ಹತ್ತಿರದ ವ್ಯಕ್ತಿಯಾಗಿದ್ದರು ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಮಾನ್ಯ ಎಂ. ಶ್ರೀನಿವಾಸ್‌ರವರ, ಬಗ್ಗೆ ಮಾನ್ಯ ಶ್ರೀನಿವಾಸ ಪ್ರಸಾದ್‌ರವರು ಹೇಳುತ್ತಿದ್ದರು. ನಾನು ಓದುವಾಗ ಅವರ ಮನೆಯಲ್ಲಿ ಓದಿದವನು. ಮೈಸೂರಿನಲ್ಲಿ ರಂಗಯ್ಯ ಮೆಸ್ ಎಂದು ಆ ಕಾಲಕ್ಕೆ ಸಾಹುಕಾರ್ ಮರಿಯಪ್ಪನವರು ಎಂದು ನೂರಾರು ಎಕರೆಯನ್ನು ಹೊಂದಿದಂತಹ ಒಂದು ದೊಡ್ಡ ಕುಟುಂಬದಲ್ಲಿ ಹುಟ್ಟಿದ್ದರೂ ಕೂಡ, ಅವರು ಬಡವರ ಜೊತೆ ಸರಳವಾಗಿ ಇದ್ದು, ಹಲವಾರು ದಾನ ಧರ್ಮಗಳನ್ನು ಮಾಡಿ ಕೆಲವು ಜಮೀನುಗಳನ್ನು ಗೇಣಿದಾರರಿಗೆ ಮಾಡಿಕೊಟ್ಟಿರುವುದನ್ನು ನಾವು ಕಂಡಿದ್ದೇವೆ.

ಇನ್ನು ನಮ್ಮನ್ನಗಲಿದಂತಹ ಮೋಹನಶೆಟ್ಟಿಯವರು ಕಳೆದ ಶಾಸನಸಭೆಯಲ್ಲಿ ನಮ್ಮ ಜೊತೆ ಇದ್ದು, ಸಮಿತಿಯಲ್ಲಿ ಕೂಡ ನಮ್ಮ ಜೊತೆಯಲ್ಲೇ ಇದ್ದವರು. ಅವರು ಬಹಳ ಸರಳ ಹಾಗೂ ಒಳ್ಳೆಯ ಸ್ವಭಾವದವರು, ಅವರು ಅತ್ಯಂತ ಕಡಿಮೆ ಮತಗಳ ಅಂತರದಲ್ಲಿ ಸೋತಿದ್ದರು. ಅವರು ಇವತ್ತು ನಮ್ಮನ್ನು ಅಗಲಿದ್ದಾರೆ.

ಇವತ್ತು ನಮ್ಮನ್ನು ಅಗಲಿದಂತಹ ಎಲ್ಲಾ ಗಣ್ಯವ್ಯಕ್ತಿಗಳು ಬಿಟ್ಟುಹೋಗಿರುವಂತಹ ಆದರ್ಶ ನಮ್ಮ ಮುಂದೆ ಇದೆ. ಇನ್ನು ಮುಂಬೈ ಘಟನೆಯಲ್ಲಿ ಮೃತಪಟ್ಟಂತಹ ಭದ್ರತಾ ಪಡೆಯ ಕೆಲವು ಅಧಿಕಾರಿಗಳು ಇಲ್ಲಿ ಜನ್ಮತಾಳಿದ್ದೇ ಈ ದೇಶದ ರಕ್ಷಣೆಗೆ ಎಂದು ನಂಬಿಕೆ ಇಟ್ಟು, ತಮ್ಮ ಪ್ರಾಣವನ್ನು ಬಲಿದಾನ ಮಾಡಿದವರು, ತ್ಯಾಗ ಮಾಡಿದವರು. ನಮಗೆಲ್ಲರಿಗೂ ಕೂಡ ನಮ್ಮ ಕೆಲಸವನ್ನು ಮಾಡುವುದಕ್ಕೆ ಅವಕಾಶ ಇದೆ, ಅವರು ಅವರ ಜೀವನವನ್ನು ಮುಡುಪಾಗಿಟ್ಟು ಹೋರಾಟ ಮಾಡಿ, ಅವತ್ತು ನಡೆದಂತಹ ದುರ್ಘಟನೆಯನ್ನು ತಹಬದಿಗೆ ತರುವುದಕ್ಕೆ ಹೋರಾಟ ಮಾಡಿ ನಮ್ಮನ್ನಗಲಿದಂತಹ ಉನ್ನಿಕೃಷ್ಣನ್ ಆಗಲಿ ಹಾಗೂ ಎಲ್ಲಾ ಯೋಧರಿಗೆ, ಪೋಲೀಸ್ ಹಿರಿಯ ಅಧಿಕಾರಿಗಳಿಗೆ ಹಾಗೂ 16 ಜನ ಗಣ್ಯರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸುವಂತಹ ಈ ಸಭೆಯಲ್ಲಿ ನಾವೂ ಕೂಡ ಭಾಗಿಗಳಾಗಿ ನನಗೆ ಮಾತನಾಡಲು ಅವಕಾಶ ನೀಡಿದ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಬೀದರ್) :- ಮಾನ್ಯ ಅಧ್ಯಕ್ಷರೆ, ತಾವು ಮತ್ತು ಸಭಾನಾಯಕರು ತಂದಂತಹ ಸಂತಾಪ ಸೂಚನೆಯನ್ನು ಅನುಮೋದಿಸುತ್ತಾ, ನಮ್ಮ ಭಾರತ ದೇಶದ ಪ್ರಧಾನ ಮಂತ್ರಿಗಳಾಗಿದ್ದಂತಹ ವಿ.ಪಿ. ಸಿಂಗ್‌ರವರು ಬಹಳ ಅನುಭವಿಗಳು ಹಾಗೂ ನುರಿತ ರಾಜಕಾರಣಿಗಳಾಗಿದ್ದವರು. ಅವರು ರಾಜ ಮನೆತನದಿಂದ ಬಂದರೂ ಕೂಡ ಅವರು ಹೇಳತಕ್ಕಂಥ ವಿಚಾರಗಳು ಬಹಳ ಮಹತ್ವವಾಗಿದ್ದವು. ಏಕೆಂದರೆ ನಾನು MLA ಆಗಿದ್ದಂತಹ ಸಂದರ್ಭದಲ್ಲಿ ಅವರು ಪ್ರಧಾನ ಮಂತ್ರಿಗಳಾಗಿದ್ದಾಗ ಬೀದರ್‌ಗೆ ಬಂದಿದ್ದರು. ಆಗ ಅವರು ಬಹಳ ಚೆನ್ನಾಗಿ ಮಾತನಾಡುತ್ತಿದ್ದರು. ಅವರು ಮಂಡಲ್ ಕಮಿಷನ್ ಬಗ್ಗೆ ವಿಶೇಷವಾದಂತಹ ಮಾತುಗಳನ್ನು ಹೇಳಿ ಎಲ್ಲಾ ಬಡಜನರ ಹೃದಯಗಳನ್ನು ಗೆದಿದ್ದರು. ಆಗ ವಿಶೇಷವಾಗಿ ದೇಶದಲ್ಲಿ ಅನಾಹುತಗಳು ನಡೆಯುತ್ತಿತ್ತು, ಗಲಾಟೆ ನಡೆಯುತ್ತಿತ್ತು, ಬಹಳಷ್ಟು ಜನ ಆತ್ಮಹತ್ಯೆ ಮಾಡಿಕೊಂಡರು, ಆದರೆ ಅದ್ಯಾವುದಕ್ಕೂ ಅಂಜದೇ ಮಂಡಲ್ ವರದಿಯನ್ನು ಜಾರಿಗೆ ತಂದಕೊಟ್ಟ ಧೀಮಂತ ನಾಯಕ ಮಾನ್ಯ ವಿಶ್ವನಾಥ್ ಪ್ರತಾಪ್ ಸಿಂಗ್‌ರವರು. ಇವರಲ್ಲದೇ ಮಾನ್ಯ ಎಂ.ಎಸ್. ಸಿದ್ಧರಾಜುರವರು, ಪ್ರೋ॥ ಎ. ಲಕ್ಷ್ಮೀಸಾಗರ್, ಶ್ರೀ ಮೆರಾಜುದ್ದೀನ್ ಎನ್. ಪಟೇಲ್, ವಿಶ್ವನಾಥ್ ರೆಡ್ಡಿ ಮುದ್ನಾಳ್, ಹೆಚ್. ಎನ್. ನಂಜೇಗೌಡ, ಪಿ. ಅಂಜನಪ್ಪ, ಬಿ. ಹೆಚ್. ಯಂಕನಾಯಕ್, ಮಾಣಿಕ್‌ರಾವ್ ಪುಲೇಕರ್‌ರವರು, ಎಂ.ಆರ್. ಪಾಟೀಲ್, ಎಲ್.ಎಸ್. ನಾಯಕ್, ರುದ್ರಗೌಡ ಹುಣಸೀಹಾಳ್, ಎಂ. ಶ್ರೀನಿವಾಸ್, ಮೋಹನ್‌ಕೃಷ್ಣ ಶೆಟ್ಟಿ, ಡಿ.ಸಿ ಶ್ರೀಕಂಠಪ್ಪ

ಹಾಗೂ ಬಿ.ವಿ. ನಾಯಕ್ ಅವರುಗಳು ನಿಧನ ಹೊಂದಿದ್ದು, ಅದರ ಜೊತೆಗೆ ಮುಂಬೈನಲ್ಲಿ ಭದ್ರತಾ ಪಡೆಯ ಕೆಲವು ಅಧಿಕಾರಿಗಳು ಹಾಗೂ ಅಮಾಯಕರು ಉಗ್ರರ ಗುಂಡಿಗೆ ಬಲಿಯಾದ ಬಗ್ಗೆ ಈ ಸದನದಲ್ಲಿ ತಾವು ಸಂತಾಪ ಸೂಚನೆಯನ್ನು ತಂದಿದ್ದೀರಿ. ಮೆರಾಜುದ್ದೀನ್ ಎನ್. ಪಟೇಲ್‌ರವರು, ವಿಶ್ವನಾಥ್ ರೆಡ್ಡಿ, ಲಕ್ಷ್ಮೀಸಾಗರ್‌ರವರು ಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ನಾನೂ ಕೂಡ ಮಂತ್ರಿಯಾಗಿದ್ದೆನು. ಇವರು ಬಹಳ ಅನುಭವಿಗಳು. ಮಾನ್ಯ ಲಕ್ಷ್ಮೀಸಾಗರ್‌ರವರು ಒಂದು ಮಾತನ್ನು ಹೇಳುತ್ತಿದ್ದರು, ನಾನು ಮಂತ್ರಿ ಯಾಗಿದ್ದಾಗ ಅವರ ಜೊತೆ ಒಂದು ಬಾರಿ ರಾಜಕೀಯದ ಬಗ್ಗೆ ಏನೇನೆಲ್ಲ ಹೇಳುತ್ತಾರೆ ಎಂದು ಚರ್ಚೆ ಮಾಡುತ್ತ ಕುಳಿತ್ತಿದ್ದೆನು. ಯಾರು ಏನಾದರೂ ಹೇಳಲಿ ನಾವು ಅದಕ್ಕೆ adjust ಆಗಬಾರದೆಂದು ಹೇಳುತ್ತಿದ್ದರು. ಮನುಷ್ಯನಿಗೆ ನಿಯತ್ತಿರಬೇಕು ಎಂದು ಹೇಳುತ್ತಿದ್ದರು. ಅದಕ್ಕೆ ನಾನು ಕೆಲವರು ಹೀಗೆ ಹೇಳುತ್ತಾರಲ್ಲ ಎಂದು ಹೇಳುತ್ತಿದ್ದೆನು. Politics is a game of adjustments one should not be sensitive ಎಂದು ಹೇಳುತ್ತಾರಲ್ಲ ಎಂದು ಹೇಳಿದಾಗ, No, no,no ಎಲ್ಲಿ sensitive ಆಗಬೇಕೋ ಅಲ್ಲಿ sensitive ಆಗಬೇಕು, ಎಲ್ಲಿ ಆಗಬಾರದೋ ಅಲ್ಲಿ ಆಗಬಾರದು ಎಂದು ಹೇಳುತ್ತಿದ್ದರು. ಅವರು ಅದಕ್ಕೆಲ್ಲ compromise ಆಗುತ್ತಿರಲಿಲ್ಲ. ಅಂತಹ ಒಂದು ಅನುಭವವಿರುವಂತಹ ಒಬ್ಬ ರಾಜಕಾರಣಿ. ಅವರು ನಿಯತ್ತು, ಮನುಷ್ಯತ್ವ, ಮಾನವೀಯತೆ ಬೇಕು, ಮಂತ್ರಿಗಳಾಗಿ ಹೇಗೆ ಕೆಲಸ ಮಾಡಬೇಕೆಂದು ಬಹಳ ಬುದ್ಧಿವಾದ ಹೇಳುತ್ತಿದ್ದರು. ಮಾನ್ಯ ವಿಶ್ವನಾಥ ರೆಡ್ಡಿ ಮುದ್ನಾಳ್‌ರವರು ಕೂಡ ವೀರಶೈವ ಧರ್ಮಕ್ಕೆ ಹಿರಿಯ ನಾಯಕರಾಗಿದ್ದರು. ಅವರು ಆಂಧ್ರದ ಹೈದಾರಾಬಾದ್‌ನಲ್ಲಿ ಕನ್ನಡ ಶಾಲೆ ತೆರೆದು, ವೀರಶೈವ ಹಾಸ್ಟೆಲ್ ತೆರೆದಿದ್ದರು. ಅದು ಇವತ್ತಿಗೂ ಕೂಡ ಪ್ರಭುರಾವ್ ಕಂಬಳಿವಾಲ ಎಂದು ವಿಶೇಷವಾಗಿ ನಡೆಯುತ್ತಿದೆ. ಅವರು ಮಾಡಿದಂತಹ ಕೆಲಸ ಇವತ್ತು ನಮ್ಮ ಎದುರುಗಡೆ ಇದೆ. ಮಾನ್ಯ ಶಿವಕುಮಾರ್‌ರವರು ಮಾನ್ಯ ಮುಖ್ಯ ಮಂತ್ರಿಗಳಿಗೆ ಹೇಳುತ್ತಿದ್ದರು. ಮಾನ್ಯ ಮೆರಾಜುದ್ದೀನ್‌ರವರಿಗೆ ಏಳು ಜನ ಹೆಣ್ಣುಮಕ್ಕಳಿದ್ದು, ಅವರಿಗೆ ಗಂಡು ಮಗು ಇಲ್ಲ. ಏಳು ಜನರಲ್ಲಿ ಇಬ್ಬರಿಗೆ ಮದುವೆಯಾಗಿದ್ದು, ಇನ್ನು ಐದು ಜನ ಹೆಣ್ಣುಮಕ್ಕಳಿಗೆ ಮದುವೆಯಾಗಿಲ್ಲ. ಅವರೆಲ್ಲ ದೊಡ್ಡವರಾಗಿದ್ದಾರೆ, ಅವರ ಕಷ್ಟ ಹೇಳುವುದಕ್ಕೆ ಆಗುವುದಿಲ್ಲ. ಅವರು ಸಕ್ಕರೆ ಕಾರ್ಖಾನೆ ಮಾಡುವುದಕ್ಕೆ ಹೋಗಿ 13 ಕೋಟಿ ರೂಪಾಯಿ ಸಾಲ ಮಾಡಿಕೊಂಡಿದ್ದಾರೆ. ಸಾಲ ಕಟ್ಟದಿರುವುದಕ್ಕೆ ಅದು ಹರಾಜಿಗೆ

ಬಂದಿದೆ. ಅದೊಂದೆ ಅಲ್ಲ, ಇಲ್ಲಿ ಅವರು ಒಂದು ಒಳ್ಳೆಯ ಮನೆಯನ್ನು ಕಟ್ಟಿಕೊಂಡಿದ್ದರು. ಆ ಮನೆಯನ್ನು ಗೂಂಡಾಗಳು ಬಂದು ಗಲಾಟೆ ಮಾಡಿದ್ದು ನಿಜ. ತಾವು ಅವರಿಗೆ ಏನಾದರೂ ಸಹಾಯ ಮಾಡಿ ಅವರು ಬದುಕುವುದಕ್ಕೆ ಅವಕಾಶ ಮಾಡಬೇಕು. ಒಂದು ಮಾತು ನಿಜವೇನೆಂದರೆ, ನಾವೆಲ್ಲ ಚೆನ್ನಾಗಿದ್ದೇವೆ, ನಮಗೆ ಸಹಾಯ ಮಾಡಿ ಎಂದು ಹೇಳುವುದಿಲ್ಲ. ಆದರೆ ಬಹಳ ಜನ ಶಾಸಕರು ಬಹಳ ತೊಂದರೆಯಲ್ಲಿ ಇದ್ದು ಸತ್ತಿದ್ದಾರೆ, ಅವರೆಲ್ಲರ ಮಕ್ಕಳ ಬಗ್ಗೆ ಏನಾದರೂ ಒಂದು ಚಿಂತನೆಯನ್ನು ಮಾಡಬೇಕು. ಅವರ ಬಗ್ಗೆ ಸಂತಾಪ ಸೂಚನೆಯಲ್ಲಿ ಮಾತನಾಡಿ ಎದ್ದು ಹೋಗಿಬಿಡುತ್ತೇವೆ. ಅದರಲ್ಲೂ ಈಗ ಸಂತಾಪ ಸೂಚನೆಯಲ್ಲಿ ಕೂಡ ಗಲಾಟೆ ಮಾಡುವುದು. ಸಂತಾಪ ಸೂಚನೆ ಇರುವಾಗ ಗಂಭೀರವಾಗಿ ಇರಬೇಕು. ಆಗ ಕೂಡ ಗಲಾಟೆ ನಡೆಯುತ್ತದೆ, ಅಲ್ಲಿ ಕೂಡ ಗಂಭೀರತೆ ಬರುವುದಿಲ್ಲ. ಆದುದರಿಂದ ಸಂತಾಪ ಸೂಚನೆಯಲ್ಲಿ ಗಂಭೀರತೆ ಇರಬೇಕು. ಇವತ್ತು ಯಾರ್ಯಾರ ಕುಟುಂಬ ಹಾಳಾಗಿ ಹೋಗಿದೆ, ಅವರು ಬದುಕುವುದು ಕಷ್ಟವಾಗಿದೆ, ಅಂತಹವರ ಬಗ್ಗೆ ವಿಶೇಷವಾಗಿ, ಸರ್ಕಾರದಿಂದ ಕೊಡುವುದಕ್ಕೆ ಆಗುವುದಿಲ್ಲವೆಂದರೆ ಶಾಸಕರ ನಿಧಿ ಎಂದು ಮಾಡಿದರೆ ನಾವು ಕೊಡುವುದಕ್ಕೆ ತಯಾರಾಗಿದ್ದೇವೆ.

ತಾವು ಅದನ್ನು ತೆಗೆದುಕೊಂಡು ಒಂದು ವ್ಯವಸ್ಥೆಯನ್ನು ಮಾಡಿದರೆ ಬಹಳ ಒಳ್ಳೆಯದಾಗುತ್ತದೆ, ಅನುಕೂಲವಾಗುತ್ತದೆ. ಅದುದರಿಂದ ತಾವು ದಯವಿಟ್ಟು ಅದಕ್ಕೆ ಒಂದು ವ್ಯವಸ್ಥೆಯನ್ನು ಮಾಡಬೇಕೆಂಬ ಮಾತನ್ನು ಹೇಳುತ್ತೇನೆ. ಇಲ್ಲಿ ಯಾರಾದರೂ ಸತ್ತರೆ ಅವರಿಗೆ ಸಂತಾಪ ಸೂಚನೆಯಲ್ಲಿ ಅವರು ಹಾಗೆ ಇದ್ದರು, ಹೀಗೆ ಇದ್ದರೆಂದು ಹೊಗಳುತ್ತೇವೆ ಹೋಗುತ್ತೇವೆ. ನಾವು ಅವರ ಕಷ್ಟ ಏನಿದೆ ಎಂಬುದನ್ನು ಯಾರು ನೋಡುವುದಿಲ್ಲ. ಇಲ್ಲಿ ಸ್ಥಿತಿವಂತರಾಗಿರುವವರನ್ನು ಬಿಡಿ, ಇಲ್ಲದೇ ಇರುವವರ ಕಷ್ಟವನ್ನು ನೋಡಬೇಕು. ಇದನ್ನು ಸರ್ಕಾರದವರು ಪರಿಹರಿಸಬೇಕು ಮತ್ತೆ ಮಾನ್ಯ ಸಭಾಧ್ಯಕ್ಷರು ಈ ಬಗ್ಗೆ ಒಂದು ಮೀಟಿಂಗ್ ಮಾಡಿ ಇದರ ಬಗ್ಗೆ ಏನಾದರೂ ಮಾಡುವ ಸಾಧ್ಯತೆಗಳು ಇದ್ದರೆ ಅದನ್ನು ಮಾಡಬೇಕೆನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವತ್ತು ಈ ಎಲ್ಲಾ ಹಿರಿಯರು ಅಗಲಿ ಹೋಗಿದ್ದಾರೆ. ಇವರೆಲ್ಲರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ದೇವರನ್ನು ಪ್ರಾರ್ಥಿಸುತ್ತೇನೆ. ಇನ್ನು ಮುಂಬೈನಲ್ಲಿ ನಡೆದಿರುವ ಭಯೋತ್ಪಾದನೆ ಘಟನೆ ಏನು ನಡೆದಿದೆ. ಇದು ದೇಶಕ್ಕೆ ಒಂದು ಕಳಂಕ ತರುವಂಥಾದ್ದಾಗಿದೆ. ಇದರ ಬಗ್ಗೆ ಯಾರೂ ರಾಜಕೀಯ ಮಾಡದೇ ಇದನ್ನು ಎಲ್ಲರೂ ಒಟ್ಟಾಗಿ ಎದುರಿಸಬೇಕಾಗುತ್ತದೆ. ಇವತ್ತು ಇದರ ಬಗ್ಗೆ ಇಡೀ ಜಗತ್ತೇ ಚಿಂತನೆ

ಮಾಡುತ್ತಿದೆ. ಈ ಭಯೋತ್ಪಾದನೆಯನ್ನು ತೊಡೆದು ಹಾಕುವಂಥಾದ್ದು ಬಹಳ ಮುಖ್ಯವಾಗಿದೆ. ಅದುದರಿಂದ ಈ ವಿಚಾರದಲ್ಲಿ ರಾಜಕೀಯವಿಲ್ಲದೇ ನಾವೆಲ್ಲರೂ ಒಟ್ಟಾಗಿ ಇದನ್ನು ಎದುರಿಸುವಂಥ ಕೆಲಸವನ್ನು ಮಾಡೋಣ. ನಾವು ಈ ವಿಷಯದಲ್ಲಿ ಎಚ್ಚರದಿಂದ ಕೆಲಸವನ್ನು ನಿರ್ವಹಿಸೋಣವೆಂದು ಹೇಳುತ್ತಾ, ಇವತ್ತಿನ ಸಭೆಯಲ್ಲಿ ತಂದಿರುವಂಥ ಸಂತಾಪ ಸೂಚನೆಯನ್ನು ಅನುಮೋದಿಸುತ್ತಾ ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎ. ಮಂಜು (ಅರಕಲಗೂಡು) :- ಮಾನ್ಯ ಸಭಾಧ್ಯಕ್ಷರೆ, ಇವತ್ತಿನ ಸಭೆಯಲ್ಲಿ ಮಂಡಿಸಿರುವ ಸಂತಾಪ ಸೂಚನೆಯಲ್ಲಿ ನಮ್ಮನ್ನು ಅಗಲಿ ಹೋಗಿರುವ ನಾಯಕರ ಬಗ್ಗೆ ನಮ್ಮ ಹಲವಾರು ನಾಯಕರು ಏನು ವಿಶ್ಲೇಷಣೆಯನ್ನು ಮಾಡಿದ್ದಾರೆ. ಅವರಲ್ಲಿ ದಿವಂಗತರಾದ ಹೆಚ್.ಎನ್.ನಂಜೇಗೌಡರು ನನ್ನ ಕ್ಷೇತ್ರಕ್ಕೆ ಸೇರಿದವರು, ಇವರು ನನ್ನ ಗ್ರಾಮದವರೇ ಆಗಿರುವವರು. ನನ್ನ ಹತ್ತಿರ ಸಂಬಂಧಿಗಳು ಕೂಡ ಆಗಿದ್ದವರು. ಅವರು ವಿದ್ಯಾರ್ಥಿಗಳ ಲೀಡರ್ ಆಗಿ ರಾಜಕೀಯವನ್ನು ಪ್ರವೇಶ ಮಾಡಿದಂಥವರು. ಅವರು ಮೂರು ಬಾರಿ ಶಾಸಕರಾ, ಎರಡು ಬಾರಿ ಲೋಕಸಭಾ ಸದಸ್ಯರಾಗಿ, ಮಂತ್ರಿಯಾಗಿ ರಾಜ್ಯದ ರೈತರ ಮತ್ತು ಹಳ್ಳಿಗಳ ಸಮಸ್ಯೆಗಳ ಬಗ್ಗೆ ಅಪಾರವಾದಂಥ ಗೌರವವನ್ನು ಇಟ್ಟುಕೊಂಡು ಹೋರಾಟ ಮಾಡಿದಂಥ ಒಬ್ಬ ನಿಷ್ಠಾವಂತ ರಾಜಕಾರಣಿಗಳು ಆಗಿದ್ದರು. ರಾಜ್ಯದಲ್ಲಿ ವಿಶೇಷವಾಗಿ ಅವರದೇ ಆದಂಥ ರೀತಿಯಲ್ಲಿ ನೀರಾವರಿ ಬಗ್ಗೆ ಕೊಡುಗೆಯನ್ನು ಕೊಟ್ಟಂಥವರಾಗಿದ್ದಾರೆ. ನನ್ನ ಕ್ಷೇತ್ರದಲ್ಲಿ ಹಾರಂಗಿ ಮತ್ತು ಹೇಮಾವತಿ ಜಲಾಶಯದಲ್ಲಿ ಬಂದಂಥ ಹೇಮಾವತಿಯ ಹೈರಾವಲ್ ಕೆನಾಲ್ ಅನ್ನು ವಿಶೇಷವಾಗಿ ಸ್ಥಾಪನೆ ಮಾಡಿ, ನಮ್ಮ ಅರಕಲಗೂಡು, ಹೊಳೆನರಸಿಪುರ ತಾಲ್ಲೂಕು ಮತ್ತು ಕೆ.ಆರ್. ಪೇಟೆ ತಾಲ್ಲೂಕಿಗೆ ಹೆಚ್ಚಿನ ನೀರಾವರಿ ಸೌಕರ್ಯವನ್ನು ನಮ್ಮ ರೈತರಿಗೆ ಕೊಡಿಸಿದಂತಹ ಕೀರ್ತಿ ಅವರಿಗೆ ಸೇರಿರುವಂಥಾದ್ದು. ಅವರು ಸ್ನೇಹ ಜೀವಿಯಾಗಿದ್ದರು, ವಿಶ್ವಾಸಕ್ಕೆ, ಸ್ನೇಹಿತರಿಗೆ ಬಾರಿ ವಿಶೇಷವಾದ ಗೌರವವನ್ನು ಕೊಟ್ಟುಕೊಂಡು ಬಂದಂಥವರಾಗಿದ್ದರು. ಅದರಲ್ಲೂ ಹೆಚ್ಚಾಗಿ ಸುದ್ಧಿ ಮಾಧ್ಯಮದವರೊಂದಿಗೆ ಅಪಾರವಾದ ಸ್ನೇಹತನವನ್ನು ಹೊಂದಿದ್ದ ವ್ಯಕ್ತಿಗಳಾಗಿದ್ದರು. ಇವರು ಸದನದಲ್ಲಿದಂಥ ಅವಧಿಯಲ್ಲಿ ಹಲವಾರು ವಿಚಾರಗಳ ಬಗ್ಗೆ ಪ್ರಸ್ತಾವನೆಯನ್ನು ಮಾಡಿ ರಾಜ್ಯದ ಎಲ್ಲರ ಗಮನವನ್ನು ಸೆಳೆದಂಥವರು. ಅದರಲ್ಲೂ ವಿಶೇಷವಾಗಿ ನಮ್ಮ ಶಾಸನ ಸಭೆಯಲ್ಲಿ ಶಾಸಕರ ಭವನವನ್ನು ನಿರ್ಮಾಣ ಮಾಡುವಂಥ ವಿಚಾರ ಬಂದಂಥ ಕಾಲದಲ್ಲಿ ಹೈಕೋರ್ಟ್‌ನವರು ಒಂದು ಆದೇಶವನ್ನು ಮಾಡಿ ಶಾಸಕರ

ಭವನವನ್ನು ಕಟ್ಟಬಾರದೆಂದು ಹೇಳಿದಾಗ, ಅವರು ಶಾಸಕಾಂಗವೇ ಅತಿ ಹೆಚ್ಚಿನ ಮಟ್ಟದ್ದೆಂದು ಪ್ರತಿಪಾದನೆಯನ್ನು ಮಾಡಿ ಶಾಸಕರ ಭವನದ ಕಟ್ಟಡವನ್ನು ಕಟ್ಟುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಂಥ ಕೀರ್ತಿ ಕೂಡ ಅವರಿಗೆ ಸಲ್ಲುತ್ತದೆಂಬುದನ್ನು ಈ ಸಂದರ್ಭದಲ್ಲಿ ನಾವು ಭಾವಿಸಬೇಕಾಗುತ್ತದೆ. ನಾನು ಇಲ್ಲಿ ಇವತ್ತು ಶಾಸಕನಾಗಿ ಇರಬೇಕಾದರೆ, ಅವರು ರಾಜಕೀಯವಾಗಿ ನನಗೆ ಏನೂ ಸಹಾಯ ಮಾಡಲಿಲ್ಲ. ಆದರೆ ಅವರು ದಿನ ನಿತ್ಯದ ಜೀವನದಲ್ಲಿ ನಡೆದುಕೊಂಡ ದಾರಿ, ನನಗೆ ಇವತ್ತು ಈ ಶಾಸನ ಸಭೆಗೆ ಬರುವುದಕ್ಕೆ ಸ್ಪೂರ್ತಿಯಾಗಿ ನನ್ನ ಜೀವನದಲ್ಲಿ ಬಂದಂಥ ವ್ಯಕ್ತಿಯೆಂದು ನಾನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬೇಕಾಗುತ್ತದೆ. ಅವರ ಕುಟುಂಬ ವರ್ಗದವರಿಗೆ ಭಗವಂತನು ಒಳ್ಳೆಯದನ್ನು ಮಾಡಲಿ ಅವರಿಗೆ ಧೈರ್ಯವನ್ನು ಕೊಡಲಿಯೆಂದು ಹೇಳುತ್ತಾ, ಇವತ್ತು ನನಗೆ ಅವರ ಬಗ್ಗೆ ಮಾತನಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಂಥ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ (ಕಡೂರು) :- ಮಾನ್ಯ ಸಭಾಧ್ಯಕ್ಷರೆ, ಈ ದಿವಸ ಬೆಳಗಾವಿ ವಿಧಾನ ಸಭಾ ಅಧಿವೇಶನದಲ್ಲಿ ಸಂತಾಪ ಸೂಚನೆಯ ಭಾಷಣದಲ್ಲಿ ನನಗೆ ಮಾತನಾಡಲು ಅವಕಾಶವನ್ನು ಮಾಡಿಕೊಟ್ಟದ್ದಕ್ಕೆ ತಮಗೆ ಅಭಿನಂದಿಸುತ್ತೇನೆ. ಈ ದೇಶದ ಮಾಜಿ ಪ್ರಧಾನ ಮಂತ್ರಿಗಳಾದ ವಿಶ್ವನಾಥ್ ಪ್ರತಾಪ್‌ಸಿಂಗ್‌ರವರು ರಾಜ ಮನೆತನದಲ್ಲಿ ಹುಟ್ಟಿದ್ದರೂ ಕೂಡ ಸಕ್ರೀಯವಾಗಿ ರಾಜಕೀಯದಲ್ಲಿ ಭಾಗವಹಿಸಿ, ಈ ದೇಶದ ಹಲವಾರು ಇಲಾಖೆಗಳ ಸಚಿವರಾಗಿ, ಬೋಫೋರ್ಸ್ ಹಗರಣದಲ್ಲಿ ಕಾಂಗ್ರೆಸ್ ಪಕ್ಷವನ್ನು ತೊರೆದು ಸಮ್ಮಿಶ್ರ ಸರ್ಕಾರವನ್ನು ಮಾಡುವುದರ ಮುಖಾಂತರ ಅವರು ಈ ದೇಶದ ಪ್ರಧಾನ ಮಂತ್ರಿಗಳಾಗಿದ್ದರು. ಇವರು ರಾಜ ಮನೆತನದಲ್ಲಿ ಹುಟ್ಟಿದ್ದರೂ ಕೂಡ ಅವರಿಗೆ ಹಿಂದುಳಿದ ವರ್ಗದವರ ಬಗ್ಗೆ ಬಹಳ ಕಳಕಳಿ ಇತ್ತು. ಅದರ ಉದ್ಧೇಶವೇನು ಎಂದು ಹೇಳಿದರೆ, ಈ ದೇಶದಲ್ಲಿ ಸಾಮಾಜಿಕವಾಗಿ ಸಮಾನತೆಯನ್ನು ತರಬೇಕೆನ್ನುವ ಚಿಂತಕರಾಗಿದ್ದರೆಂದು ಹೇಳಿದರೆ, ಅದು ಏನೂ ತಪ್ಪಾಗಲಿಕ್ಕಿಲ್ಲವೆಂದು ನಾನು ಭಾವಿಸಿಕೊಂಡಿದ್ದೇನೆ. ಅಂಥ ಶ್ರೀ ವಿಶ್ವನಾಥ್ ಪ್ರತಾಪ್‌ಸಿಂಗ್‌ರವರು ಮಂಡಲ್ ವರದಿಯನ್ನು ಜಾರಿಗೆ ತರಬೇಕೆನ್ನುವ ವಿಚಾರವನ್ನು ಲೋಕಸಭೆಯಲ್ಲಿ ಮಂಡಿಸಿದಂಥ ಸಂದರ್ಭದಲ್ಲಿ ಅಂದಿನ ಬಿ.ಜೆ.ಪಿ. ಪಕ್ಷದವರು ತಮ್ಮ ಬೆಂಬಲವನ್ನು ಪಡೆಯುವುದರ ಮುಖಾಂತರ ಆ ಮಂಡಲ್ ವರದಿಯನ್ನು ಅನುಷ್ಟಾನಕ್ಕೆ ತರುವ ವಿಚಾರದಲ್ಲಿ ಅವರು ಪ್ರಧಾನ ಮಂತ್ರಿ ಹುದ್ದೆಯನ್ನೇ ತ್ಯಾಗ ಮಾಡಿದರೆಂದು ಹೇಳಿದರೆ, ಇವತ್ತು ನಿಜಕ್ಕೂ ಹಿಂದುಳಿದ ವರ್ಗದವರಿಗೆ ಧ್ವನಿಯಾಗಿ

ಅವರಿಗೆ ಒಂದು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಾರೆ. ಅದಕ್ಕೆ ಈ ಸಭೆಯಲ್ಲಿ ಅವರಿಗೆ ಸಂತಾಪವನ್ನು ಸೂಚಿಸುತ್ತೇನೆ. ಎರಡನೆಯದಾಗಿ ನಮ್ಮ ಜಿಲ್ಲೆಯ ಲೋಕಸಭಾ ಸದಸ್ಯರಾದಂಥ ಡಿ.ಸಿ.ಶ್ರೀಕಂಠಪ್ಪನವರು ಸಜ್ಜನ ಮತ್ತು ಸರಳಜೀವಿಗಳಾಗಿದ್ದರು. ಅವರು ಖಡಾಖಂಡಿತವಾಗಿ ವಿಚಾರಗಳನ್ನು ಹೇಳುವಂಥ ವ್ಯಕ್ತಿತ್ವವನ್ನು ಹೊಂದಿದ್ದರು. ಅವರು ಚಿಕ್ಕಮಗಳೂರಿನಿಂದ ಮೂರು ಬಾರಿ ಲೋಕಸಭೆಗೆ ಜನಪ್ರತಿನಿಧಿಯಾಗಿ ಆಯ್ಕೆಯಾಗಿದ್ದರು. ಅವರು ಮುಂಗೋಪಿಯಾಗಿದ್ದರೂ ಕೂಡ ಸಾಮಾನ್ಯ ಜನರಲ್ಲಿ ಬೆರೆಯುವಂಥ ಮನೋಭಾವವನ್ನು ಇಟ್ಟುಕೊಂಡಿದ್ದರು. ಅವರು ಜನ ಪ್ರತಿನಿಧಿಯಾಗಿ ರಾಜಕಾರಣದಲ್ಲಿ ಭಾಗವಹಿಸಿದರೂ ಕೂಡ ಆಧುನಿಕ ಕೃಷಿಯನ್ನು ಅವರು ಮರೆತಿರಲಿಲ್ಲ.

ಕೇವಲ ಮೂರು ಎಕರೆ ಜಮೀನನ್ನು ಇಟ್ಟುಕೊಂಡಿದ್ದರೂ ಕೂಡ ಒಬ್ಬ ಕೃಷಿ ತಜ್ಞನಿಗಿಂತ ಹೆಚ್ಚು ವಿಚಾರವನ್ನು ತಿಳಿದುಕೊಂಡಿದ್ದರು. ಅಡಿಕೆ, ತೆಂಗು, ಮಾವು, ಹಣ್ಣಿನ ಗಿಡಗಳು ಹೀಗೆ ಒಂದು ಕೃಷಿಯ ಮಾದರಿಯನ್ನೇ ಇಟ್ಟುಕೊಂಡು ಆಧುನಿಕ ಕೃಷಿ ಪ್ರಶಸ್ತಿಯನ್ನು ಪಡೆದಂಥವರಾಗಿದ್ದರು. ಅವರು ಒಂದು ಸಾರಿ ನನ್ನ ಹತ್ತಿರ ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದರು. ಲೋಕಸಭೆಯ ಸ್ಥಾಯಿ ಸಮಿತಿಗಳಲ್ಲಿ ನೀವು ಯಾವ ಸ್ಥಾಯಿ ಸಮಿತಿಯ ಸದಸ್ಯರಾಗಬೇಕು ಎಂದು ಕೇಳಿದಾಗ ಅವರು ಆರಿಸಿಕೊಂಡಿದ್ದು ಕೃಷಿ ಸ್ಥಾಯಿ ಸಮಿತಿಯನ್ನು. ಈ ರಾಷ್ಟ್ರದ ಕೃಷಿ ಸ್ಥಾಯಿ ಸಮಿತಿಯ ಸದಸ್ಯರಾಗಿ ಅವರು ಕೃಷಿಯ ಬಗ್ಗೆ ತಮ್ಮದೇ ಆದಂಥ ವಿಚಾರವನ್ನು ಅಲ್ಲಿ ಮಂಡಿಸಿದರು. ಈ ಬಗೆಗಿನ ಒಂದು ಕಿರು ಹೊತ್ತಿಗೆಯನ್ನು ಕೂಡ ಅವರು ನನಗೆ ಕೊಟ್ಟಿದ್ದರು. ಅಂಥ ಒಬ್ಬ ಸಜ್ಜನ, ಸರಳಜೀವಿಯಾದ ಶ್ರೀಕಂಠಪ್ಪನವರು ಇವತ್ತು ನಮ್ಮನ್ನೆಲ್ಲ ಬಿಟ್ಟು ಹೋಗಿದ್ದಾರೆ. ಅಂಥ ಒಬ್ಬ ವ್ಯಕ್ತಿಯನ್ನು ಕಳೆದುಕೊಂಡು ನಮ್ಮ ಜಿಲ್ಲೆ ಬಡವಾಗಿದೆ. ಅವರನ್ನು ನೆನಪಿಸಿಕೊಳ್ಳುವಂಥ ಹಲವಾರು ಕಾರ್ಯಕ್ರಮಗಳನ್ನು ಅವರು ಮಾಡಿ ಹೋಗಿದ್ದಾರೆ. ಅವರ ನಿಧನಕ್ಕೆ ಸಂತಾಪವನ್ನು ಸೂಚಿಸುತ್ತೇನೆ. ಇವರ ಬಗ್ಗೆ ಹೆಚ್ಚು ವಿಷಯವನ್ನು ಈಗಾಗಲೇ, ಅರಕಲಗೂಡಿನ ಶಾಸಕರಾದ ಎ.ಮಂಜುರವರು ಮಾತನಾಡಿದರು.

ಇನ್ನು, ಮಾನ್ಯ ಹೆಚ್.ಎನ್.ನಂಜೇಗೌಡರ ಬಗ್ಗೆ ಹೇಳಬೇಕೆಂದರೆ, ಅದು ನನ್ನ ಅದೃಷ್ಟವೆಂದು ನಾನು ತಿಳಿದುಕೊಂಡಿದ್ದೇನೆ, ನಾನು ಮೊದಲನೇ ಸಲ ಶಾಸಕನಾದಂಥ ಸಂದರ್ಭದಲ್ಲಿ, ನಂಜೇಗೌಡರು ವಿಧಾನಸಭೆಯಲ್ಲಿ ಡಿಬೇಟ್ಸ್‌ನಲ್ಲಿ ಭಾಗವಹಿಸುತ್ತಾರೆ ಎಂದರೆ, ಅದು ನಾವೆಲ್ಲರೂ ಕುಳಿತು ಕೇಳುವಂಥ ಡಿಬೇಟ್

ಆಗಿರುತ್ತಿತ್ತು. ಅವರು ತಮ್ಮ ವಿಚಾರವನ್ನು, ವಿಚಾರವಂತಿಕೆಯನ್ನು ಸಭೆಯಲ್ಲಿ ಪ್ರಸ್ತಾಪ ಮಾಡುತ್ತಿದ್ದರು. ಅದು ನೀರಾವರಿ ವಿಚಾರ ಇರಬಹುದು, ಕೃಷಿಯ ವಿಚಾರ ಇರಬಹುದು, ಕೈಗಾರಿಕೆಗಳಿಗೆ ಸಂಬಂಧಪಟ್ಟ ವಿಚಾರವಿರಬಹುದು, ಯಾವುದೇ ವಿಚಾರವಿರಬಹುದು, ಅವರು ಮಾತನಾಡುತ್ತಾ ಇದ್ದರೆ ಯಾವುದೇ ಒಂದು ಕಾನೂನಿನ ಚೌಕಟ್ಟಿನಲ್ಲಿ ಯಾವ ರೀತಿಯ ಆದೇಶವನ್ನು ತರಬಹುದು ಎನ್ನುವ ವಿಚಾರವನ್ನು ಅವರು ವಿಧಾನಸಭೆಯಲ್ಲಿ ಪ್ರಸ್ತಾಪ ಮಾಡುತ್ತಿದ್ದರು. ವಿಧಾನಸಭೆಯಲ್ಲಿ ನ್ಯಾಯಾಲಯದ ಬಗ್ಗೆ ಪ್ರಸ್ತಾಪ ಮಾಡಿದಂಥ ವ್ಯಕ್ತಿ ಯಾರಪ್ಪಾ ಎಂದರೆ ಅವರು ಹೆಚ್.ಎನ್.ನಂಜೇಗೌಡರು. ಅವರು ಅದನ್ನು ಏಕೆ ಪ್ರಸ್ತಾಪ ಮಾಡಿದರು ಎಂದರೆ, ನ್ಯಾಯಾಂಗ ದೊಡ್ಡದೋ, ಶಾಸಕಾಂಗ ದೊಡ್ಡದೋ ಎನ್ನುವ ವಿಚಾರದಲ್ಲಿ, ಶಾಸಕಾಂಗ ದೊಡ್ಡದು ಎನ್ನುವುದನ್ನು ಅವರು, ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ಕಾನೂನಿನ ಚೌಕಟ್ಟಿನಲ್ಲಿ, ನಮ್ಮ ಸಂವಿಧಾನದಲ್ಲಿ ಏನು ನಿರೂಪಿಸಿದ್ದಾರೆ ಅದನ್ನು ಸಭೆಯಲ್ಲಿ ನಿರೂಪಿಸಿ, ಅವರ ವ್ಯಕ್ತಿತ್ವಕ್ಕೆ ಮೆರುಗನ್ನು ಕೊಟ್ಟಿದ್ದರು. ರಾಜ್ಯದ ನೀರಾವರಿ ಬಗ್ಗೆ ಅವರು ಬಹಳ ಉತ್ಸುಕರಾಗಿದ್ದರು, ಅದರ ಬಗ್ಗೆ ಹೆಚ್ಚು ವಿಚಾರಗಳನ್ನು ತಿಳಿದುಕೊಂಡಿದ್ದರು ಎಂದು ಹೇಳಿದರೆ ತಪ್ಪಾಗಲಿಕ್ಕಿಲ ಎಂದು ನಾನು ಭಾವಿಸಿಕೊಂಡಿದ್ದೇನೆ.

ಇನ್ನು, ಶ್ರೀ ಮಿರಾಜುದ್ದೀನ್ ಎನ್ ಪಟೇಲ್‌ರವರು ನನ್ನ ಆತ್ಮೀಯ ಸ್ನೇಹಿತರು. ನಾವೆಲ್ಲ ಒಂದೇ ಸಾರಿ ವಿಧಾನಸಭೆಗೆ ಆಯ್ಕೆಯಾಗಿದ್ದು, ಜೊತೆಯಲ್ಲಿದ್ದೆವು. ಅವರು ಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ಅವರು ಶಾಸಕರಿಗೆ ನೀಡುತ್ತಿದ್ದಂಥ ಗೌರವ, ಕಾರ್ಯಕ್ರಮಗಳ ಬಗ್ಗೆ ಅವರು ತೋರಿಸುತ್ತಿದ್ದಂಥ ಗೌರವವನ್ನು ನೋಡಿದರೆ ಹೆಮ್ಮೆಯೆನಿಸುತ್ತಿತ್ತು. ಅವರು ಅತ್ಯಂತ ಚಿಕ್ಕ ವಯಸ್ಸಿನಲ್ಲಿಯೇ ನಮ್ಮನ್ನೆಲ್ಲಾ ಬಿಟ್ಟು ಹೋಗಿದ್ದಾರೆ. ಅವರು ನಮ್ಮೆಲ್ಲರ ಆತ್ಮೀಯರಾಗಿ, ವಿಧಾನಸಭೆಯ ಜನಪ್ರತಿನಿಧಿಯಾಗಿ ಕಾರ್ಯವನ್ನು ನಿರ್ವಹಿಸಿದಂಥ ವ್ಯಕ್ತಿಯಾಗಿದ್ದರು.

ಇನ್ನು, ಪ್ರೊಫೆಸರ್ ಎ. ಲಕ್ಷ್ಮೀಸಾಗರ್‌ರವರ ಬಗ್ಗೆ ನಾವು ಹೇಳುವುದಾದರೆ, ವಾಕ್ಚಾತುರ್ಯದಲ್ಲಿ ವಿದ್ಯಾಮಾತೆ, ಶಾರದಾಮಾತೆ ಅವರ ನಾಲಿಗೆಯಲ್ಲಿ ನೆಲೆಸಿದ್ದಳು. ಸುರೇಶ್‌ಕುಮಾರ್‌ರವರು ಹೇಳಿದ ಹಾಗೆ, ನಾನೂ ಕೂಡ ರೇಣುಕಾಚಾರ್ಯ ಲಾ ಕಾಲೇಜಿನಲ್ಲಿ ಲಾ ವ್ಯಾಸಂಗವನ್ನು ಮಾಡುವಂಥ ಸಂದರ್ಭದಲ್ಲಿ ಕೆಲವೊಂದು ಹಿಂದೂ ಲಾ ವಿಚಾರಗಳನ್ನು ಪ್ರಸ್ತಾಪ ಮಾಡಬೇಕಾದರೆ, ನಮ್ಮ ಸಾಮಾಜಿಕ ಬದುಕಿಗೆ ಕಾನೂನು

ಎಷ್ಟು ಅವಶ್ಯಕ ಎನ್ನುವುದನ್ನು ವಿಚಾರಪೂರಕವಾಗಿ, ವಿದ್ಯಾರ್ಥಿಗಳಿಗೆ ಅರ್ಥವಾಗುವಂಥ ರೀತಿಯಲ್ಲಿ ಅವರು ಪಾಠಪ್ರವಚನಗಳನ್ನು ಮಾಡುತ್ತಿದ್ದರು.

ಹಾಗೆಯೇ, ಇಲ್ಲಿ ಪ್ರತಿನಿಧಿಸಿದ್ದಂಥ ಇನ್ನು ಇತರ ಬೇರೆಬೇರೆ ಹಿರಿಯ ಶಾಸಕರು ನಮ್ಮನ್ನು ಅಗಲಿ ಹೋಗಿದ್ದಾರೆ. ಇದರಿಂದ ಏನು ಅನ್ನಿಸುತ್ತದೆ ಎಂದರೆ "ಸಾವು ನಿಶ್ಚಯ, ಹುಟ್ಟು ಆಕಸ್ಮಿಕ", ನಾವೆಲ್ಲರೂ ಇಲ್ಲಿ ಹುಟ್ಟಿದ್ದೇವೆ, ನಾವು ನಮ್ಮ ದೇಶಕ್ಕಾಗಲೀ, ರಾಜ್ಯಕ್ಕಾಗಲೀ, ನಮ್ಮದೇ ಆದಂಥ ಕೊಡುಗೆಯನ್ನು ನೀಡಬೇಕು. ಜನ ನಮಗೆ ಏನು ನಮಗೆ ಸೇವೆ ಮಾಡಲು ಅವಕಾಶ ಮಾಡಿಕೊಟ್ಟಿದ್ದಾರೆ, ಇಂಥ ಸಂದರ್ಭದಲ್ಲಿ ಅದನ್ನು ಮಾಡಿ ಹೋಗಬೇಕು ಎನ್ನುವುದನ್ನು ವ್ಯಕ್ತಿಗಳು ಮಾಡಿ ತೋರಿಸಿದ್ದಾರೆ, ನಮಗೆ ಆದರ್ಶವನ್ನು ಬಿಟ್ಟು ಹೋಗಿದ್ದಾರೆ, ಆ ಆದರ್ಶವನ್ನು ನಾವು ಇಟ್ಟುಕೊಂಡು ನಾವು ಈ ನಾಡನ್ನು ಕಟ್ಟೋಣ, ಈ ದೇಶವನ್ನು ಮಹಾನ್ ದೇಶವನ್ನಾಗಿ ಮಾಡೋಣ ಎಂದು ಹೇಳಿ, ನನ್ನ ಈ ಒಂದು ವಿಚಾರವನ್ನು ಸಭೆಯಲ್ಲಿ ಮಂಡಿಸಿ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ನಾರಾಯಣಸ್ವಾಮಿ (ಬಂಗಾರುಪೇಟೆ) :- ಮಾನ್ಯ ಸಭಾಧ್ಯಕ್ಷರೇ, ತಾವು ತಂದಿರುವ ಈ ಸಂತಾಪ ಸೂಚನಾ ನಿರ್ಣಯದಲ್ಲಿ ಪಾಲ್ಗೊಂಡು ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಮಾಜಿ ಪ್ರಧಾನಿಗಳಾಗಿದ್ದಂಥ ಸನ್ಮಾನ್ಯ ವಿಶ್ವನಾಥ್ ಪ್ರತಾಪ್ ಸಿಂಗ್‌ರವರ ಬಗೆಗಿನ ಸಂತಾಪ ಸೂಚನೆಯಲ್ಲಿ ನಾನೂ ಕೂಡ ಪಾಲ್ಗೊಂಡಿದ್ದೇನೆ. ಸನ್ಮಾನ್ಯ ವಿಶ್ವನಾಥ್ ಪ್ರತಾಪ್ ಸಿಂಗ್‌ರವರು ಈ ದೇಶದ ಪ್ರಧಾನ ಮಂತ್ರಿಗಳಾಗಿ ಈ ದೇಶಕ್ಕೆ ಕೊಟ್ಟಿರತಕ್ಕಂಥ ಅಪಾರ ಕೊಡುಗೆಯನ್ನು ನಾವು ನೆನೆಸಿಕೊಳ್ಳಬೇಕಾಗುತ್ತದೆ. ಒಂದು ರಾಜಮನೆತನದಲ್ಲಿ ಹುಟ್ಟಿರತಕ್ಕಂಥ ವಿಶ್ವನಾಥ್ ಪ್ರತಾಪ್ ಸಿಂಗ್‌ರವರು ಕೇಂದ್ರದ ಮಂತ್ರಿಗಳಾಗಿದ್ದು, ಒಂದು ಪಕ್ಷ ಉದಯವಾದ ಒಂದು ವರ್ಷದೊಳಗೆ ಪ್ರಧಾನ ಮಂತ್ರಿಗಳಾದಂಥಾದ್ದು ಐತಿಹಾಸಿಕವಾಗಿರತಕ್ಕಂಥ ವಿಷಯ. ಮಂಡಲ್ ಕಮೀಷನ್‌ಅನ್ನು ನೇಮಕ ಮಾಡಿ ಸುಮಾರು 20 ವರ್ಷಗಳು ಕಳೆದಿತ್ತು. ಲೋಕಸಭೆಯಲ್ಲಿ ಮಂಡಲ್ ಕಮೀಷನ್ನಿನ ವರದಿ ಧೂಳು ಹಿಡಿದು ಕುಳಿತಿದ್ದಂಥ ಸಂದರ್ಭದಲ್ಲಿ ಅವರು ರಾಜಕೀಯ ಇಚ್ಛಾಶಕ್ತಿಯ ಆಧಾರದ ಮೇಲೆ ಒಂದು ನಿರ್ಣಯವನ್ನು ತೆಗೆದುಕೊಂಡು ಮಂಡಲ್ ಕಮೀಷನ್ ವರದಿಯನ್ನು ಜಾರಿ ಮಾಡುತ್ತಾರೆ. ಆಗ ಕೇಂದ್ರದಲ್ಲಿ ಪ್ರತಿಪಕ್ಷವಾಗಿದ್ದರೂ, ಅವರಿಗೆ ಬೆಂಬಲವನ್ನು

ಕೊಟ್ಟಿದ್ದಂಥ ಭಾರತೀಯ ಜನತಾ ಪಕ್ಷದವರು ಅವರಿಗೆ ನೀಡಿದ್ದ ಬೆಂಬಲವನ್ನು ಹಿಂಪಡೆದುಕೊಳ್ಳುತ್ತಾರೆ. ಭಾರತೀಯ ಜನತಾ ಪಕ್ಷ ಕೂಡ ರಾಜಕೀಯವಾಗಿ ಪ್ರಬಲವಾಗಬೇಕಾದರೆ, ಬರೀ ನಾಲ್ಕು ಲೋಕಸಭಾ ಸ್ಥಾನಗಳನ್ನು ಹೊಂದಿದ್ದಂಥ ಅವರು 89 ಸ್ಥಾನಗಳನ್ನು ಗೆಲ್ಲಬೇಕಾದರೂ ಕೂಡ ಸನ್ಮಾನ್ಯ ವಿಶ್ವನಾಥ್ ಪ್ರತಾಪ್ ಸಿಂಗ್‌ರವರೇ ಕಾರಣ ಎನ್ನತಕ್ಕಂಥಾದ್ದೂ ಕೂಡ ನಾವು ಇತಿಹಾಸದಲ್ಲಿ ನೋಡಿರತಕ್ಕಂಥ ವಿಷಯ. ಸನ್ಮಾನ್ಯ ವಿಶ್ವನಾಥ್ ಪ್ರತಾಪ್ ಸಿಂಗ್‌ರವರು ಸ್ಥಾಪನೆ ಮಾಡಿದಂಥ ಜನತಾದಳದಲ್ಲಿ 1989ರಲ್ಲಿ ವಿಧಾನಸಭಾ ಶಾಸಕನಾಗಿ ಆಯ್ಕೆಯಾಗುವಂಥ ಭಾಗ್ಯ ನನ್ನದಾಗಿತ್ತು. ಅವರು ಪ್ರಧಾನ ಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ಕೋಲಾರಕ್ಕೆ ಭೇಟಿ ಕೊಟ್ಟಿದ್ದರು. ಜಾಲಪ್ಪನವರ ದೇವರಾಜ ಅರಸು ಮೆಡಿಕಲ್ ಕಾಲೇಜಿಗೆ ಕಾರ್ಯಕ್ರಮಕ್ಕಾಗಿ ಅವರು ಬಂದಿದ್ದಂಥ ಸಂದರ್ಭದಲ್ಲಿ ನಮ್ಮ ಜಿಲ್ಲೆಯಲ್ಲಿ ಜನತಾದಳವನ್ನು ಪ್ರತಿನಿಧಿಸುತ್ತಿದ್ದಂಥ ಏಕೈಕ ಶಾಸಕನಾಗಿದ್ದೆ. ಆಗ ಅವರ ಜೊತೆ ನಾನೂ ಕೂಡ ಆ ಸಮಾರಂಭದಲ್ಲಿ ಪಾಲ್ಗೊಳ್ಳುವಂಥ ಭಾಗ್ಯ ನನ್ನದಾಗಿತ್ತು. ತರುವಾಯ ಅವರು ಮಾಜಿ ಪ್ರಧಾನಿಗಳಾದ ಮೇಲೆ ನಮ್ಮ ಕೋಲಾರ ಜಿಲ್ಲೆಗೆ ಭೇಟಿಯನ್ನು ಕೊಟ್ಟಿದ್ದರು. ಚಿಕ್ಕಬಳ್ಳಾಪುರ, ಕೋಲಾರ, ದೊಡ್ಡಬಳ್ಳಾಪುರ, ತುಮಕೂರು ಮಾರ್ಗವಾಗಿ ಬಂದಿದ್ದರು. ಈ ಎರಡು ಬಾರಿಯೂ ಕೂಡ ಅವರ ಜೊತೆಯಲ್ಲಿ ನಾನು ಪ್ರವಾಸವನ್ನು ಮಾಡಿದ್ದೆ. ಹಾಗಾಗಿ, ಇವತ್ತು ಅಧಿಕಾರ ಎಷ್ಟು ದಿನ ಮುಖ್ಯ ಎನ್ನುವುದಲ್ಲ. ಅವರು ಎಷ್ಟು ಕಡಿಮೆ ಅವಧಿಯಲ್ಲಿ ಅಂದರೆ ಸುಮಾರು ಹತ್ತು ತಿಂಗಳ ಒಳಗಾಗಿ ಇಡೀ ದೇಶದ ಗಮನವನ್ನು ಸೆಳೆದ ವರ್ಣ ರಂಜಿತ ವ್ಯಕ್ತಿತ್ವವನ್ನು ಹೊಂದಿದ್ದಂಥ ಸನ್ಮಾನ್ಯ ವಿಶ್ವನಾಥ್ ಪ್ರತಾಪ್ ಸಿಂಗ್‌ರವರ ನಿಧನದಿಂದ ಈ ನಮ್ಮ ದೇಶಕ್ಕೆ ಮತ್ತು Backward Classes ಸಮುದಾಯವೇನಿತ್ತು, ಆ ಸಮುದಾಯಕ್ಕೆ ಮತ್ತು ಸಾಮಾನ್ಯ ಮನುಷ್ಯನಿಗೂ ಕೂಡ ಮರೆಯಲಾರದಂಥ ಒಂದು ನೋವು ಉಂಟಾಗಿದೆ. ಮಂಡಲ್ ಕಮೀಷನ್ ವರದಿ ಮುಖಾಂತರ ಹಿಂದುಳಿದ ವರ್ಗಗಳ ಬಗ್ಗೆ, ಸನ್ಮಾನ್ಯ ದೇವರಾಜ ಅರಸೂರವರು ಯಶಸ್ವಿಯಾದ ಮೇಲೆ ಬಿಹಾರದಲ್ಲಿ ಕರ್ಪೂರಿ ಠಾಕೂರ್‌ರವರು ಮಂಡಲ್ ಕಮೀಷನ್ನಿನ ವರದಿಯಂತೆ ಹಿಂದುಳಿದ ವರ್ಗಗಳ ಆಯೋಗವನ್ನು ಮಾಡಲು ಒಂದು ಪ್ರಯೋಗವನ್ನು ಮಾಡುತ್ತಾರೆ. ಆದರೆ ಅವರು ಅಧಿಕಾರವನ್ನು ಕಳೆದುಕೊಳ್ಳುತ್ತಾರೆ. ಹಾಗಾಗಿ ಉತ್ತರ ಭಾರತದಲ್ಲಿ ಹಿಂದುಳಿದ ವರ್ಗಗಳ ಆಯೋಗಗಳ ಬಗ್ಗೆ ವಿರೋಧವಿದ್ದರೂ ಕೂಡ ಮಂಡಲ್ ಕಮೀಷನ್ ವರದಿಯನ್ನು ಜಾರಿಗೆ ಕೊಟ್ಟಿರತಕ್ಕಂಥ ಧೀಮಂತ ನಾಯಕತ್ವ

ಸನ್ಮಾನ್ಯ ವಿಶ್ವನಾಥ ಪ್ರತಾಪ್ ಸಿಂಗ್‌ರವರದ್ದು. ಹಾಗಾಗಿ ಅವರ ಸಾವಿನಿಂದ ಇಡೀ ನಮ್ಮ ದೇಶಕ್ಕೇ ಅನ್ಯಾಯವಾಗಿದೆ ಎನ್ನತಕ್ಕಂಥಾದ್ದರಲ್ಲಿ ಎರಡು ಮಾತಿಲ್ಲ. ಆದ್ದರಿಂದ ಅವರ ಸಂತಾಪ ಸೂಚನೆಯಲ್ಲಿ ನಾನೂ ಕೂಡ ಪಾಲ್ಗೊಂಡಿದ್ದೇನೆ.

ಇನ್ನು, ಪ್ರೊಫೆಸರ್ ಎ ಲಕ್ಷ್ಮೀಸಾಗರ್‌ರವರು ಕೋಲಾರ ಜಿಲ್ಲೆಯ ಗುಡಿಬಂಡೆ ತಾಲ್ಲೂಕಿನಲ್ಲಿ ಹುಟ್ಟಿರತಕ್ಕಂಥವರು. ನನಗೂ ಅವರಿಗೂ 1989ರಿಂದ ಸ್ವಲ್ಪ ನಂಟಿತ್ತು. 1994ರಲ್ಲಿ ನಾನು ಎರಡನೇ ಬಾರಿಗೆ ಶಾಸಕನಾದ ಮೇಲೆ, ಅವರ ಕಛೇರಿಗೆ ಆಗ ಸಚಿವರಾಗಿದ್ದಂಥ ಸನ್ಮಾನ್ಯ ಕೆ.ಎಂ.ಕೃಷ್ಣಾರೆಡ್ಡಿಯವರು ಕರೆದುಕೊಂಡು ಹೋದರು. ಅವರು ಒಂದು ಸಾಮಾನ್ಯ ತುಂಡು ಪಂಚೆಯನ್ನು ಕಟ್ಟಿದ್ದರು. ಅವರ ಮುಂದೆ ಒಂದು ಟೇಬಲ್ ಇತ್ತು.

ನೋಡಯ್ಯ ನಿನಗೂ ಅವರಿಗೂ ಎಷ್ಟು ವ್ಯತ್ಯಾಸವಿದೆ? ನೀನೇನೋ ದೊಡ್ಡ ಶೂ ಧರಿಸಿದ್ದೀಯ, ಆ ಮನುಷ್ಯ ಎಷ್ಟು ಹಿರಿಯ ಶಾಸಕರಾಗಿ, ಹಿರಿಯ ಮಂತ್ರಿಯಾಗಿದ್ದರೂ ಕೂಡ ಅವರಿಗೆ ಎಷ್ಟು ಸೌಜನ್ಯವಿದೆ ನೋಡು ಎನ್ನುವ ಮಾತನ್ನು ನನಗೆ ಹೇಳಿದರು. ಹಾಗಾಗಿ, ಹಿಂದೆ ಅವಿಭಾಜ್ಯ ಕೋಲಾರ ಜಿಲ್ಲೆಯಲ್ಲಿ ಅವರೇನು ಹುಟ್ಟಿದ್ದರು ಈಗ ಆ ಸ್ಥಳ ಚಿಕ್ಕಬಳ್ಳಾಪುರ ಜಿಲ್ಲೆಗೆ ಸೇರಿದೆ. ಪ್ರೊ. ಲಕ್ಷ್ಮೀಸಾಗರ್‌ರವರು ನಮ್ಮನ್ನು ಅಗಲಿರುವುದು ನಮಗೆ ನೋವು ಉಂಟು ಮಾಡಿದೆ. ನಾನು ಎರಡನೇ ಬಾರಿಗೆ 1994ರಲ್ಲಿ ಶಾಸಕನಾಗಿ ಆರಿಸಿ ಬಂದಮೇಲೆ ಬಿಡಿಎ ಸೈಟ್ ವಿಚಾರದಲ್ಲಿ ಒಂದು ಚರ್ಚೆ ಬಂತು. ಆಗ ಮಾನ್ಯ ಹೆಚ್.ಎನ್.ನಂಜೇಗೌಡರು ಸುಮಾರು 2 ಗಂಟೆ ಕಾಲ ಭಾಷಣ ಮಾಡಿದರು. ಅವರದೇ ಆದ ವ್ಯಕ್ತಿತ್ವದಲ್ಲಿ ಅವರದೇ ಆದ ಶೈಲಿಯಲ್ಲಿ ಮಾತನಾಡಿ ವಿಧಾನಸಭೆಯಲ್ಲಿ ಗಮನ ಸೆಳೆದರು. ಜೊತೆಗೆ ಅವರು ನೀರಾವರಿ ತಜ್ಞರಾಗಿದ್ದರು. ಆಗ ಸನ್ಮಾನ್ಯ ಡಿ.ಬಿ.ಚಂದ್ರೇಗೌಡರು ವಿರೋಧ ಪಕ್ಷದ ನಾಯಕರಾಗಿದ್ದರು. ಆಗ ನಂಜೇಗೌಡರು ಕುಳಿತು ನದಿ ನೀರಿನ ಹಂಚಿಕೆ ಕುರಿತಾಗಿ ಇದನ್ನು ಯಾವ ರೀತಿಯಾಗಿ ಮಾಡಬೇಕೆನ್ನುವುದರ ಬಗ್ಗೆ ಒಂದು ನಕಲನ್ನು ನನಗೆ ಕೊಟ್ಟಿದ್ದಾರೆ, ಅವರ ಹತ್ತಿರ ಏನೇನು ದಾಖಲೆಗಳಿದ್ದವು, ಅದನ್ನು ನಾರಾಯಣಸ್ವಾಮಿಯವರೆ ನೀವು ಓದಿ ಎಂದು ನನಗೆ ಕೊಟ್ಟಿದ್ದರು. ಆ ದಾಖಲೆ ನನ್ನ ಹತ್ತಿರ ಇದೆ. ಅದಕ್ಕಾಗಿ, ಅವರು ಅಗಲಿರುವುದು ಕೂಡ ನಮಗೆ ನೋವಾಗಿದೆ. ಶ್ರೀ ಮೆರಾಜುದ್ದೀನ್ ಪಟೇಲ್‌ರವರು 1994ರಲ್ಲಿ ಪ್ರಥಮ ಬಾರಿಗೆ ಆರಿಸಿ ಬಂದಿದ್ದರು. ನಾನು ಆ ಸಲ ಎರಡನೇ ಬಾರಿಗೆ ವಿಧಾನಸಭೆಗೆ ಆರಿಸಿ ಬಂದಿದ್ದೆ. ಅವರು ಸಚಿವರಾಗಿದ್ದರು. ಅವರ ವ್ಯಕ್ತಿತ್ವ ಎಷ್ಟು ಸುಂದರವಾಗಿತ್ತೆಂದರೆ, Minister ಎಂದರೆ,

ನಾವು ಅವರ ಹತ್ತಿರ ಹೋದಾಗ ನಾರಾಯಣಸ್ವಾಮಿಯವರೆ, ನೋಡಿ, ನಮ್ಮ ಜಿಲ್ಲೆ ಈ ರೀತಿ ಇದೆ, ನಿಮ್ಮ ಜಿಲ್ಲೆ ಬಗ್ಗೆ ಏನಾದರೂ ಮಾತನಾಡಿ ಎಂದು ಹೇಳುತ್ತಿದ್ದರು. ಹಾಗಾಗಿ, ಅವರು ಇವತ್ತು ನಮ್ಮನ್ನು ಅಗಲಿದ್ದಾರೆ. ಮಾನ್ಯ ಡಿ.ಕೆ. ಶಿವಕುಮಾರ್‌ರವರು, ಗುರುಪಾದಪ್ಪ ನಾಗಮಾರಪಳ್ಳಿಯವರು ಅನೇಕ ವಿಷಯಗಳನ್ನು ಪ್ರಸ್ತಾಪಿಸಿದ್ದಾರೆ. ಆದರೆ, ಮಾನ್ಯ ಮುಖ್ಯಮಂತ್ರಿಯವರಲ್ಲಿ ವಿನಂತಿ ಮಾಡುವುದು ಇಷ್ಟೆ, ಅನೇಕ ಶಾಸಕರ ವಿಷಯದಲ್ಲಿ ಹೇಳುವುದಾದರೆ, ನಾನು 1989ರಿಂದ ಶಾಸನಸಭೆಗೆ ಆರಿಸಿ ಬಂದಾಗಿನಿಂದ ಅನೇಕ ಪ್ರಸ್ತಾವನೆಗಳು ಬಂದಿವೆ. ಮಾತನಾಡುವ ಸಂದರ್ಭದಲ್ಲಿ ಅಗಲಿದವರಿಗೆ ಸಂತಾಪ ಸೂಚಿಸುತ್ತೇವೆ, ಎರಡು ಮಾತು ಮಾತನಾಡಿ ಒಂದು ಶಾಸ್ತ್ರವನ್ನು ಮುಗಿಸುತ್ತೇವೆ. ಆದರೆ, ಶಾಸಕರು ಆಗಿರತಕ್ಕಂತ ಅನೇಕ ಜನರು ಕಷ್ಟದಲ್ಲಿದ್ದಾರೆ. ಶಾಸಕರ ನಿಧಿ ಮಾಡಬೇಕೆಂದು ಹಿಂದೆ ಶಾಸಕರಾಗಿದ್ದ ವಾಟಾಳ್ ನಾಗರಾಜ್, ಶ್ರೀರಾಮರೆಡ್ಡಿ, ರಾಜೇಂದ್ರನ್‌ರವರು ಅನೇಕ ಸಲ ಸರ್ಕಾರವನ್ನು ಒತ್ತಾಯಿಸಿದ್ದರು. ಶಾಸಕರಿಗೆ ಒಂದು ನಿಧಿ ಮಾಡಿ, ಎಲ್ಲಾ ಶಾಸಕರಿಂದ ಪ್ರತಿ ತಿಂಗಳು ವಂತಿಗೆಯನ್ನು ವಸೂಲಿ ಮಾಡಿ ಆ ಹಣವನ್ನು ಸೇರಿಸಿ ಒಂದು ನಿಧಿ ಮಾಡಿ, ಯಾವ ಶಾಸಕರು ಕಷ್ಟದಲ್ಲಿದ್ದಾರೆ ಅವರಿಗೆ ಸಹಾಯ ಮಾಡಬೇಕೆನ್ನುವ ಚಿಂತನೆ ನಡೆಯುತ್ತಿದೆ. ಅದು ಕಾರ್ಯಗತವಾಗಿಲ್ಲ. ಒಂದು ನೋವಿನ ಸಂಗತಿ ಏನೆಂದರೆ, ಸಾಮಾನ್ಯ ಜನರಲ್ಲಿ ನಾವು ಶಾಸಕರಾಗಿದ್ದೇವೆಂದರೆ ಸಾಕು, ಅವರ ಹತ್ತಿರ ಬೇಕಾದಷ್ಟು ದುಡ್ಡು ಇದೆ ಎನುವ ಕಲ್ಪನೆ ಇದೆ. ಯಾವುದಾದರೂ ಹಳ್ಳಿಗೆ ಪ್ರವಾಸ ಹೋದಾಗ ನಮ್ಮ ಹತ್ತಿರ ದುಡ್ಡು ಇದೆ ಎಂದು, ಸ್ವಾಮಿ ನಮಗೆ ದೇವಸ್ಥಾನಕ್ಕೆ ಹಣ ಕೊಡಿ ಎಂದು ಕೇಳುತ್ತಾರೆ. ನಾವು ಆರಾಧನಾ ಯೋಜನೆಯಲ್ಲಿ ಕೊಡುತ್ತೇವೆಂದರೆ, ಬೇಡ, ನಮಗೆ ನಿಮ್ಮ ಸ್ವಂತ ಹಣದಲ್ಲಿ ಕೊಡಿ ಎಂದು ಕೇಳುತ್ತಾರೆ. ನಾವು, ಒಂದು ಸಾವಿರವೋ, ಎರಡು ಸಾವಿರವೋ ಕೊಡೋಣವೆಂದರೆ, ಬೇಡ, 10 ಸಾವಿರ, 25 ಸಾವಿರ ರೂ. ಕೊಡಬೇಕೆಂದು ಕೇಳುವ ಪರಿಸ್ಥಿತಿ ಇದೆ. ಸಾಮಾನ್ಯ ಮನುಷ್ಯನಿಗೆ ಅನೇಕ ಕಲ್ಪನೆಗಳು ಬಂದಿವೆ. ಒಬ್ಬ ಎಂಎಲ್‌ಎ ಎಂದರೆ ಅವರದೇ ಆದ ಕಲ್ಪನೆ ಅವರಿಗೆ ಇದೆ. ನಾನು 1989ರಲ್ಲಿ ಶಾಸಕನಾಗಿ ಆರಿಸಿ ಬಂದಾಗ ಯಾವ ಪರಿಸ್ಥಿತಿ ಇತ್ತು ಮತ್ತು ಈಗಿನ ಪರಿಸ್ಥಿತಿಗೆ ಅದನ್ನು ಹೋಲಿಸಿದಾಗ ಬಹಳ ಜನರಿಗೆ ಎಂಎಲ್‌ಎ ಎಂದರೆ, ಅವರು ಬೇಕಾದಷ್ಟು ಹಣ ಹೊಡೆಯುತ್ತಾರೆ, ಅವರ ಹತ್ತಿರ ಬೇಕಾದಷ್ಟು ದುಡ್ಡು ಇದೆ ಎನ್ನುವ ಕೆಟ್ಟ ಕಲ್ಪನೆ ಜನರಲ್ಲಿದೆ. ಆದ್ದರಿಂದ, ನಾನು ಹೇಳುತ್ತಿರುವುದು ಸರ್ಕಾರ ಒತ್ತಾಯಪೂರ್ವಕವಾಗಿ ಮನ್ನಣೆ ಮಾಡಬೇಕು. ಶಾಸಕರ ನಿಧಿಯನ್ನು ತಾವು ಮಾಡಬೇಕೆನ್ನುವ

ಪ್ರಸ್ತಾವನೆಯನ್ನು ಮುಂದಿಡುತ್ತೇನೆ. ಜೊತೆಗೆ ಮಹನೀಯರಾದ ವಿಶ್ವನಾಥ್ ರೆಡ್ಡಿ ಮುದ್ನಾಳ್‌ರವರು ನಾನು ಜೊತೆಯಲ್ಲಿ ಕೆಲಸ ಮಾಡಿದ್ದೇವೆ. ಅವರ ಸಾವು ಕೂಡ ಇಡೀ ರಾಜ್ಯಕ್ಕೆ ತುಂಬಲಾರದ ನಷ್ಟವಾಗಿದೆ. ನಾನು ಪ್ರಥಮ ಬಾರಿಗೆ 1989 ರಲ್ಲಿ ಶಾಸಕನಾಗಿ ಆರಿಸಿ ಬಂದಮೇಲೆ ಸನ್ಮಾನ್ಯ ಯಂಕನಾಯಕ್‌ರವರು ಮತ್ತು ನಾನೂ ಕೂಡ ಕಮಿಟಿಯ ಮೂಲಕ ಪ್ರವಾಸ ಕೈಗೊಂಡಿದ್ದೆವು. ಅವರು ಒಳ್ಳೆಯ ವ್ಯಕ್ತಿತ್ವ ಹೊಂದಿದ್ದರು. ಸನ್ಮಾನ್ಯ ಆಂಜಿನಪ್ಪ ಮತ್ತು ಎಂ.ಶ್ರೀನಿವಾಸ್, ಮಾಣಿಕ್‌ರಾವ್ ಪುಲೇಕರ್ ಮತ್ತು ಇನ್ನಿತರ ಮಹನೀಯರ ಸಾವು ನಮ್ಮ ರಾಜ್ಯಕ್ಕೆ ಭರಿಸಲಾರದ ನೋವನ್ನುಂಟು ಮಾಡಿದೆ. ತಾವೇನು ಸಂತಾಪ ಸೂಚಕ ನಿರ್ಣಯ ಮಂಡಿಸಿದ್ದೀರಿ ಅದಕ್ಕೆ ನನ್ನ ಸಹಮತ ವ್ಯಕ್ತಪಡಿಸುತ್ತಾ ಅಗಲಿದ ವ್ಯಕ್ತಿಗಳಿಗೆ ಸಂತಾಪ ಸೂಚಿಸುತ್ತೇನೆ. ಮುಂಬೈನಲ್ಲಿ ನಡೆದ ದುರ್ಘಟನೆ ಮರುಕಳಿಸದ ರೀತಿಯಲ್ಲಿ ನಮ್ಮ ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ ಎಚ್ಚೆತ್ತುಕೊಂಡು ಇಡೀ ದೇಶ ಒಟ್ಟಾಗಿ ಭಯೋತ್ಪಾದನೆಯನ್ನು ನಿರ್ಮೂಲನೆ ಮಾಡಬೇಕು. ಎಲ್ಲೆಲ್ಲಿ ಭಯೋತ್ಪಾದನೆ ಇದೆ ಅದನ್ನು ಕಂಡುಹಿಡಿದು ನಾಶ ಮಾಡುವ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಬೇಕೆಂದು ಹೇಳುತ್ತೇನೆ. ಅಗಲಿದ ವ್ಯಕ್ತಿಗಳ ಕುಟುಂಬ ವರ್ಗದವರಿಗೆ ಮತ್ತು ಸಾಮಾನ್ಯ ಜನರಿಗೆ ಭಗವಂತ ಧೈರ್ಯವನ್ನು ಕೊಡಲಿ ಎಂದು ಹೇಳುತ್ತಾ, ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವೈ.ಎನ್. ರುದ್ರೇಶಗೌಡ (ಹಾಸನ) :- ನಮ್ಮ ರಾಷ್ಟ್ರದ, ನಮ್ಮ ರಾಜ್ಯದ ನಾಯಕರು ಅಗಲಿದ್ದಾರೆ. ಅವರ ಬಗ್ಗೆ ನಾನು ಸ್ವಲ್ಪ ಮಾತನಾಡಲಿಕ್ಕೆ ಇಷ್ಟಪಡುತ್ತೇನೆ. ಶ್ರೀ ವಿ.ಪಿ.ಸಿಂಗ್‌ರವರು ನಮ್ಮ ಭಾರತ ದೇಶದ ಪ್ರಧಾನ ಮಂತ್ರಿಗಳಾಗಿದ್ದರು. ಅವರದೇ ಆದ ಶೈಲಿಯಲ್ಲಿ ಆಡಳಿತವನ್ನು ನಡೆಸಿದ್ದರು. ಹಾಗಾಗಿ, ಭಾರತ ದೇಶ ಅವರನ್ನು ನೋಡತಕ್ಕಂಥದ್ದು ಇದೆ. ಕಾರಣವೇನೆಂದರೆ, ಅವರ ಶೈಲಿ ಆ ರೀತಿ ಇತ್ತು, ಜೊತೆಗೆ ಅವರು ಅವರದೇ ಆದಂಥ Mr. Clean ಎಂಬ ಹೆಸರನ್ನು ಸಹ ಗಳಿಸಿದ್ದರು. ಅವರ ಬಗ್ಗೆ ಭಾರತ ದೇಶದಲ್ಲಿ ಇದ್ದಂಥ ಒಳ್ಳೆಯ ಅಭಿಪ್ರಾಯವನ್ನು ಸಹ ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಸನ್ಮಾನ್ಯ ಸಿದ್ದರಾಜುರವರು ನಿಧನ ಹೊಂದುತ್ತಾರೆಂದು ನಾವ್ಯಾರೂ ನಿರೀಕ್ಷೆ ಮಾಡಿರಲಿಲ್ಲ. ಸಿದ್ದರಾಜುರವರು ಇಷ್ಟು ಬೇಗ ನಮ್ಮನ್ನು ಅಗಲಿ ಹೋಗುತ್ತಾರೆಂಬ ನಂಬಿಕೆ ನಮಗ್ಯಾರಿಗೂ ಇರಲಿಲ್ಲ. ಅವರು ಸಣ್ಣ ವಯಸ್ಸಿನಲ್ಲಿಯೇ ವಿಧಾನ ಪರಿಷತ್ತಿನ ಸದಸ್ಯರಾಗಿ ಮತ್ತು ವಿಧಾನಸಭೆಯ ಸದಸ್ಯರಾಗಿದ್ದರು. ಅವರು ನಮ್ಮನ್ನೆಲ್ಲ ಅಗಲಿದ್ದಾರೆ.

ಅವರ ಪತ್ನಿ ಸಹ ವಿಧಾನಸಭಾ ಸದಸ್ಯರಾಗಿ ಆರಿಸಿ ಬಂದಿರುವುದು ನಮಗೆಲ್ಲ ಹರ್ಷವನ್ನುಂಟುಮಾಡಿದೆ. ಪ್ರೊ. ಲಕ್ಷ್ಮೀಸಾಗರ್‌ರವರು ಒಬ್ಬ bachelor ಆಗಿದ್ದರು. ಅವರು ಮಂತ್ರಿ ಪದವಿಯನ್ನು ಅಲಂಕರಿಸಿದಾಗ ಅವರು ಮಾಡಿದ ಕೆಲಸಗಳು, ಅವರ ನಿಷ್ಠೆ, ಅವರ ಪ್ರಾಮಾಣಿಕತೆ, ಅವರಿಗೆ ಸಮಾಜದ ಬಗ್ಗೆ ಇದ್ದಂಥ ಕಾಳಜಿ ಬಗ್ಗೆ ನಮಗೆಲ್ಲರಿಗೂ ಸಹ ಹರ್ಷವಿದೆ. ಶ್ರೀ ಹೆಚ್. ಎನ್. ನಂಜೇಗೌಡರು ಅರಕಲಗೂಡಿನಲ್ಲಿ ಹಳ್ಳಿಯಲ್ಲಿ ಜನಿಸಿ ಕರ್ನಾಟಕದ ಎಲ್ಲಾ damಗಳ ವಿಚಾರಗಳನ್ನು ಅಂಕಿ ಅಂಶಗಳ ಸಹಿತ ಅವರು ತಮ್ಮ ತಲೆಯಲ್ಲಿ ಇಟ್ಟುಕೊಂಡಿದ್ದರು. ಜೊತೆಗೆ, ಯಾವಾಗ ಹೋದರೂ ಸಹ ಅವರನ್ನು ಭೇಟಿ ಮಾಡಿದಾಗ, ಹಳೆಯ ಸ್ನೇಹಿತರನ್ನು ಅವರು ಮರೆಯುತ್ತಿರಲಿಲ್ಲ ಮತ್ತು ಹಳೆಯ ನೆನಪುಗಳನ್ನು ಮೆಲುಕು ಹಾಕುತ್ತಿದ್ದರು. ಇಷ್ಟು ಬೇಗ ನಂಜೇಗೌಡರು ಸಹ ಅಗಲುತ್ತಾರೆಂದು ನಿರೀಕ್ಷಿಸಿರಲಿಲ್ಲ. ನೀರಾವರಿ ಬಗ್ಗೆ ಇನ್ನೂ ಹಲವಾರು ಮಾಹಿತಿಗಳನ್ನು ನಾವು ಪಡೆದುಕೊಳ್ಳಬಹುದಿತ್ತು. ಅವರು ಇಷ್ಟು ಬೇಗ ನಮ್ಮನ್ನು ಅಗಲಿದ್ದಕ್ಕೆ ಅವರಿಗೆ ಸಂತಾಪ ಸೂಚಿಸುತ್ತೇನೆ. ಹಾಸನದ ಪಕ್ಕದ ಜಿಲ್ಲೆಯಾದ ಚಿಕ್ಕಮಗಳೂರಿನ ಡಿ.ಸಿ. ಶ್ರೀಕಂಠಪ್ಪನವರು ಮೂರು ಬಾರಿ ಲೋಕಸಭಾ ಸದಸ್ಯರಾಗಿದ್ದರು. ಆಗ ಆ ಜಿಲ್ಲೆಯ ಜನ ಇಂಥ ಒಬ್ಬ ಸರಳ ವ್ಯಕ್ತಿತ್ವದ ಸಂಸದ ಸಿಕ್ಕುವುದಿಲ್ಲ ಎಂದು ಹೇಳುತ್ತಿದ್ದರು. ಏಕೆಂದರೆ, ಅವರಿಗೆ ಬಡವರ ಬಗ್ಗೆ, ರೈತರ ಬಗ್ಗೆ ಜೊತೆಗೆ ಕೃಷಿ ಬಗ್ಗೆ ಇದ್ದಂಥ ಆಸಕ್ತಿಯೇ ಇದಕ್ಕೆ ಮೂಲಕ ಕಾರಣ ಎನ್ನುವ ಅಂಶವನ್ನು ಹೇಳುತ್ತಾ, ಜೊತೆಗೆ ನಮ್ಮ ರಾಜ್ಯದ ಅನೇಕ ನಾಯಕರು ಅಗಲಿದ್ದಾರೆ. ಜೊತೆಗೆ ಮುಂಬೈ ಭಯೋತ್ಪಾದನೆ ಘಟನೆ ನಮಗೆಲ್ಲ ಆಶ್ಚರ್ಯ ತರುವ ಘಟನೆಯಾಗಿದೆ. ಆ ಘಟನೆಯಲ್ಲಿ ಮಿಲಿಟರಿ ಕಮಾಂಡೋಗಳಿದ್ದರು. ಅಶೋಕ್ ಕಾಮ್ಟೆ, ಹೇಮಂತ್ ಕರ್ಕರೆ, ಸಂದೀಪ್ ಉನ್ನಿಕೃಷ್ಣನ್ ಇವರೆಲ್ಲ ದೇಶಕ್ಕಾಗಿ ತಮ್ಮ ಪ್ರಾಣ ತ್ಯಜಿಸಿದ್ದಾರೆ. ಇವರನ್ನೆಲ್ಲ ನಾವು ಸ್ಮರಿಸಬೇಕಾಗಿದೆ. ಇವರ ಮನೆಯವರಿಗೆ, ವಂಶಸ್ಥರಿಗೆ, ಜೊತೆಗೆ ಇವರನ್ನು ನಂಬಿದವರಿಗೆ, ಮನೆಯವರಿಗೆ ನೆಮ್ಮದಿಯನ್ನು ಕೊಡಲಿ ಎಂದು ದೇವರನ್ನು ಕೋರುತ್ತಾ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ಸನ್ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ನೆ.ಲ. ನರೇಂದ್ರ ಬಾಬು (ಮಹಾಲಕ್ಷ್ಮಿ ಲೇಔಟ್ ಕ್ಷೇತ್ರ) :- ಸನ್ಮಾನ್ಯ ಅಧ್ಯಕ್ಷರೇ, ಹುಟ್ಟು ಆಕಸ್ಮಿಕ, ಸಾವು ನಿಶ್ಚಿತ, ಹುಟ್ಟು ಸಾವಿನ ನಡುವೆ ಏನು ಮಾಡುತ್ತೇವೆ ಎನ್ನುವುದೇ ಶಾಶ್ವತ ಎನ್ನುವವರು ಕೆಲವು ಜನರು ಇವತ್ತು ನಮ್ಮನ್ನಗಲಿದ್ದಾರೆ. ಇವತ್ತೇನು ತಾವು ಸಂತಾಪ ಸೂಚನಾ ನಿರ್ಣಯವನ್ನು

ಮಂಡಿಸಿದ್ದೀರಿ, ಇದಕ್ಕೆ ನಾನು ನನ್ನ ಅಭಿಮತವನ್ನು ವ್ಯಕ್ತಪಡಿಸುತ್ತೇನೆ. ಕೆಲವು ಜನರು ಹುಟ್ಟಿ ಸತ್ತಿರುತ್ತಾರೆ. ಕೆಲವರು ಸತ್ತ ನಂತರವೂ ಹುಟ್ಟಿರುತ್ತಾರೆ. ನಮ್ಮ ಜೊತೆ ಇರುತ್ತಾರೆ. ಅವರು ನಮ್ಮನ್ನು ಪ್ರತಿನಿತ್ಯ ಎಚ್ಚರಿಸುತ್ತಿರುತ್ತಾರೆ ಎನ್ನುವುದಕ್ಕೆ ವಿ.ಪಿ. ಸಿಂಗ್‌ರವರಿರಬಹುದು, ಲಕ್ಷ್ಮೀಸಾಗರ್‌ರವರು ಇರಬಹುದು, ನಂಜೇಗೌಡರು, ಮೆರಾಜುದ್ದೀನ್ ಪಟೇಲ್‌ರವರಿರಬಹುದು, ವಿಶ್ವನಾಥ್ ರೆಡ್ಡಿ ಮುದ್ನಾಳ್ ಇರಬಹುದು, ಸಿದ್ದರಾಜುರವರಿರಬಹುದು ಮತ್ತು ಮುಂಬೈ ಭಯೋತ್ಪಾದನೆ ಘಟನೆಯಲ್ಲಿ ಹುತಾತ್ಮರಾದ ಸೈನಿಕರಿರಬಹುದು ಇವರು ಕಾರಣ ಎಂದು ಹೇಳಬಯಸುತ್ತೇನೆ. ವಿ.ಪಿ.ಸಿಂಗ್‌ರವರು ಪ್ರಧಾನಿಯಾಗಿದ್ದ ದಿನಗಳು ಮತ್ತು ಅದಕ್ಕೆ ಮುಂಚೆ ಕೆಲವು ಕಾಲ ಅವರ ಜೊತೆ ಕಳೆಯುವ ಅವಕಾಶ ಒಬ್ಬ ಯುವಕನಾಗಿದ್ದಾಗ ನನಗೆ ಸಿಕ್ಕಿತ್ತು. ಬಹುಶ: ಅಂಥ ಉನ್ನತ ಮಟ್ಟದಲ್ಲಿದ್ದರೂ ಸಹ ಅವರಲ್ಲಿದ್ದ ಸರಳತೆ, ಯುವಕರ ಬಗ್ಗೆ, ಈ ದೇಶದ ಬಗ್ಗೆ ಅವರಿಗಿದ್ದ ಪರಿಕಲ್ಪನೆ ನೋಡಿದರೆ ನಿಜವಾಗಿಯೂ ನಾವೆಲ್ಲ ಒಂದು ರೀತಿಯಾಗಿ ಅವರ ಜೀವನವನ್ನು ಆದರ್ಶವಾಗಿ ರೂಢಿಸಿಕೊಳ್ಳಬೇಕೆನ್ನುವ ಸ್ಫೂರ್ತಿ ಬರುತ್ತದೆ. ಬಹುಶ: ಹಿಂದುಳಿದ ವರ್ಗ ಎನ್ನುವ ಪದಗಳನ್ನು ಬಳಸುತ್ತಿದ್ದ ಕಾಲದಲ್ಲಿ ಇಡೀ ದೇಶದಲ್ಲಿ ಬಹಳ ನೇರವಾಗಿ ಮಂಡಲ್ ವರದಿಯನ್ನು ಅನುಷ್ಠಾನದಲ್ಲಿ ತರಲಿಕ್ಕೆ ಧೈರ್ಯವಾಗಿ ಹೆಜ್ಜೆ ಇಟ್ಟಂಥ ಮಹಾನ್ ವ್ಯಕ್ತಿತ್ವ ವಿ.ಪಿ.ಸಿಂಗ್‌ರವರದಾಗಿತ್ತು. IIT, IIM , IISc ಇರಬಹುದು, ಎಲ್ಲದಲ್ಲಿಯೂ ಸಹ ಹಿಂದುಳಿದ ವರ್ಗದವರಿಗೆ ಸಮಾನ ಅವಕಾಶ ಸಿಗಬೇಕೆನ್ನುವ ದೂರ ದೃಷ್ಟಿಯಿಂದ, ಶೈಕ್ಷಣಿಕವಾಗಿ ನೆಲೆಗಟ್ಟನ್ನು ಭದ್ರ ಮಾಡಲು ಉನ್ನತ ಶಿಕ್ಷಣಕ್ಕೆ ಕೇಂದ್ರ ಸರ್ಕಾರ ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದೆ. ಅದರಲ್ಲಿಯೂ ಸಹ ಹಿಂದುಳಿದ ವರ್ಗದವರಿಗೆ ಅವಕಾಶ ಸಿಗಬೇಕೆಂದು ಅವರು ಬಹಳ ನೇರವಾಗಿ ಪ್ರತಿಪಾದಿಸಿದರು. ರಾಜಕೀಯ ಕ್ಷೇತ್ರದಲ್ಲಿ ಮಿಂಚಿನ ಬಳ್ಳಿಯಾಗಿ ಬಂದು ರಾರಾಜಿಸಿದ ವಿ.ಪಿ. ಸಿಂಗ್‌ರವರು ಇಂದು ನಮ್ಮೊಡನೆ ಇಲ್ಲ. ಪ್ರೊ. ಎ. ಲಕ್ಷ್ಮೀಸಾಗರ್‌ರವರ ಒಡನಾಡಿಯಾಗಿ ಕೆಲಸ ಮಾಡುವ ಅವಕಾಶ ನನಗೆ ನನ್ನ ಬಾಲ್ಯದಲ್ಲಿ ಸಿಕ್ಕಿತ್ತು. ಗಾಂಧಿನಗರದ outhouse ಮಹಡಿಯಲ್ಲಿ ಅವರು ವಾಸವಿದ್ದ ದಿನಗಳಲ್ಲಿ ಅವರ ಜೊತೆ ಹಲವಾರು ಚರ್ಚೆಗಳಲ್ಲಿ, ಹೋರಾಟಗಳಲ್ಲಿ ಭಾಗವಹಿಸುವ ಅವಕಾಶ ನನಗೆ ಸಿಕ್ಕಿತ್ತು. ಅವರಲ್ಲಿದ್ದ ಸರಳತೆ, ಯುವಕರ ಮೇಲೆ ಅವರಿಗಿದ್ದ ಪ್ರೀತಿ ಮತ್ತು ಜೊತೆಯಲ್ಲಿ ತೆಗೆದುಕೊಂಡು ಹೋಗುವ ಮುಂದಾಳತ್ವ ಕಾಣಬಹುದು. ಬೆಂಗಳೂರಿನಲ್ಲಿ ಬಹಳಷ್ಟು ಕ್ರಿಯಾಶೀಲರಾಗಿ, ಬಹುಶ: ಜನಸಾಮಾನ್ಯರ ಬಗ್ಗೆ ಅರಿತಂಥ ಮಹಾನ್ ವ್ಯಕ್ತಿಗಳಲ್ಲಿ ಇವರು ಸಹ ಒಬ್ಬರು. ಅವರು

ಒಂದು ರೀತಿ ಜ್ಞಾನ ಸಾಗರವಾಗಿದ್ದರೂ ಸಹ ಅವರು ಎಂದೂ ಎಲ್ಲರ ಜೊತೆಯಲ್ಲಿ ನೇರವಾಗಿ ಹಂಚಿಕೊಳ್ಳುವ ಸ್ವಭಾವವುಳ್ಳವರಾಗಿದ್ದರು. ಏನೋ ಬಂದಿದ್ದೀಯಾ, ಏನು ಮಾಡುತ್ತಿದ್ದೀಯ ಎಂದು ಬಹಳ ನೇರವಾಗಿ ಕೇಳುತ್ತಿದ್ದರು. ಏಕೋ ಸಮಯ ವ್ಯರ್ಥ ಮಾಡುತ್ತಿದ್ದೀಯಾ? ಏನಾದರೂ ಮಾಡು, ಕಲಿ, ಅಭ್ಯಾಸ ಮಾಡು ಎಂದು ಪುಸ್ತಕವನ್ನು ಕೊಡುತ್ತಿದ್ದರು. ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ, ಬಹುಶ: ಯುವಕರಿಗೆ ಅವರು, ನೀವೇ ಮುಂದಿನ ಭವಿಷ್ಯ ಕಣ್ರೋ, ಚೆನ್ನಾಗಿ ವಿಷಯವನ್ನು ತಿಳಿದುಕೊಳ್ಳಬೇಕೆಂದು ಒತ್ತಿ ಒತ್ತಿ ಹೇಳುತ್ತಿದ್ದರು. ಇವತ್ತು ಅವರು ಬದುಕಿಲ್ಲ. ಅವರು ಬಹಳ ಶಿಸ್ತಿನ ಸಿಪಾಯಿಯಾಗಿ ನುಡಿ ಮತ್ತು ನಡೆಯಲ್ಲಿ ಏಕವಾಗಿರುವುದನ್ನು ಅವರಲ್ಲಿ ಕಾಣುಬಹುದಿತ್ತು. ಕೆಲವರು ಹೇಳುತ್ತಾರೆ, ಟೀಚ್ ಮಾಡುತ್ತಾರೆ ಆದರೆ practice ಮಾಡುವುದಿಲ್ಲ. ನಂಜೇಗೌಡರು ಬಹಳ ನೇರ ನುಡಿಯ ಮತ್ತು ಸರಳ ವ್ಯಕ್ತಿಯಾಗಿದ್ದರು. ಆಟದ ಮೈದಾನದ ಸಲುವಾಗಿ ರಾಜಾಜಿನಗರದಲ್ಲಿ ಒಂದು ದೊಡ್ಡ ಹೋರಾಟ ಪ್ರಾರಂಭವಾಗಿತ್ತು. ಆಗ ಇವರು ಶಾಸಕರಾಗಿದ್ದರು. ಏನಾದರೂ ಮಾಡಿ ಇದರ ಬಗ್ಗೆ ಧ್ವನಿ ಎತ್ತಬೇಕೆಂದು ಅವರ ಹತ್ತಿರ ಹೋದಾಗ ಅವರು ಬಹಳ ತಾಳ್ಮೆಯಿಂದ ಎಲ್ಲಾ ವಿಚಾರವನ್ನೂ ಸಂಗ್ರಹಿಸಿ ವಿಧಾನಸಭೆಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸುತ್ತೇನೆಂದು ಹೇಳಿದರು. ಹೇಗಾದರೂ ಮಾಡಿ ಆ ಆಟದ ಮೈದಾನವನ್ನು ಉಳಿಸಬೇಕೆಂದು ಪ್ರಯತ್ನಿಸಿದರು. ಯಾರೇ ಹೋದರೂ ಸಹ ಈ ವಿಷಯ ನನ್ನ ಕ್ಷೇತ್ರಕ್ಕೆ ಸಂಬಂಧಪಡುವುದಿಲ್ಲವೆಂದು ಅವರು ಹೇಳುತ್ತಿರಲಿಲ್ಲ. ಆ ವಿಷಯಕ್ಕೆ ಅವರು ಸ್ಪಂದಿಸುತ್ತಿದ್ದರು. ನೆಲ, ಜಲ, ನುಡಿ ಮತ್ತು ಗಡಿ ಎಲ್ಲದರ ಬಗ್ಗೆಯೂ ಸಹ ಬಹಳ authentic ಆಗಿ, authoritative ಆಗಿ ಮಾತನಾಡಲಿಕ್ಕೆ ಇದ್ದಂಥ ಒಬ್ಬ ವ್ಯಕ್ತಿಯನ್ನು ನಾವು ಕಳೆದುಕೊಂಡಿದ್ದೇವೆ. ಮಾನ್ಯ ಡಿ.ಕೆ. ಶಿವಕುಮಾರ್‌ರವರು ಹೇಳಿದ ಹಾಗೆ ಖಂಡಿತವಾಗಿಯೂ ನಾನು ಮಾನ್ಯ ಮಂಜುರವರನ್ನು ಕೇಳುತ್ತಿದ್ದೆ. ಅವರು ಮಾಡಿದ್ದ ಭಾಷಣಗಳ ಸಂಕಲನ ನಿಜವಾಗಿಯೂ ಬೇಕು. ಅವರು ಹೇಳುತ್ತಿದ್ದ ಮಾಹಿತಿಗಳು ನಿಜವಾಗಿಯೂ ಸಹ ನಮ್ಮ ಮುಂದಿನ ಪೀಳಿಗೆಗೆ ಮತ್ತು ಇಂದಿನ ಪೀಳಿಗೆಗೆ ಬೇಕು. ಜಲ ವಿವಾದಗಳು, ನದಿ ವಿವಾದಗಳು ಬಂದಾಗ ಅದರ ಬಗ್ಗೆ ಅವರು authentic figures ಕೊಡುತ್ತಿದ್ದರು. Catchment ನಿಂದ ಹಿಡಿದು ಪ್ರತಿಯೊಂದರ ಬಗ್ಗೆಯೂ ಅವರು ಹೇಳುತ್ತಿದ್ದರು. ಬಹುಶ: ಅದನ್ನು document ಮಾಡಿ, ಒಂದು ಪೀಠವನ್ನು ಸ್ಥಾಪನೆ ಮಾಡಿ ಮುಂದಿನ ಪೀಳಿಗೆಗೆ ಒಂದು ಸ್ಮಾರಕವಾಗಿ ಮಾಡುವುದು

ಅತ್ಯಗತ್ಯವಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ವಿಶ್ವನಾಥ ರೆಡ್ಡಿ ಮುದ್ನಾಳ್‌ರವರು ದಾಡಿ ಬಿಟ್ಟಿದ್ದನ್ನು ನೋಡಿದಾಗ ಏಕೆ ಈ ರೀತಿ ಗಡ್ಡ ಬಿಟ್ಟಿದ್ದಾರೆ ಎಂದೆನಿಸುತ್ತಿತ್ತು. ಅವರಲ್ಲಿದ್ದ ಛಲ ಮೆಚ್ಚತಕ್ಕದ್ದು. ಅವರು ಗಡ್ಡವನ್ನು ತೆಗೆದಿದ್ದಾಗ ತಲೆ ಮೇಲೆ ಸಾಯಿಬಾಬ ತರಹ ಬಟ್ಟೆ ಕಟ್ಟಿಕೊಳ್ಳುತ್ತಿದ್ದರು. ಲೋಕಾಯುಕ್ತಕ್ಕೆ ಸಂಬಂಧಪಟ್ಟಹಾಗೆ ಒಂದು ಸಲ ಗಾಂಧಿ ಪ್ರತಿಮೆ ಬಳಿ ಧರಣಿ ಕುಳಿತಿದ್ದೆವು. ಅವರು ಬಹಳ ನೇರವಾಗಿ ಹೇಳಿದರು, ಯುವಕರ ಬಗ್ಗೆ, ಸುಭಾಷ್‌ಚಂದ್ರ ಬೋಸ್ ರವರ ಬಗ್ಗೆ ವಿಚಾರಧಾರೆಗಳನ್ನು ಅವರು ಹೇಳುತ್ತಿದ್ದುದ್ದನ್ನು ನೋಡುತ್ತಿದ್ದರೆ, ಎಂಥ ಜ್ಞಾನಗಣಿ ಮತ್ತು ಅಪಾರ ಅನುಭವದ ಗಣಿಯುಳ್ಳವರಾಗಿದ್ದವರನ್ನು ನಾವು ಕಳೆದುಕೊಂಡಿದ್ದೇವಲ್ಲಾ ಎಂದು ನನಗೆ ನಿಜವಾಗಿಯೂ ಮನಸ್ಸಿಗೆ ನೋವಾಗುತ್ತದೆ. ಆ ಎಲ್ಲವನ್ನೂ ಸ್ಮರಣೆ ಮಾಡಿಕೊಳ್ಳುತ್ತೇನೆ. ಇಂಥ ಎಲ್ಲ ಮಹಾನುಭಾವರ ಸ್ಮರಣೆಗೆ ನೆನಪಾಗುವುದೇನೆಂದರೆ,

ಮಣಿಯದಿಹ ಮನವೊಂದು
ನಿಜದ ನೇರಕ್ಕೆ ನಡೆವ ನಿಶ್ಚಲತೆಯೊಂದು
ಮರುಕಕ್ಕೆ ಪ್ರೇಮಕ್ಕೆ ಚಿರತೆರೆದ ಎದೆಯೊಂದು
ಅಭಿ ಅಭಿ ಎಂಬ ಮಂತ್ರಕ್ಕೆ ಹೆಜ್ಜೆ ಹಾಕಿದರೆ

ಅಂದರೆ ಎಲ್ಲಾ ವಿಶಾಲ ಗುಣಗಳನ್ನು ಒಳಗೊಂಡ ಮಹಾನುಭಾವರನ್ನು ನಾವು ಕಳೆದುಕೊಂಡಿದ್ದೇವೆ. ಎಲ್ಲರೂ ಸಾಯಬೇಕು, ಆದರೆ, ಹಂಸಕ್ಷೀರ ನ್ಯಾಯದಂತೆ ಅವರಲ್ಲಿದ್ದಂಥ ಗುಣಗಳನ್ನು ಗ್ರಹಣ ಮಾಡದೆ ಅವುಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಲು ಸ್ಫೂರ್ತಿ ತರುವ ದಿಕ್ಕಿನಲ್ಲಿ ಹೆಜ್ಜೆ ಇಟ್ಟಾಗ ಮಾತ್ರ ಅವರ ಆತ್ಮಕ್ಕೆ ನಿಜವಾದ ಶಾಂತಿ ದೊರಕುತ್ತದೆ ಮತ್ತು ಈ ದೇಶದ, ಸಮಾಜದ ಬಗ್ಗೆ ಅವರ ಪರಿಕಲ್ಪನೆ ಏನಿತ್ತು ಅದು ಸಾಕಾರವಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮುಂಬೈಯಲ್ಲಿ ದಾಳಿಯಾದಾಗ ನನಗೆ ಅನಿಸಿದ್ದೇನೆಂದರೆ, ಅಂದು ಆಂಗ್ಲರು ಇಂದು ಉಗ್ರರು ಮತ್ತೊಂದು ಸ್ವಾತಂತ್ರ್ಯ. ಈ ಪ್ರಶ್ನೆ ಇರುವುದು ಭಾರತ ದೇಶದಲ್ಲಿ ಮಾತ್ರವಲ್ಲ ಇಡೀ ವಿಶ್ವದಲ್ಲಿದೆ. ಇಡೀ ವಿಶ್ವದಲ್ಲಿ ಬಹುಶ: ಮುಂದಿನ ದಿನಗಳಲ್ಲಿ threat ಆಗುವುದಾದರೆ ಬಹುಶ: ಈ ಉಗ್ರಗಾಮಿತನದಿಂದ ಎಂದು ಹೇಳುತ್ತೇನೆ. ಈ ದೇಶದಲ್ಲಿ ಇಡೀ ವಿಶ್ವದ ಮನುಕುಲವೇ ಧರ್ಮದ ಆಧಾರದ ಮೇಲೆಯೋ, ಅಂಥ ಜ್ಞಾನದ ಆಧಾರದ ಮೇಲೆಯೋ ಭೌಗೋಳಿಕವಾಗಿ ಇವತ್ತು demarcation ಆಗಿದ್ದರೂ

ಸಹ ಮಾನಸಿಕವಾಗಿ demarcation ಆಗಿರತಕ್ಕಂಥ ಆತಂಕಕಾರಿ ಬೆಳವಣಿಗೆಯನ್ನು ಕಾಣುತ್ತಿದ್ದೇವೆ. ಈ ದಿಕ್ಕಿನಲ್ಲಿ ಬಹುಶ: ನಾವು ಗಂಭೀರವಾದ ಚಿಂತನೆ ಮಾಡಬೇಕು. ರಾಜೀವ ಗಾಂಧಿಯವರು 25 ವರ್ಷಗಳ ಹಿಂದೆಯೇ ಅಂದು ಸ್ವಾಮಿ ವಿವೇಕಾನಂದರ ಜನ್ಮ ದಿನಾಚರಣೆಯನ್ನು ರಾಷ್ಟ್ರೀಯ ಯುವ ದಿನ ಎಂದು ಘೋಷಣೆ ಮಾಡಿದ್ದರು. ಅವರು ಅಂದು ಯುವಜನ ಸಜ್ಜಾಗಬೇಕೆಂದು ಬಹಳ ದೂರದೃಷ್ಟಿಯಿಂದ ಹೇಳಿದ್ದರು. ಇಡೀ ಮನುಕುಲಕ್ಕೆ ಅವರು ಕರೆ ಕೊಟ್ಟರು. ಕಾಕತಾಳೀಯವಾಗಿ ಯಾವುದೇ ಪೂರ್ವಗ್ರಹ ಪೀಡಿತರಾಗದೇ ಯುವ ಜನಾಂಗ ಮಾನಸಿಕವಾಗಿ ಸಹಿಷ್ಣುತೆ, ಕೋಮು ಸೌಹಾರ್ದತೆಯನ್ನು ಇಡೀ ವಿಶ್ವಕ್ಕೆ ನಾವು ಪರಿಪಾಠವನ್ನು ಕೊಡದೇ ಹೋದರೆ ಮುಂದಿನ ದಿನಗಳಲ್ಲಿ ನಾವು ಎಷ್ಟೇ ಪ್ರಗತಿ ಹೊಂದಿದರೂ ಸಹ ಎಲ್ಲೋ ಒಂದು ಕಡೆ ಯುವಜನಾಂಗವನ್ನು ದಿಕ್ಕುತಪ್ಪಿಸುತ್ತಿರುವಂಥ, ಅವರ brain wash ಮಾಡಿ emotional ಆಗಿ ಎಲ್ಲೋ ಒಂದು ಕಡೆ ದಿಕ್ಕು ತಪ್ಪಿಸಿ ಇಡೀ ವಿಶ್ವವೇ ಒಂದು ಸಲ ನಾಶವಾಗುವ ದಿಕ್ಕಿನಲ್ಲಿರುವಾಗ ಅದು ಆಗದ ರೀತಿಯಲ್ಲಿ ನಾವು ಚಿಂತನೆ ಮಾಡಬೇಕು. ಆಗ ಮಾತ್ರ ಹೇಮಂತ್ ಕರ್ಕರೆ, ವಿಜಯ್ ಸಾಲಸ್ಕರ್, ಅಶೋಕ್ ಕಾಮ್ಟೆ, ಮೇಜರ್ ಸಂದೀಪ್ ಉನ್ನಿಕೃಷ್ಣನ್ ಮತ್ತು ಅವರ ಜೊತೆ ಸತ್ತ ಹಲವಾರು ಸೈನಿಕರು, ಪೊಲೀಸ್ ಸಿಬ್ಬಂದಿ, ರೈಲ್ವೆ ಕಾರ್ಮಿಕರ ಆತ್ಮಕ್ಕೆ ಸಾಂತ್ವನ ಹೇಳಿದ ಹಾಗೆ ಆಗುತ್ತದೆ ಮತ್ತು ಇನ್ನೂ ಆಸ್ಪತ್ರೆಯಲ್ಲಿ ನರಳುತ್ತಿರುವ ಹಲವಾರು ಪೊಲೀಸ್ ಸಿಬ್ಬಂದಿ, ಕಾರ್ಮಿಕರ ಹೃದಯಕ್ಕೆ ಸಾಂತ್ವನ ಹೇಳಿದ ಹಾಗೆ ಆಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಬಹಳ ದೂರದೃಷ್ಟಿಯಿಂದ ನಾವು ಈ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ವಿಶ್ವಕ್ಕೆ ಒದಗಿ ಬಂದಿರುವ ದೌರ್ಭಾಗ್ಯದ ಬಗ್ಗೆ ಸಂಘಟಿತರಾಗಬೇಕು. NDTV ನೋಡುವಾಗ ನನ್ನ ಮನಸ್ಸಿಗೆ ನೋವಾಗುತ್ತಿತ್ತು. ಪಾಕಿಸ್ತಾನ ಒಬ್ಬ ಮಂತ್ರಿ ಉಗ್ರಗಾಮಿಗಳನ್ನು ನಾವು ಬಿಟ್ಟುಕೊಡುವುದಿಲ್ಲವೆಂದು ಹೇಳಿದಾಗ ಇಡೀ ವಿಶ್ವವೇ ತಲೆತಗ್ಗಿಸುವಂತಾಯಿತು. ವಿಶ್ವ ಭ್ರಾತೃತ್ವ ಎಲ್ಲಿ ಹೋಯಿತು ಎಂದು ನೋವಾಗುತ್ತಿತ್ತು. ಈ ದಿಕ್ಕಿನಲ್ಲಿ ನಾವು ಚಿಂತನೆ ಮಾಡಬೇಕು. ಅಂದು ಆಂಗ್ಲರು, ಇಂದು ಉಗ್ರರು ಮತ್ತೊಂದು ಸ್ವಾತಂತ್ರ್ಯ ಎನ್ನುವ ರೀತಿಯಲ್ಲಿ ಈ ಉಗ್ರಗಾಮಿಗಳು ಮುಂಬೈ ಮೇಲೆ ಮಾಡಿರುವ ದಾಳಿ ವಿಶ್ವದ ಮನುಕುಲದ ಮೇಲೆ ನಡೆದ ದಾಳಿ, ಇದನ್ನು ಗಂಭೀರವಾಗಿ ಪರಿಗಣಿಸುತ್ತಾ 26ನೇ ನವೆಂಬರ್ ಘಟನೆಯನ್ನು ಚಿಂತನೆ ಮಾಡುತ್ತಾ ಮುಂದಿನ ದಿನಗಳತ್ತ ಹೆಜ್ಜೆಯನ್ನಿಡಬೇಕು, ನಮ್ಮ ಯುವಜನಾಂಗವನ್ನು ಸಜ್ಜುಮಾಡಬೇಕು,

ಯಾವುದೇ ರೀತಿಯಾಗಿ brain wash ಮಾಡಿ ಅವರ ದಿಕ್ಕು ತಪ್ಪಿಸುವುದು ಆಗಬಾರದು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಅಗಲಿದ ಎಲ್ಲಾ ನಾಯಕರ ಆತ್ಮಕ್ಕೆ ಶಾಂತಿಯನ್ನು ಕೋರುತ್ತಾ, ಅಗಲಿದವರ ನೋವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬವರ್ಗದವರಿಗೆ ಕೊಡಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ.

ಮಾನ್ಯ ಮೆರಾಜುದ್ದೀನ್ ಪಟೇಲ್ ರವರ ಕುಟುಂಬಕ್ಕೆ ಆಗಿರತಕ್ಕಂಥ ನೋವನ್ನು ಹಾಗೂ ಅವರು ಕೊನೆಯ ಕ್ಷಣದಲ್ಲಿ ಅನುಭವಿಸಿದ ತೊಂದರೆಯ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳು ಗಮನಹರಿಸಿ, ಅವರ ಕುಟುಂಭ ವರ್ಗದವರಿಗೆ ರಕ್ಷಣೆ ಕೊಡುವುದರ ಜೊತೆಗೆ ಅವರ ಕುಟುಂಭಕ್ಕೆ ಧನ ಸಹಾಯುವನ್ನು ಮಾಡಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು :- ಸಂತಾಪ ಸೂಚನೆಯ ಮೇಲಿನ ಚರ್ಚೆಯನ್ನು ಈಗ ಮುಗಿಸುತ್ತೇನೆ. ದಿವಂಗತರಿಗೆ ಗೌರವ ಸೂಚಿಸುವ ಸಲುವಾಗಿ ಮಾನ್ಯ ಸದಸ್ಯರೆಲ್ಲರು ಎದ್ದು ನಿಂತು ಒಂದು ನಿಮಿಷ ಕಾಲ ಮೌನವನ್ನಾಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಮೃತರ ಗೌರವಾರ್ಥ ಸದನದ ಎಲ್ಲಾ ಮಾನ್ಯ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)

ಅಧ್ಯಕ್ಷರು :- ಈ ಸದನವು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು.

2. ಪ್ರಕಟಣೆ

ವಿಷಯ :- ಶ್ರೀ ರಾಮಲಿಂಗರೆಡ್ಡಿ ಹಾಗೂ ಡಾ॥ ಜಿ ಪರಮೇಶ್ವರ ಅವರಿಗೆ ಅಧಿವೇಶನಕ್ಕೆ ಗೈರುಹಾಜರಾಗಲು ಅನುಮತಿ ನೀಡುವ ಬಗ್ಗೆ.

ಅಧ್ಯಕ್ಷರು :- ವಿಧಾನ ಸಭಾ ಸದಸ್ಯರಾದ ಡಾ॥ ಜಿ.ಪರಮೇಶ್ವರ ಹಾಗೂ ಶ್ರೀ ರಾಮಲಿಂಗಾರೆಡ್ಡಿ ಅವರು ವಿದೇಶ ಪ್ರವಾಸದಲ್ಲಿರುವುದರಿಂದ ದಿನಾಂಕ 16-01-2009 ರಿಂದ ಪ್ರಾರಂಭವಾಗಲಿರುವ ಅಧಿವೇಶನಕ್ಕೆ ಗೈರುಹಾಜರಾಗಲು ಅನುಮತಿಯನ್ನು ಕೋರಿ ಪತ್ರವನ್ನು ನೀಡಿರುತ್ತಾರೆ.